## ಅಧ್ಯಾಯ – ೧೫

# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ಪ**ಶ್ಚಿಮಘಟ್ಟದ ತಪ್ಪಲಿನ ಕರಾವಳಿ ತೀರದಲ್ಲಿರುವ ಉಡುಪಿ ಜಿಲ್ಲೆಯು ನೈಸರ್ಗಿಕ ಸಂಪತ್ತಿನ ಆಗರವಾಗಿದೆ. ಹೆಚ್ಚಿನ ಆರ್ದ್ರತೆಯಿಂದ ಕೂಡಿದ ಉಷ್ಣ ಹವಾಗುಣದ ಪರಿಣಾಮವು ಸಾರ್ವಜನಿಕ ಸ್ವಾಸ್ಥ್ಯದ ಮೇಲೆ ಯಾವುದೇ ಪ್ರಭಾವ ಬೀರದೆ ಆರೋಗ್ಯಕರವೆನಿಸಿದೆ. ಋತುಮಾನದ ಬದಲಾವಣೆಗಳಿಗನುಸಾರವಾಗಿ ಶರೀರವನ್ನು ರಕ್ಷಿಸಿಕೊಳ್ಳಲು, ಸ್ಥಳೀಯವಾಗಿ ದೊರೆಯುವ ಗಿಡಮೂಲಿಕೆಗಳ ಸಹಾಯ ಪಡೆದುಕೊಳ್ಳುವುದು ಸಾಮಾನ್ಯವಾಗಿದೆ. ಔಷಧಿ ಗುಣಗಳುಳ್ಳ ಅರಳಿ, ಆಲ, ಬಿಲ್ವ, ಅಶೋಕ, ಬ್ರಾಹ್ಮಿ, ಚಂದನ, ಹೊನ್ನೆ, ನೇರಳೆ, ನೆಲ್ಲಿ, ಈಶ್ವರಿ, ಅಳಲೆ, ಎಕ್ಕೆ, ತುಳಸಿ ಮುಂತಾದ ಸಸ್ಯಗಳು ಜಿಲ್ಲೆಯಲ್ಲಿ ವಿಪುಲವಾಗಿ ಬೆಳೆಯುತ್ತಿದ್ದು, ಜನರ ರೋಗಶಮನ ಮಾಡುವಲ್ಲಿ ಮಹತ್ವದ ಪಾತ್ರವಹಿಸಿವೆ. ಸಸ್ಯಗಳ ಸಂರಕ್ಷಣೆಗಾಗಿಯೇ ರಕ್ಷಿಸಲ್ಪಟ್ಟ ನೂರಾರು "ದೇವರ ಕಾಡು" ಹಾಗೂ ನಾಗಬನಗಳು ಜಿಲ್ಲೆಯಲ್ಲಿವೆ. ಈ ಕಾಡುಗಳು ಅಮೂಲ್ಯ ಸಸ್ಯ ಪ್ರಬೇಧಗಳನ್ನು ಹೊಂದಿವೆ. ಇವುಗಳ ಪ್ರಯೋಜನವನ್ನು ಜನರು ಪಡೆಯುತ್ತಿದ್ದು, ಯಾವುದೇ ವೆಚ್ಚವಿಲ್ಲದೆ ಕ್ಷಿಪ್ರ ಶಮನ ನೀಡಬಲ್ಲ ಗೃಹವೈದ್ಯ (ನಾಟಿ ವೈದ್ಯ), ಜನಪದ ವೈದ್ಯ, ಪದ್ಧತಿಗಳು ಬಹಳ ಹಿಂದಿನಿಂದಲೇ ಪ್ರಚಲಿತದಲ್ಲಿವೆ. ಕಟಪಾಡಿ ನಾಯಕ ಕುಟುಂಬದ ಆಯುರ್ವೇದವು ನಾಡಿನಲ್ಲಿ ಪ್ರಸಿದ್ಧಿ ಪಡೆದಿದೆ. ಈಗಲೂ ಸಹ ಬಡವ ಬಲ್ಲಿದರೆನ್ನದೆ ಜನಸಾಮಾನ್ಯರು ಇಂಥ ವೈದ್ಯಪದ್ಧತಿಗಳ ಮೇಲೆ ನಂಬಿಕೆ ಇಟ್ಟು ಅದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ.

ಪಾಶ್ಚಿಮಾತ್ಯ ವೈದ್ಯಪದ್ಧತಿಯಾದ 'ಅಲೋಪತಿ'ಯು ನಮ್ಮ ದೇಶಕ್ಕೆ ಪ್ರವೇಶಿಸುವ ಪೂರ್ವದಲ್ಲಿ ಸಹಸ್ರಾರು ವರ್ಷಗಳಿಂದಲೂ ಆಯುರ್ವೇದ ವೈದ್ಯಪದ್ಧತಿಯು ಪ್ರಚಲಿತದಲ್ಲಿದೆ. ದೇಶೀಯ ವೈದ್ಯಪದ್ಧತಿಯಾಗಿ ಶ್ರೀಮಂತ ಪರಂಪರೆಯನ್ನು ಹೊಂದಿರುವ ಆಯುರ್ವೇದವು ಜನಾನುರಾಗಿಯಾಗಿ ಬೆಳೆದುಬಂದಿದೆ. ಗಿಡಮೂಲಿಕೆಗಳ ಅಪಾರ ಜ್ಞಾನ ಪಡೆದ ಅನುಭವಿ ಆಯುರ್ವೇದ ಪಂಡಿತರು ಎಲ್ಲಾ ತರಹದ ಕಾಯಿಲೆಗಳಿಗೆ ಸತ್ವಯುತವಾದ ಮದ್ದನ್ನು ನೀಡಿ ಗುಣಪಡಿಸಬಲ್ಲ ಕೌಶಲ್ಯವನ್ನು ಪಡೆದಿದ್ದರು. ರಾಜರ ಕಾಲದಲ್ಲಿ ಪ್ರಸಿದ್ಧರಾದ ಆಯುರ್ವೇದ ಪಂಡಿತರಿಗೆ ರಾಜಾಶ್ರಯವಿದ್ದಿತು. ಗುರುಕುಲಗಳಲ್ಲಿ ಸಂಸ್ಕೃತ ಶಿಕ್ಷಣ ಪಠ್ಯಗಳಲ್ಲಿ ಆಯುರ್ವೇದದ ಬಗ್ಗೆ ಹೇಳಿಕೊಡಲಾಗುತ್ತಿತ್ತು. ಪ್ರತೀ ಹಳ್ಳಿ, ಪಟ್ಟಣಗಳಲ್ಲಿ ಆಯುರ್ವೇದವನ್ನು ವೃತ್ತಿಯಾಗಿ ಸ್ವೀಕರಿಸಿದ ಕೆಲವು ಆಯುರ್ವೇದ ಪಂಡಿತರು ಇದ್ದು, ಅವರು ಈ ವೃತ್ತಿಯನ್ನು ತಮ್ಮ ಪಾರಂಪರಿಕ ಕಸುಬನ್ನಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದರು. ನಮ್ಮ ನೆರೆಯ ರಾಜ್ಯ ಕೇರಳದ ಕೆಲವು ಆಯುರ್ವೇದ

ವೈದ್ಯ ವೃತ್ತಿಯ ಕುಟುಂಬಗಳು ಜಿಲ್ಲೆಯಲ್ಲಿ ಬಂದು ನೆಲೆಸಿ, ಇಲ್ಲಿನ ಜನರ ಆರೋಗ್ಯ ಕಾಪಾಡುವಲ್ಲಿ ನಿರತವಾಗಿದ್ದು, ಪ್ರಸಿದ್ಧವಾಗಿವೆ. ಹಾಗೆಯೇ ಜಿಲ್ಲೆಯ ಬಾರಕೂರಿಗೆ ಬಂದ ಕೇರಳದ ಕಣ್ಣಾನೂರು ಜಿಲ್ಲೆಯ ವೆಳ್ಳೂರು ಗ್ರಾಮದ 'ನಂಬಿಯಾರ್' ಕುಟುಂದವರ ಸಾಧನೆ ಹಾಗೂ ಕೊಡುಗೆ ಆಯುರ್ವೇದ ವೈದ್ಯ ಪದ್ಧತಿಗೆ ಅಪಾರವಾಗಿದೆ. ಸುತ್ತಲಿನ ಪರಿಸರದಿಂದ ದೊರೆಯುವಂತಹ ಗಿಡಮೂಲಿಕೆಗಳನ್ನು ಸಂಗ್ರಹಿಸಿ ಅವುಗಳಿಂದ ಕೇಶತೈಲ, ವಾಯುಹರ ಮಾತ್ರೆ, ವಾತಹರ ಔಷಧ, ಸಂಧಿವಾತ ನಿವಾರಕ ಲೇಪನ ಮುಂತಾದ ಗೃಹಬಳಕೆಯ ಔಷಧಿಗಳನ್ನು ತಯಾರಿಸುವ ಹಲವು ಗೃಹ ಉದ್ಯೋಗಗಳು ಜಿಲ್ಲೆಯಲ್ಲಿ ಸ್ಥಾಪನೆಗೊಂಡಿದ್ದು ಇದರಲ್ಲಿ ಕೆಲವು ಈಗ ಪ್ರಸಿದ್ಧ ಫಾರ್ಮಸಿಗಳಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಜಿಲ್ಲೆಯಲ್ಲಿ ಆಯುರ್ವೇದ ಕ್ಷೇತ್ರಕ್ಕೆ ಒಂದು ಗಟ್ಟಿಯಾದ ನೆಲಗಟ್ಟು ದೊರಕಿದೆ. ಅಲ್ಲದೆ ವೈಜ್ಞಾನಿಕ ಶಿಕ್ಷಣವನ್ನೂ ನೀಡುವಲ್ಲಿ ಈ ಜಿಲ್ಲೆ ಯಶಸ್ಸು ಸಾಧಿಸಿದೆ. ಸುಮಾರು ೧೪-೧೫ನೇ ಶತಮಾನದಲ್ಲಿ ಅಂದರೆ ಮುಸ್ಲಿಮ್ ರಾಜರ ಆಳ್ವಿಕೆಯೊಂದಿಗೆ 'ಯುನಾನಿ' ಎಂಬ ಹೊಸ ವೈದ್ಯಪದ್ಧತಿ ಬಳಕೆಗೆ ಬಂದಿತು. ಸಾಮಾನ್ಯವಾಗಿ ಪಟ್ಟಣ ಪ್ರದೇಶಗಳಲ್ಲಿ ಒಂದೆರಡು ಕಡೆಗೆ ಹಕೀಮರೆಂದು ಕರೆಯಲ್ಪಡುವ ಪಂಡಿತರು ಯುನಾನಿ ವೈದ್ಯ ಪದ್ಧತಿಯನ್ನು ಬಳಕೆಗೆ ತಂದರು. ಇಂದು ಸಹ ಜನರ ವಿಶ್ವಾಸವನ್ನು ಪಡೆದ ಈ ಪದ್ಧತಿಯನ್ನು ಕೆಲವರು ಅನುಸರಿಸಿಕೊಂಡು ಬರುತ್ತಿದ್ದಾರೆ.

ಭಾರತದಲ್ಲಿ ಬ್ರಿಟೀಷರ ಆಳ್ವಿಕೆ ಪ್ರಾರಂಭಗೊಳ್ಳುವ ಪೂರ್ವದಲ್ಲಿ, ಸಾರ್ವಜನಿಕ ಆರೋಗ್ಯ ಹಾಗೂ ವೈದ್ಯಕೀಯ ಸೇವಾ ಸೌಲಭ್ಯಗಳು ವಿರಳವಿದ್ದ ಕಾರಣ ಅಧಿಕೃತ ಅಂಕಿ-ಅಂಶಗಳಾಗಲೀ ಅಥವಾ ಇನ್ನಾವುದೇ ಅಧಿಕೃತ ದಾಖಲಾತಿಗಳಾಗಲಿ ದೊರೆಯುವುದಿಲ್ಲ. ರಾಜ ಮನೆತನದವರ ಆರೋಗ್ಯ ಹಾಗೂ ರಾಜ ವೈದ್ಯರ ಅಲ್ಪಸ್ವಲ್ಪ ಮಾಹಿತಿ ಇತಿಹಾಸದಿಂದ ತಿಳಿದುಬರುತ್ತದೆ. ವ್ಯವಸ್ಥಿತವಾದ ಆರೋಗ್ಯ ಸೇವೆಗಳು ಆಗಿನ ಕಾಲದಲ್ಲಿ ಇರಲಿಲ್ಲ. ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆ ಬಳಿಕವಷ್ಟೇ, ಹಂತ-ಹಂತವಾಗಿ ವ್ಯವಸ್ಥಿತ ವೈದ್ಯಕೀಯ ಸೇವೆಗಳು ಪ್ರಾರಂಭಗೊಂಡವು. ಭಾರತದಲ್ಲಿದ್ದ ಬ್ರಿಟೀಷ್ ಸೈನ್ಯದ ಆರೋಗ್ಯ ಕಾಪಾಡುವ ದೃಷ್ಟಿಯಿಂದ 'ಅಲೋಪತಿ' ವೈದ್ಯ ಪದ್ಧತಿ ನಮ್ಮ ದೇಶಕ್ಕೆ ಬಂದಿತು. ಪ್ರಾರಂಭದಲ್ಲಿ ಇದು ಬರೀ ರೋಗ ನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮ ಮಾತ್ರ ಆಗಿತ್ತು. ಆಗ ಉಡುಪಿ ಜಿಲ್ಲೆಯು ಮದ್ರಾಸ್ ಪ್ರಾಂತದ (*Presidency*) ಆಡಳಿತಕ್ಕೆ ಸೇರಿತ್ತು. ೧೮೫೧ರವರೆಗೆ ರೋಗ ನಿರೋಧಕ ಲಸಿಕೆ ನೀಡುವ ಕಾರ್ಯಕ್ರಮ ಕಂದಾಯ ಇಲಾಖೆಯ ಹತೋಟಿಯಲ್ಲಿತ್ತು. ನಂತರದಲ್ಲಿ ಪ್ರಾರಂಭಗೊಂಡ ವೈದ್ಯಕೀಯ ಇಲಾಖೆಗೆ ಹಸ್ತಾಂತರಗೊಂಡಿತು. ೧೮೬೪ರಲ್ಲಿ ಮದ್ರಾಸಿನಲ್ಲಿ ಸ್ಯಾನಿಟೇಶನ್ (ನೈರ್ಮಲ್ಯ) ಇಲಾಖೆ ಪ್ರಾರಂಭಗೊಂಡು ಅದು ೧೮೯೭ರ ವರೆಗೆ ಅಸ್ತಿತ್ವದಲ್ಲಿತ್ತು. ಜಿಲ್ಲಾ ಸಿವಿಲ್ ಸರ್ಜನ್‌ರನ್ನು ಜಿಲ್ಲಾ ಸ್ಯಾನಿಟರಿ ಅಧಿಕಾರಿಗಳನ್ನಾಗಿ ಮಾಡಿ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಯಿತು. ಸಾರ್ವಜನಿಕ ಆರೋಗ್ಯ ಉಪನಿರ್ದೇಶಕರನ್ನು ಇಲಾಖಾ ಮುಖ್ಯಸ್ಥರನ್ನಾಗಿ ಮಾಡಿ, ವೈದ್ಯಕೀಯ ಇಲಾಖೆಯನ್ನು ಇನ್ನೊಬ್ಬ ಉಪನಿರ್ದೇಶಕನ ಅಧೀನಕ್ಕೆ ಒಳಪಡಿಸಲಾಯಿತು. ಉಡುಪಿಯಲ್ಲಿ ೧೮೮೭ರಷ್ಟು ಹಿಂದೆಯೇ ಆಸ್ಪತ್ರೆಯು ಪ್ರಾರಂಭಗೊಂಡಿತ್ತು. ನಂತರ ೧೯೨೦ರಲ್ಲಿ ಮಕ್ಕಳ ಔಷಧಾಲಯ ಹಾಗೂ ಹೆರಿಗೆ ಆಸ್ಪತ್ರೆ ಪ್ರಾರಂಭವಾಯಿತು. ೧೮೭೩ರಲ್ಲಿ ಕುಂದಾಪುರದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಔಷಧಾಲಯ ಸ್ಥಾಪನೆಗೊಂಡು, ೧೯೨೮ರಲ್ಲಿ ಸರ್ಕಾರವು ಇದರ ಆಡಳಿತ ವಹಿಸಿಕೊಂಡಿತು.

ಜಿಲ್ಲಾ ವೈದ್ಯಕೀಯ ಮತ್ತು ನೈರ್ಮಲ್ಯಾಧಿಕಾರಿಗಳು ೧೯೪೬ರವರೆಗೆ ಸಾರ್ವಜನಿಕ ಆರೋಗ್ಯ ಸೇವಾ ಜವಾಬ್ದಾರಿಯನ್ನು ಹೊಂದಿದ್ದು ೧೯೪೬ರಲ್ಲಿ ಈ ಜವಾಬ್ದಾರಿಯನ್ನು ಜಿಲ್ಲಾ ಆರೋಗ್ಯಾಧಿಕಾರಿಗಳ ಹುದ್ದೆ ಸೃಷ್ಟಿಸಿ ಅವರಿಗೆ ನೀಡಲಾಯಿತು. ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳನ್ವಯ ಆರೋಗ್ಯ ಸೇವೆಗಳಿಗೆ ಹೆಚ್ಚು ಒತ್ತು ನೀಡಿ ಸೇವಾ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಹೆಚ್ಚಿನ ಸಿಬ್ಬಂದಿ ಹಾಗೂ ಅಧಿಕಾರ ಜವಾಬ್ದಾರಿಗಳನ್ನು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ನೀಡಿ ನಂತರ ಆ ಹುದ್ದೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾಗಿ ಮಾರ್ಪಡಿಸಲಾಯಿತು. ಕುಟುಂಬ ಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು.

ಸಾರ್ವಜನಿಕ ಆರೋಗ್ಯ ಹಾಗೂ ವೈದ್ಯಕೀಯ ಸೇವೆ, ಈ ಎರಡು ಪ್ರತ್ಯೇಕ ಇಲಾಖೆಗಳನ್ನು ೧೯೬೫ರಲ್ಲಿ ಒಂದುಗೂಡಿಸಿ, ನಿರ್ದೇಶಕರು ಆರೋಗ್ಯ ಸೇವೆಗಳು, ಎಂಬ ರಾಜ್ಯಮಟ್ಟದ ಇಲಾಖೆಯನ್ನು ಸೃಷ್ಟಿ ಮಾಡಲಾಯಿತು. ಜಿಲ್ಲಾಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಯೋಜನಾ ಅಧಿಕಾರಿಗಳ ದಕ್ಷಿಣ ಕನ್ನಡ ಜಿಲ್ಲಾ ಕಚೇರಿ ಮಂಗಳೂರಿನಲ್ಲಿ ಪ್ರಾರಂಭವಾಯಿತು. ೧೯೯೭ರಲ್ಲಿ ಉಡುಪಿ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರತ್ಯೇಕಗೊಂಡ ನಂತರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯು ಉಡುಪಿಯಲ್ಲೂ ಕಾರ್ಯಾರಂಭ ಮಾಡಿದೆ.

ಇಂದಿನ ದಿನಗಳಲ್ಲಿ ನಾವು ಕಾಣುತ್ತಿರುವ ನಗರೀಕರಣ, ಕೈಗಾರೀಕರಣ, ಪರಿಸರ ಮಾಲಿನ್ಯದಂತಹ ವ್ಯವಸ್ಥೆಗಳು ಜನರ ಸ್ವಾಸ್ಥ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು ಜನರನ್ನು ಹೊಸ ಹೊಸ ಆರೋಗ್ಯ ಸಮಸ್ಯೆಗಳಿಗೆ ಈಡು ಮಾಡಿವೆ. ಏಡ್ಸ್, ಅರ್ಬುದ, ಉಸಿರಾಟ ತೊಂದರೆ, ಅಂಧತ್ವ, ಪೋಲಿಯೋದಂತಹ ಕಾಯಿಲೆಗಳು ಜನರ ಬದುಕನ್ನು ಕಂಗೆಡಿಸಿವೆ. ಸಾಂಕ್ರಾಮಿಕಗಳಾದ ಪ್ಲೇಗ್, ಸಿಡುಬು, ಕಾಲರಾ, ಮಲೇರಿಯಾ, ಕುಷ್ಠ, ಕ್ಷಯದಂತಹ ಪಿಡುಗುಗಳು ಇನ್ನೂ ಉಳಿದಿವೆಯಾದರೂ, ನಿಯಂತ್ರಣಕ್ಕೆ ಒಳಪಟ್ಟಿವೆ. ಹೊಸ ಹೊಸ ಸಂಶೋಧನೆಗಳನ್ನು ಕೈಗೊಳ್ಳುವ ಮೂಲಕ ಸರ್ಕಾರವು ರೋಗಗಳನ್ನು ತಡೆಗಟ್ಟುವಲ್ಲಿ ತನ್ನ ಪ್ರಯತ್ನ ಮುಂದುವರೆಸಿದೆ. ಮರಣ ಪ್ರಮಾಣ ಕಡಿಮೆ ಮಾಡಿ, ಆರೋಗ್ಯವಂತ ಸಮಾಜದ ನಿರ್ಮಾಣದ ಪಥದಲ್ಲಿ ಹೊಸ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸುತ್ತಿದೆ. ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳ ಆಧುನೀಕರಣ, ಸಾಂಕ್ರಾಮಿಕಗಳ ನಿಯಂತ್ರಣ, ವೈದ್ಯಕೀಯ ಕಾಲೇಜುಗಳಲ್ಲಿ ಸಂಶೋಧನಾ ವಿಭಾಗ ತೆರೆಯುವುದು, ಆಧುನಿಕ ಚಿಕಿತ್ಸಾ ಸೌಲಭ್ಯ ಒದಗಿಸುವುದು, ಸರ್ಕಾರದ ಚಿಂತನೆಯಾಗಿದೆ. ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆರೆಯುವ ಮೂಲಕ ಗ್ರಾಮಾಂತರ ಆರೋಗ್ಯ ಸೇವಾ ವಿಸ್ತರಣೆಯನ್ನು ಪಂಚವಾರ್ಷಿಕ ಯೋಜನೆಗಳನ್ವಯ ಕೈಗೊಂಡು, ಗ್ರಾಮೀಣ ಜನತೆಯ ಆರೋಗ್ಯದ ಕಡೆ ಸರ್ಕಾರ ತನ್ನ ಕಾಳಜಿ ವ್ಯಕ್ತಪಡಿಸಿದೆ.

ವಿವಿಧ ರಾಷ್ಟ್ರೀಯ ಹಾಗೂ ಕುಟುಂಬ ಕಲ್ಯಾಣ ಸೇವೆಯನ್ನೊಳಗೊಂಡಂತೆ ರಾಜ್ಯದ ಆರೋಗ್ಯ ಕಾರ್ಯಕ್ರಮಗಳನ್ನು ಕಾರ್ಯರೂಪಗೊಳಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೂ ಇರುತ್ತಾರೆ. ಇವರ ನೆರವಿಗೆ ಜಿಲ್ಲಾ ಮಲೇರಿಯಾಧಿಕಾರಿ, ಜಿಲ್ಲಾ ಕುಷ್ಠರೋಗಾಧಿಕಾರಿ ಜಿಲ್ಲಾ ಕ್ಷಯರೋಗಾಧಿಕಾರಿ, ಜಿಲ್ಲಾ ಪ್ರಯೋಗಶಾಲಾಧಿಕಾರಿ, ವೈದ್ಯಾಧಿಕಾರಿ (ಕುಟುಂಬ ಕಲ್ಯಾಣ ಸೇವೆಗಳು, ಪ್ರಸೂತಿ–ಮಕ್ಕಳ ಆರೋಗ್ಯ ಸೇವೆಗಳು) ಮತ್ತು ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಇದ್ದಾರೆ. ಇವರು ವಿವಿಧ ಆರೋಗ್ಯ ಸೇವೆಗಳನ್ನು ಕೆಳಕಂಡ ಕಾರ್ಯಕ್ರಮಗಳ ಮೂಲಕ ಒದಗಿಸುತ್ತಿದ್ದಾರೆ.

೧) ಕನಿಷ್ಠಾವಶ್ಯಕತೆಗಳ ಯೋಜನೆಯ ಅಂಶವಾದ ಗ್ರಾಮೀಣ ಆರೋಗ್ಯ ಯೋಜನೆ ೨) ವೈದ್ಯಕೀಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ಆಸ್ಪತ್ರೆ ಫಾರ್ಮಸಿ ಕಾರ್ಯಕ್ರಮ ೩) ರಾಷ್ಟ್ರೀಯ ಏಡ್ಸ್ ನಿಯಂತ್ರಣಾ ಕಾರ್ಯಕ್ರಮ ೪) ತಾಯಿ ಮಕ್ಕಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮ ಮತ್ತು ಲಸಿಕಾ ಕಾರ್ಯಕ್ರಮ ೫) ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ೬) ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ೭) ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ ೮) ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ ೯) ರಾಷ್ಟ್ರೀಯ ನಾರುಹುಣ್ಣು ನಿರ್ಮೂಲನಾ ಕಾರ್ಯಕ್ರಮ ೧೦) ಸೋಂಕು ರೋಗಗಳಾದ ಅತಿಸಾರ, ಕ್ಯಾಸನೂರು ಅರಣ್ಯ ಕಾಯಿಲೆ, ಜಪಾನಿಸ್ ಎನ್–ಸಫೆಲೈಟೀಸ್ (ಮೆದುಳುಜ್ವರ) ನಿಯಂತ್ರಣ ಕಾರ್ಯಕ್ರಮ ೧೧) ಆರೋಗ್ಯ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮ ೧೨) ಪೌಷ್ಟಿಕ ಆಹಾರ ಕಾರ್ಯಕ್ರಮ (ಶಿಕ್ಷಣ ಮತ್ತು ಪ್ರಾತ್ಯಕ್ಷಿಕೆ) ೧೩) ಅಯೋಡಿನ್ ಕೊರತೆಯಿಂದ ಉಂಟಾಗುವ ನ್ಯೂನತೆ ನಿಯಂತ್ರಣ ರಾಷ್ಟ್ರೀಯ ಕಾರ್ಯಕ್ರಮ ೧೪) ಪ್ರಯೋಗಾಲಯ ಸೇವೆಗಳ ನಿರ್ವಹಣೆ ಮತ್ತು ಲಸಿಕಾ ತಯಾರಿಕಾ ಘಟಕಗಳ ಸ್ಥಾಪನೆ ೧೫) ಶಿಕ್ಷಣ ಹಾಗೂ ಪರಿಸರ ನೈರ್ಮಲ್ಯ ಕಾರ್ಯಕ್ರಮ ಹಾಗೂ ರೋಗ ಪರಿಹಾರಕ ಸೇವೆಗಳು.

ಪ್ರಸ್ತುತ, (೨೦೦೫-೦೬) ಉಡುಪಿ ಜಿಲ್ಲೆಯಲ್ಲಿ ಒಂದು ಜಿಲ್ಲಾ ಆಸ್ಪತ್ರೆ, ತಾಲೂಕು ಮಟ್ಟದ ಎರಡು ಸಾರ್ವಜನಿಕ ಆಸ್ಪತ್ರೆಗಳು, ನಾಲ್ಕು ಸಮುದಾಯ ಆರೋಗ್ಯ ಕೇಂದ್ರಗಳು, ೫೧ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೧೦ ಪ್ರಾಥಮಿಕ ಆರೋಗ್ಯ ಘಟಕಗಳು ಮತ್ತು ೩೨೦ ಉಪ ಆರೋಗ್ಯ ಕೇಂದ್ರಗಳಿವೆ. ಇದಲ್ಲದೆ ೪೦೦ ಹಾಸಿಗೆಯ ಒಂದು ಆಯುರ್ವೇದ ಆಸ್ಪತ್ರೆ ಸಹ ಇದೆ. ೮೦ ವೈದ್ಯರು, ೨೬೪ ಕಿರಿಯ ಮಹಿಳಾ ಸಹಾಯಕರು, ೧೬೫ ವೈದ್ಯಕೀಯ ಸಿಬ್ಬಂದಿ ಹಾಗೂ ೧೯೫ ಇತರ ಸಿಬ್ಬಂದಿ ಜಿಲ್ಲೆಯ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸುತ್ತಿವೆ. ಇದಕ್ಕೆ ಪೂರಕವಾಗಿ ಖಾಸಗಿ ಕ್ಷೇತ್ರದಲ್ಲಿ ಒಟ್ಟು ೪೪೬ ಹಾಸಿಗೆಗಳ ೨೫ ನರ್ಸಿಂಗ್ ಹೋಮ್‌ಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯ ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ೨೦೦೫-೦೬ನೇ ಸಾಲಿನಲ್ಲಿ ಈ ಕೆಳಗಿನಂತೆ ಜಿಲ್ಲೆಯ ಪ್ರಗತಿ ಇದೆ. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ ನಡೆಸಲಾದ ಒಟ್ಟು ಸಂತಾನಹರಣ ಶಸ್ತ್ರಚಿಕಿತ್ಸೆಗಳು ೫,೭೫೬, ವಂಕಿ ಧಾರಣೆಗಳು ೪,೫೨೮, ವ್ಯಾಸೆಕ್ಟಮಿ-೧೧, ನಿರೋಧ್ ವಿತರಣೆ ೨೮೮ (ಜನರಿಗೆ) ಹಾಗೂ ನುಂಗುವಮಾತ್ರೆ ವಿತರಣೆ ೨,೨೬೬ (ಜನರಿಗೆ) ಆಗಿದೆ. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಅದೇ ಸಾಲಿನಲ್ಲಿ ನೀಡಿದ ಚುಚ್ಚುಮದ್ದು ೧) ಡಿಟಿಪಿ -೧೫,೪೧೪ ೨) ಪೋಲಿಯೋ - ೧೫,೪೧೪, ೩) ಬಿ.ಸಿ.ಜಿ - ೧೫,೩೯೧ ೪) ದಡಾರ - ೧೪,೮೫೮ ಹಾಗೂ ೫) ಡಿ.ಟಿ. - ೧೬,೨೯೯ ಆಗಿದೆ. ಇಲಾಖೆಯು ಆಡಳಿತಾತ್ಮಕವಾಗಿ ಮಾರ್ಪಾಡಾಗಿದ್ದು ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ೨೦೦೫ನೇ ಸಾಲಿನಲ್ಲಿ ದಾಖಲಾತಿ ಪಡೆದ ಒಟ್ಟು ಒಳರೋಗಿಗಳ ಸಂಖ್ಯೆಯು ೪೧,೭೮೨ (ಸ್ತ್ರೀಯರು ೨೦,೪೫೧, ಪುರುಷರು ೧೮,೧೧೫, ಮಕ್ಕಳು ೩,೨೧೬); ಹೊರರೋಗಿಗಳ ಸಂಖ್ಯೆಯು ೫,೮೯,೦೧೨ (ಸ್ತ್ರೀಯರು ೨,೦೭,೪೫೫, ಪುರುಷರು ೨,೬೬,೩೯೨ ಮಕ್ಕಳು ೧,೪೫,೧೬೫) ಆಗಿದ್ದು ಒಟ್ಟು ಉಂಟಾದ ಮರಣಗಳ ಸಂಖ್ಯೆಯು ೩೦೫ (ಸ್ತ್ರೀಯರು ೨೦೮, ಪುರುಷರು ೭೦, ಮಕ್ಕಳು ೨೭) ಆಗಿದ್ದಿತು.

**ಜನನ-ಮರಣ ಅಂಕಿ ಅಂಶಗಳು**

ಪ್ರಾರಂಭದಲ್ಲಿ ಜನನ-ಮರಣ ಅಂಕಿ ಅಂಶಗಳ ಸಂಗ್ರಹಣೆ ವೈಜ್ಞಾನಿಕವಾಗಿರದೆ ಜನನ ಮರಣ ದಾಖಲಾತಿ ನಿಯಮಬದ್ಧವಾಗಿರಲಿಲ್ಲ. ಇದರಿಂದಾಗಿ ಆಗ ಇದ್ದ ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು, ೧೯೧೮ರಲ್ಲಿ ನೋಂದಣಿ ವ್ಯವಸ್ಥೆಯನ್ನು ನಿಯಮಬದ್ಧಗೊಳಿಸಲಾಯಿತು. ಹಳ್ಳಿಗಳಲ್ಲಿ ಪಟೇಲರು ಹಾಗೂ ಪಟ್ಟಣಪ್ರದೇಶಗಳಲ್ಲಿ ಪುರಸಭೆಗಳು ತಮ್ಮ ವ್ಯಾಪ್ತಿಯಲ್ಲಿ ಉಂಟಾಗುವ ಜನನ ಮರಣ ಘಟನೆಗಳ ದಾಖಲಾತಿ ಮಾಡಿಕೊಳ್ಳುತ್ತಿದ್ದರು. ಹಳ್ಳಿಗಳಲ್ಲಿ ಪಟೇಲರು ಸಂಗ್ರಹಿಸಿದ ಜನನ ಮರಣ ಅಂಕಿ ಅಂಶಗಳನ್ನು ತಮ್ಮ ತಾಲೂಕಿನ ತಹಸೀಲ್ದಾರರಿಗೆ ಕಳಿಸಿಕೊಡುತ್ತಿದ್ದರು. ನಂತರ ತಹಸೀಲ್ದಾರರು ಕ್ರೋಢೀಕರಿಸಿದ ಈ ಅಂಕಿ ಅಂಶಗಳನ್ನು ಜಿಲ್ಲಾಧಿಕಾರಿಗಳಿಗೆ ಕಳಿಸುತ್ತಿದ್ದರು. ಅನಂತರ ಜಿಲ್ಲಾಧಿಕಾರಿಗಳಿಂದ ಕ್ರೋಢೀಕರಿಸಿದ ಜಿಲ್ಲಾ ಅಂಕಿ ಅಂಶಗಳನ್ನು ಜನನ ಮರಣ ಮಹಾಪಂಜಿಕಾರರಿಗೆ ಕಳುಹಿಸಲಾಗುತ್ತಿತ್ತು. ಹೀಗೆ ದಾಖಲೆಗೊಂಡ ಅಂಕಿ ಅಂಶಗಳು ಪುನರ್ ಪರಿಶೀಲನೆಗೆ ಒಳಪಡುವಂತೆ ಕಾಯ್ದೆಗೆ ತಿದ್ದುಪಡಿ ತರಲಾಯಿತು. ಜನನ-ಮರಣ ನೋಂದಣಿಯ ೧೯೬೯ರ ಕಾಯ್ದೆಯು ೧೯೭೦ರ ಏಪ್ರಿಲ್ ಒಂದರಂದು ರಾಜ್ಯದಲ್ಲಿ ಜಾರಿಗೊಂಡಿತು. ಕರ್ನಾಟಕ ಜನನ-ಮರಣ ನಿಯಮಗಳು (ರೂಲ್ಸ್) ೧೯೭೦ನ್ನು ಸರ್ಕಾರ ರೂಪಿಸಿ ೧೯೭೧ರಲ್ಲಿ ಜಾರಿಗೊಳಿಸಿತು. ಈ ಕಾನೂನಿನನ್ವಯ ಪ್ರತಿಯೊಬ್ಬರು ತಮ್ಮ ಕುಟುಂಬದಲ್ಲಾದ ಜನನ, ಮರಣ, ವಿವಾಹಾದಿ ಘಟನೆಗಳನ್ನು ನೋಂದಣಾಧಿಕಾರಿ ಬಳಿ ನೋಂದಾಯಿಸಿ ಕೊಳ್ಳಬೇಕಾಗುತ್ತದೆ. ಈ ನೋಂದಣಿ ಕಾರ್ಯವು ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮಲೆಕ್ಕಿಗರಿಂದ ಹಾಗೂ ಪಟ್ಟಣ ಪ್ರದೇಶಗಳಲ್ಲಿ ನಗರಸಭೆ/ಪುರಸಭೆಗಳಿಂದ ನಿರ್ವಹಿಸಲ್ಪಡುತ್ತವೆ. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯು ಜಿಲ್ಲಾ ನೋಂದಣಾಧಿಕಾರಿ ಯಾಗಿದ್ದಾರೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ (ಜಿಲ್ಲಾ ಅಂಕಿ ಸಂಖ್ಯಾಧಿಕಾರಿ) ಆಯಾ ಜಿಲ್ಲೆಯ ಅಪರ ನೋಂದಣಾಧಿಕಾರಿಯಾಗಿರುವರು. ವಿವರಗಳಿಗೆ ಕೋಷ್ಟಕ ೧೫.೧ ನೋಡಿ.

**ಕೋಷ್ಟಕ. ೧೫.೧ : ಜಿಲ್ಲೆಯ ಜನನ–ಮರಣ ನೋಂದಣಿ ವಿವರ (೨೦೦೦–೨೦೦೪)**

| ಕ್ರ.ಸಂ. | ವಿವರಗಳು | ೨೦೦೦ | ೨೦೦೧ | ೨೦೦೨ | ೨೦೦೩ | ೨೦೦೪ |
|---|---|---|---|---|---|---|
| ೧ | ಜನನಗಳು | ೨೪೬೮೩ | ೨೪೫೮೪ | ೨೩೫೭೩ | ೨೪೯೦೫ | ೨೨೪೭೧ |
| ೨ | ಮರಣಗಳು | ೯೩೫೬ | ೧೦೨೧೬ | ೯೫೯೨ | ೧೧೩೯೯ | ೮೮೯೭ |
| ೩ | ಸತ್ತು ಹುಟ್ಟಿದ ಮಕ್ಕಳು | ೧೪೮ | ೨೭೦ | ೯೮ | ೧೫೪ | ೧೪೯ |
| ೪ | ಶಿಶುಮರಣಗಳು | ೧೬೯ | ೧೧೬ | ೧೮೧ | ೨೨೬ | ೧೨೫ |
| ೫ | ಹೆರಿಗೆ ಕಾಲದಲ್ಲಿ ತಾಯಂದಿರ ಮರಣಗಳು | – | – | – | – | – |
| ೬ | ಜನನ ಪ್ರಮಾಣ – (ಗ್ರಾಮೀಣ) | ೨೩.೩ | ೨೩.೬ | ೨೩.೫ | ೨೩.೨ | – |
| | ನಗರ | ೧೯.೧ | ೧೯ | ೧೮.೮ | ೧೮.೬ | – |
| | **ಒಟ್ಟು** | **೨೨.೦** | **೨೨.೨** | **೨೨.೧** | **೨೧.೮** | – |
| ೭ | ಮರಣ ಪ್ರಮಾಣ – (ಗ್ರಾಮೀಣ) | ೮.೬ | ೮.೨ | ೭.೯ | ೭.೮ | – |
| | ನಗರ | ೫.೭ | ೬.೪ | ೫.೭ | ೫.೬ | – |
| | **ಒಟ್ಟು** | **೭.೮** | **೭.೬** | **೭.೨** | **೭.೨** | – |
| ೮ | ಶಿಶು ಮರಣ ಪ್ರಮಾಣ – (ಗ್ರಾಮೀಣ) | ೬೮ | ೬೯ | ೬೫ | ೬೧ | – |
| | ನಗರ | ೨೪ | ೨೭ | ೨೫ | ೨೪ | – |
| | **ಒಟ್ಟು** | **೫೭** | **೫೮** | **೫೫** | **೫೨** | – |

*ಆಧಾರ: ೧) ಕ್ರಮ ಸಂಖ್ಯೆ ೧ ರಿಂದ ೪:– ಜನನ ಮರಣ ನೋಂದಣಿ ಅಧಿನಿಯಮ, ೧೯೬೯ರ ವಾರ್ಷಿಕ ವರದಿಗಳು (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ) ಜಿಲ್ಲೆಯಲ್ಲಿ ನೋಂದಣಿಯಾದ ಘಟಕಗಳಿಗೆ ಮಾತ್ರ ಸೀಮಿತಗೊಂಡಿರುತ್ತದೆ.*
*೨) ಕ್ರಮ ಸಂಖ್ಯೆ ೬ ರಿಂದ ೮:– ಭಾರತದ ಮಹಾ ನೋಂದಣಾಧಿಕಾರಿಗಳು ಒದಗಿಸಿರುವ ಮಾದರಿ ದಾಖಲಾತಿ ಪದ್ಧತಿ (ಎಸ್.ಆರ್.ಎಸ್) ಅಂಕಿಅಂಶಗಳು. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ*

**ಮಾದರಿ ನೋಂದಣಿ ಪದ್ಧತಿ :** ೧೯೬೧ನೇ ವರ್ಷವನ್ನು ಆಧಾರವಾಗಿಟ್ಟುಕೊಂಡು ಭಾರತದ ರಿಜಿಸ್ಟ್ರಾರ್ ಜನರಲ್‌ರವರು ೧೯೬೮ರಲ್ಲಿ ಮಾದರಿ ನೋಂದಣಿ ವ್ಯವಸ್ಥೆಯನ್ನು ದೇಶದಲ್ಲಿ ಪ್ರಾರಂಭಿಸಿದರು. ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಂದ, ನಿರಂತರ ಆಧಾರದ ಮೇಲೆ ಜನನ–ಮರಣಗಳಿಗೆ ಸಂಬಂಧಿಸಿದ ವಿಶ್ವಾಸನೀಯ ವಾರ್ಷಿಕ ಅಂದಾಜುಗಳನ್ನು ಸರ್ಕಾರಕ್ಕೆ ಒದಗಿಸುವ ಉದ್ದೇಶ ಈ ವ್ಯವಸ್ಥೆಯದಾಗಿದೆ. ಇದು ಪರಿಣಾಮಕಾರಿಯಾಗಿ ಜನಕಲ್ಯಾಣ ಮತ್ತು ಆರೋಗ್ಯ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲು ಸಹಾಯಕಾರಿಯಾಗಿದ್ದು, ಪ್ರಾಮುಖ್ಯತೆ ಪಡೆದಿದೆ.

ಭಾರತದ ಜನನ–ಮರಣ, ವಿವಾಹಗಳ ಮಹಾನೋಂದಣಾಧಿಕಾರರು (*Rigistrar General*) ದೇಶದಲ್ಲಾದ ಜನನ–ಮರಣ ಅಂಕಿಅಂಶಗಳ ಸಂಗ್ರಹಣೆ ಉದ್ದೇಶದಿಂದ ಮಾದರಿ ನೋಂದಣಿ ಪದ್ಧತಿಯನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಜನನ–ಮರಣ ಅಂಕಿ ಅಂಶಗಳನ್ನು ಸತತವಾಗಿ ದಾಖಲಿಸುವುದರ ಜೊತೆಗೆ ಮರಣ ಕಾರಣಗಳನ್ನು ನೀಡಲಾಗುವುದು. ಹೀಗೆ ಸಂಗ್ರಹಿಸಿದ ಅಂಕಿ ಅಂಶಗಳನ್ನು ಅಂಕಿ ಸಂಖ್ಯಾಶಾಸ್ತ್ರದ ಅನೇಕ ಪ್ರಕ್ರಿಯೆಗಳಿಗೆ ಒಳಪಡಿಸಿ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಬೇರೆಬೇರೆಯಾಗಿ ಜನನ–ಮರಣ ಪ್ರಮಾಣಗಳನ್ನು ಕಂಡುಹಿಡಿಯಲು ಬಳಸಿಕೊಳ್ಳಲಾಗುವುದು. ಒಂದು ನಿರ್ದಿಷ್ಟ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರತೀ ಸಾವಿರ ಜನಸಂಖ್ಯೆಗೆ ಒಂದು ವರ್ಷದಲ್ಲಾಗುವ ಜನನಗಳಿಗೆ ಜನನ ಪ್ರಮಾಣವೆಂತಲೂ ಮತ್ತು ಅಷ್ಟೆ ಅವಧಿಯಲ್ಲಿ ಉಂಟಾಗುವ ಮರಣಗಳಿಗೆ ಮರಣ ಪ್ರಮಾಣವೆಂದು ತಿಳಿಯಲಾಗುವುದು. ಸತ್ತು ಹುಟ್ಟುವ (ಸ್ಟಿಲ್‌ಬಾರ್ನ್) ಮಕ್ಕಳು, ಹೆರಿಗೆ ಕಾಲದಲ್ಲಿ ತಾಯಂದಿರ ಮರಣ ಮೊದಲಾದವು ಸಾರ್ವಜನಿಕ ಆರೋಗ್ಯ ಸಮಸ್ಯೆಗಳಾಗಿದ್ದು, ಇವುಗಳಿಗೆ ಪ್ರತ್ಯೇಕ ಕಾರಣಗಳುಂಟು. ಈ ಪ್ರಮಾಣವನ್ನು ವಲಯ ಆಧಾರದ ಮೇಲೆ ತಿಳಿಸಲಾಗುವುದರಿಂದ ಜಿಲ್ಲೆಗೆ ಪ್ರತ್ಯೇಕ ವಿವರಗಳು ಲಭ್ಯವಿರುವುದಿಲ್ಲ. ಆದ್ದರಿಂದ ಜನನ ಪ್ರಮಾಣಗಳನ್ನು ಗ್ರಾಮಾಂತರ ಹಾಗೂ ನಗರಪ್ರದೇಶಗಳಿಗೆ

ಪ್ರತ್ಯೇಕವಾಗಿ ಹಾಗೂ ಒಟ್ಟಿಗೆ ಕೊಡಲಾಗಿದೆ. ಮಾದರಿ ನೋಂದಣಿ ವ್ಯವಸ್ಥೆಗೆ ಈ ಮುಂದೆ ನೀಡಲಾದ ಗ್ರಾಮೀಣ ಹಾಗೂ ನಗರ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಉಡುಪಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಾದ ಕುಂದಾಪುರ ತಾಲೂಕಿನ ಮೂಡೂರು; ಕಾರ್ಕಳ ತಾಲೂಕಿನ ಬೋಳ, ಜಾರ್ಕಳ, ಮುದ್ರಾಡಿ ಮತ್ತು ಶಿವಪುರದ ಒಂದು ಭಾಗ, ಉಡುಪಿ ತಾಲೂಕಿನ ಶಿರ್ವದ ಒಂದು ಭಾಗ (ಪೊರ್ಶನ್) ಹಾಗೂ ನಗರ ಪ್ರದೇಶಗಳಾದ ಉಡುಪಿಯ ಒಂದು ಗಣತಿ ವಿಭಾಗ ಹಾಗೂ ಕುಂದಾಪುರಗಳನ್ನು ಆಯ್ದುಕೊಳ್ಳಲಾಗಿದೆ.

**ಸಾಂಕ್ರಾಮಿಕ ರೋಗಗಳು**

ನೈರ್ಮಲ್ಯದ ಕೊರತೆ, ಅಶುದ್ಧ ನೀರು ಹಾಗೂ ಅಸಂತುಲಿತ ಆಹಾರಸೇವನೆಯು ಜನಸಮುದಾಯದ ಸ್ವಾಸ್ಥ್ಯದ ಮೇಲೆ ದುಷ್ಪರಿಣಾಮ ಬೀರಿ ರೋಗಗಳಿಗೆ ತುತ್ತಾಗುವಂತೆ ಮಾಡುತ್ತದೆ. ಸೊಳ್ಳೆ, ನೊಣಗಳ ಆಗರ ಆಗಿರುವ ಕೊಳಕು ಪರಿಸರಗಳು, ಕಾಲರಾ, ಮಲೇರಿಯಾ, ಪ್ಲೇಗು, ಸಿಡುಬು ಮುಂತಾದ ಮಾರಕ ಸಾಂಕ್ರಾಮಿಕಗಳು ಹರಡುವುದಕ್ಕೆ ಕಾರಣವಾಗುತ್ತವೆ. ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಣಕ್ಕೆ ತರಲು ಸರ್ಕಾರ, ಕಾಲಕಾಲಕ್ಕೆ ಕ್ರಿಮಿನಾಶಕಗಳ ಸಿಂಪಡಣೆ, ಚುಚ್ಚುಮದ್ದು ನೀಡುವಿಕೆಯಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದೆ. ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ, ಶೌಚಾಲಯಗಳ ನಿರ್ಮಾಣ, ಗ್ರಾಮ ನಿರ್ಮಲೀಕರಣದಂತಹ ಕ್ರಮಗಳಿಂದ ಸಾಂಕ್ರಾಮಿಕಗಳು ಕ್ರಮೇಣ ಹತೋಟಿಗೆ ಬರುತ್ತಿವೆ. ಪ್ರಾರಂಭದಲ್ಲಿ ಜಿಲ್ಲಾಮಂಡಳಿ ಹಾಗೂ ಮುನಿಸಿಪಾಲಿಟಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಹರಡುವ ಸಾಂಕ್ರಾಮಿಕಗಳನ್ನು ತಡೆಗಟ್ಟಲು ಸೂಕ್ತ ಕ್ರಮಕೈಗೊಳ್ಳುತ್ತಿದ್ದವು. ಈಗ ಆರೋಗ್ಯ ನಿರ್ದೇಶಕರ ಸಲಹೆಯ ಮೇರೆಗೆ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿಗಳು ಕಟ್ಟುನಿಟ್ಟಾದ ಕ್ರಮಕೈಗೊಳ್ಳುತ್ತಾ ಬಂದಿದ್ದಾರೆ. ಸಾಮಾನ್ಯವಾಗಿ ನೀರು, ಸೊಳ್ಳೆಗಳಿಂದ ಹರಡುವ ಸಾಂಕ್ರಾಮಿಕ ಕಾಯಿಲೆಗಳಾದ ಕಾಲರಾ, ಕರುಳಬೇನೆ, ವಿಷಮಶೀತಜ್ವರ, ಕಾಮಾಲೆ, ಮಲೇರಿಯಾ, ಟೈಫಾಯಿಡ್, ಕ್ಷಯ ಮತ್ತು ಆನೆಕಾಲುರೋಗಗಳು ಈ ಜಿಲ್ಲೆಯಲ್ಲಿ ಕಾಣಿಸಿಕೊಳ್ಳುತ್ತಿದ್ದು, ಆರೋಗ್ಯ ಇಲಾಖೆಯವರು ಅವುಗಳ ನಿಯಂತ್ರಣಕ್ಕೆ ಸಾರ್ವತ್ರಿಕ ಚುಚ್ಚುಮದ್ದು ನೀಡುವ ಕಾರ್ಯಕ್ರಮ ಹಾಗೂ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

**ಸಿಡುಬು**

ಸಿಡುಬು ಬಹಳ ಹಿಂದಿನಿಂದಲೇ ಬಂದ ಪಿಡುಗಾಗಿದ್ದು, ಬ್ರಿಟೀಷ್ ಸರ್ಕಾರ ೧೮೩೦ರಲ್ಲಿ ಈ ರೋಗದ ವಿರುದ್ಧ ಮೈಲಿ (ದೇವಿ) ಹಾಕಿಸುವ ಕಾರ್ಯಕ್ರಮವನ್ನು ಜಾರಿಗೆ ತಂದಿತ್ತು. ವೇರಿಯೋಲ್ ಎಂಬ ವೈರಸ್‌ನ ನಂಜಿನಿಂದುಂಟಾಗುವ ಈ ರೋಗವು ಕಲುಷಿತ ಆಹಾರ ಸೇವನೆಯಿಂದ ಹರಡುತ್ತದೆ. ಇತ್ತೀಚೆಗೆ ಈ ರೋಗದಿಂದ ಉಂಟಾದ ಸಾವಿನ ಸಂಖ್ಯೆ ಕ್ರಮೇಣ ಕಡಿಮೆ ಆಗುತ್ತಾ ಬಂದಿದ್ದು ೧೯೮೦ ನಂತರ ದಶಕಗಳಲ್ಲಿ ಸಿಡುಬು ಸಂಪೂರ್ಣ ನಿವಾರಣೆ ಆಗಿದೆ. ತೀವ್ರವಾಗಿ ಹರಡುವ ಸಿಡುಬು ನಿರ್ಮೂಲನೆಗಾಗಿ ಕೇಂದ್ರ ಸರ್ಕಾರವು ೧೯೬೧ರಲ್ಲಿ ರಾಷ್ಟ್ರೀಯ ಸಿಡುಬು ನಿರ್ಮೂಲನಾ ಕಾರ್ಯಕ್ರಮ ಆರಂಭಿಸಿತು. ವಿಶೇಷವಾಗಿ ಮಕ್ಕಳಿಗೆ ತಗಲುವ ಈ ರೋಗದ ತಡೆಗೆ, ಹುಟ್ಟಿದ ಎಲ್ಲಾ ಮಕ್ಕಳಿಗೆ (೦–೧ ವರ್ಷದವರೆಗೆ) ಪ್ರಾಥಮಿಕ ಮೈಲಿ ಹಾಕುವುದು, ನಂತರ ನಾಲ್ಕು ವರ್ಷಗಳಿಗೊಮ್ಮೆ ಮರುಮೈಲಿ (ಚುಚ್ಚುಮದ್ದು) ಹಾಕುವುದು ಪ್ರಾರಂಭಿಕ ಕ್ರಮವಾಗಿದ್ದಿತು. ಆದಾಗ್ಯೂ ಸಿಡುಬು ಸಣ್ಣ ಪ್ರಮಾಣದಲ್ಲಿ ಅಲ್ಲಲ್ಲಿ ಕಂಡುಬರುತ್ತಿತ್ತು. ಪ್ರಸ್ತುತ ಈ ರೋಗ ಸಂಪೂರ್ಣ ನಿವಾರಣೆ ಆಗಿದೆ. ಸಿಡುಬು ರೋಗ ಪತ್ತೆ ಹಾಗೂ ತಡೆಗಟ್ಟುವಿಕೆಗಾಗಿ ವಿಶ್ವ ಆರೋಗ್ಯ ಸಂಸ್ಥೆಯು ರೋಗಾಣು ತಜ್ಞರ ಸಹಯೋಗದೊಂದಿಗೆ ಸಂಶೋಧನೆ ಕೈಗೊಂಡು ಯೋಜನೆಗಳನ್ನು ರೂಪಿಸಿದೆ. ಹಲವಾರು ಸಲ ಮನೆಮನೆಗೆ ಹೋಗಿ ಶೋಧನಾ ಕಾರ್ಯಕ್ರಮ ನಡೆಸಿದ್ದಲ್ಲದೆ ಸಾಕಷ್ಟು ಪ್ರಚಾರ ನೀಡಲಾಗಿದೆ. ಭಾರತವು ಸಿಡುಬು ರೋಗ ಮುಕ್ತವೆಂದು ೧೯೭೮ರಲ್ಲಿ ಘೋಷಿಸಲಾಯಿತು. ಆರೋಗ್ಯ ಇಲಾಖೆಯು ಸಿಡುಬು ರೋಗ ಮರುಕಳಿಸದಂತೆ ಸಾಕಷ್ಟು ಜಾಗ್ರತೆ ವಹಿಸಿದೆ. ಸಿಡುಬು ಪತ್ತೆ ಹಚ್ಚಿದವರಿಗೆ ಬಹುಮಾನ ಯೋಜನೆ ಜಾರಿಯಲ್ಲಿದೆ.

## ಕಾಲರಾ

ಇದು ಒಂದು ಭೀಕರ ಸಾಂಕ್ರಾಮಿಕವಾಗಿದ್ದು, ವಾಂತಿ ಭೇದಿಯಿಂದ ಶರೀರದಲ್ಲಿ ತೀವ್ರ ನಿರ್ಜಲ ಉಂಟಾಗುವಿಕೆ ಲಕ್ಷಣಗಳುಳ್ಳ ಒಂದು ಕರುಳುಬೇನೆ. ಸಕಾಲಿಕ ಚಿಕಿತ್ಸೆ ನೀಡಿದಲ್ಲಿ ಸಾವಿನ ಭಯವಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕಾಲರಾದ ಹಾವಳಿ ಕಡಿಮೆಯಾಗುತ್ತಾ ಬಂದಿದೆ. ಕ್ರಿಮಿನಾಶಕಗಳ ಬಳಕೆ–ಕಾಲರಾ ನಿರೋಧಕ ಚುಚ್ಚುಮದ್ದು ನೀಡುವಿಕೆ, ಪರಿಸರ ನೈರ್ಮಲ್ಯ ಕಾಪಾಡುವುದು ಮುಂತಾದ ಮುಂಜಾಗ್ರತಾ ಕ್ರಮಗಳಿಂದ ಈ ರೋಗವನ್ನು ಹರಡದಂತೆ ಹತೋಟಿಗೆ ತರಬಹುದಾಗಿದೆ. ಸರ್ಕಾರವು ಜಿಲ್ಲೆಗೊಂದರಂತೆ ಕಾಲರಾ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸಿದೆ. ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ಹರಡುವ ಈ ಪಿಡುಗು ಸಾರ್ವತ್ರಿಕವಾಗಿ ಕಾಲರಾ ನಿರೋಧಕ ಚುಚ್ಚುಮದ್ದು ನೀಡುವ ಕ್ರಮ, ಅಸುರಕ್ಷಿತ ನೀರಿನ ಮೂಲಗಳಿಗೆ ಸೂಕ್ತ ಕ್ಲೋರಿನೇಶನ್ ಮಾಡುವುದು, ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಆರೋಗ್ಯ ಸಹಾಯಕರು ಮನೆಮನೆಗೆ ಭೇಟಿನೀಡಿ ಸಾಂಕ್ರಾಮಿಕವು ಹರಡದಂತೆ ತೆಗೆದುಕೊಳ್ಳಬೇಕಾದ ಮುಂಜಾಗ್ರತೆ ಬಗ್ಗೆ ಆರೋಗ್ಯ ಶಿಕ್ಷಣ ನೀಡುವುದು, ರಸ್ತೆ ಬದಿ ತೆರೆದಿಟ್ಟ ತಿಂಡಿ ಹಾಗೂ ಕೊಯ್ದು ಇಟ್ಟ ಹಣ್ಣುಹಂಪಲು ತಿನ್ನದೆ ಇರುವುದು, ಜಾತ್ರೆಯ ಸಮಯದಲ್ಲಿ ತೆರೆದಿಟ್ಟ ತಿಂಡಿ, ಆಹಾರ ಪದಾರ್ಥಗಳನ್ನು ಮಾರಾಟ ಮಾಡದಂತೆ ಕ್ರಮ ಕೈಗೊಳ್ಳುವುದು ಮುಂತಾದ ಕಾರ್ಯಕ್ರಮಗಳಿಂದ ಸಾಂಕ್ರಾಮಿಕ ಹರಡದಂತೆ ತಡೆಯ ಬಹುದಾಗಿದೆ. ಉಡುಪಿ ಜಿಲ್ಲೆಯಲ್ಲಿ ೨೦೦೩–೨೦೦೪, ೨೦೦೪–೨೦೦೫ ಹಾಗೂ ೨೦೦೫–೨೦೦೬ನೇ ಸಾಲುಗಳನ್ನು ಕ್ರಮವಾಗಿ ೪೯೭, ೫೭೦ ಹಾಗೂ ೧೨೭ ಕರಳುಬೇನೆ ಪ್ರಕರಣಗಳು ಹಾಗೂ ೨೧,೧,೦ ಕಾಲರಾ ಪ್ರಕರಣಗಳು ವರದಿಯಾಗಿದ್ದು, ಇದರಿಂದ ಯಾವುದೇ ಸಾವು ಸಂಭವಿಸಿರುವುದಿಲ್ಲ.

## ಪ್ಲೇಗ್

೧೮೯೮ರ ಪ್ರಾರಂಭದಲ್ಲಿ ಕಾಣಿಸಿಕೊಂಡ ಈ ಪಿಡುಗು ರಾಷ್ಟ್ರವ್ಯಾಪಿಯಾಗಿ ಹರಡಿತು. ೧೯೪೮–೫೨ರ ಮಧ್ಯಾವಧಿಯಲ್ಲಿ ಸಾರ್ವತ್ರಿಕವಾಗಿ ಹರಡಿ ಅನೇಕ ಸಾವು–ನೋವುಗಳನ್ನು ಉಂಟುಮಾಡಿತು. ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮದಲ್ಲಿ ಕೈಗೊಂಡ ಕ್ರಿಮಿನಾಶಕ ಸಿಂಪಡಣೆ ಕ್ರಮವಾಗಿ ಈ ರೋಗ ನಿಯಂತ್ರಣಕ್ಕೆ ಒಳಪಟ್ಟಿತು ಹಾಗೂ ಪ್ಲೇಗ್ ರೋಗ ಗಣನೀಯವಾಗಿ ಕಡಿಮೆಯಾಯಿತು. ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ಸಂಸ್ಥೆಯು ಕೈಗೊಂಡ ಸಮೀಕ್ಷೆ ಹಾಗೂ ನಿಯಂತ್ರಣ ಕ್ರಮಗಳಿಂದ ೧೯೫೨ ನಂತರ ಪ್ಲೇಗಿನಿಂದಾದ ಸಾವಿನ ಪ್ರಕರಣಗಳು ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. ಪ್ರಸ್ತುತ ಜಿಲ್ಲೆಯು ಈ ಸೋಂಕಿನಿಂದ ಸಂಪೂರ್ಣ ಮುಕ್ತವಾಗಿದೆ.

## ಮಲೇರಿಯಾ

ಅನೋಫೆಲಿಸ್ ಎಂಬ ಜಾತಿಯ ಹೆಣ್ಣು ಸೊಳ್ಳೆಗಳು ಮಲೇರಿಯಾದ ರೋಗವಾಹಕಗಳಾಗಿವೆ. ಪ್ಲಾಸ್ಮೊಡಿಯಂ ಎಂಬ ಪರೋಪಜೀವಿ ರೋಗಾಣುವಿನಿಂದ ಈ ರೋಗ ಉಂಟಾಗುತ್ತದೆ. ಜಾಗತಿಕವಾಗಿ ಕಂಡುಬರುವ ಈ ರೋಗವು ಸೊಳ್ಳೆಗಳ ಆಗರವಾದ ನಿಂತನೀರು, ಜೌಗುಪ್ರದೇಶಗಳಲ್ಲಿ ತೀವ್ರವಾಗಿ ಹರಡಿ ಜನರನ್ನು ರೋಗ ಪೀಡಿತರನ್ನಾಗಿ ಮಾಡುತ್ತವೆ. ಕರಾವಳಿ, ಮಲೆನಾಡು ಪ್ರದೇಶಗಳಲ್ಲಿ ರೋಗ ಹೆಚ್ಚಾಗಿ ಕಂಡುಬರುತ್ತದೆ. ಕ್ರಿಮಿನಾಶಕಗಳ ಸಿಂಪಡಣೆಯಿಂದ ಈ ರೋಗವು ನಿಯಂತ್ರಣಕ್ಕೆ ಬಂದಿರುತ್ತದೆ. ರೋಗಪೀಡಿತರಿಗೆ *Chloroquin* ಮಾತ್ರೆ *(Quinine)* ನೀಡುವುದರಿಂದ ರೋಗ ಉಪಶಮನವಾಗುತ್ತದೆ. ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವನ್ನು ಭಾರತ ಸರ್ಕಾರವು ೧೯೫೩ರಲ್ಲಿ ಜಾರಿಗೆ ತಂದ ಮೇಲೆ ಇದರ ನಿಯಂತ್ರಣ ಸಾಧ್ಯವಾಗಿದೆ.

ಮಲೇರಿಯಾ ರೋಗವು ಪರೋಪಜೀವಿ ಜಾತಿಯನ್ನು ಅವಲಂಬಿಸಿದೆ. ಮೈನಡುಕ, ಅತೀಯಾದ ಜ್ವರ ಇವು ರೋಗದ ಲಕ್ಷಣಗಳು. ರೋಗಪೀಡಿತ ವ್ಯಕ್ತಿಯ ದೇಹದಲ್ಲಿರುವ ಕೆಂಪುರಕ್ತಕಣಗಳ ಪ್ರಮಾಣ ತೀವ್ರ ಕುಸಿದು ರಕ್ತ ಹೀನತೆ ಉಂಟಾಗುತ್ತದೆ. ರೋಗಿಯ ಪ್ಲೀಹವು (*Spleen*) ದೊಡ್ಡದಾಗಿ ಸಾವು ಸಂಭವಿಸಬಹುದು. ಜ್ವರದ ಪ್ರಕರಣಗಳಲ್ಲಿ ರಕ್ತಲೇಪನಗಳನ್ನು ತೆಗೆದುಕೊಂಡು ರಕ್ತ ಪರೀಕ್ಷೆ ಮಾಡಲಾಗುವುದು

ಮತ್ತು ಮಲೇರಿಯಾ ಪ್ರಕರಣ ಎಂದು ಖಚಿತಪಟ್ಟಲ್ಲಿ ಕ್ಲೋರೋಕ್ವಿನ್ ಮಾತ್ರೆಗಳನ್ನು ನೀಡಲಾಗುತ್ತದೆ. ರೋಗಪೀಡಿತ ಪ್ರದೇಶಗಳಲ್ಲಿ ಡಿಡಿಟಿಯಂತಹ ಕ್ರಿಮಿನಾಶಕಗಳನ್ನು ಸಿಂಪಡಿಸಲಾಗುವುದು. ರೋಗದ ವಿರುದ್ಧ ಜಾಗ್ರತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆರೋಗ್ಯ ಕಾರ್ಯಕರ್ತರಿಗೆ ವಹಿಸಲಾಗಿದ್ದು, ಅವರು ಎರಡು ವಾರಕ್ಕೊಮ್ಮೆ ಮನೆಮನೆಗೆ ಭೇಟಿ ನೀಡಿ ಜ್ವರ ಪ್ರಕರಣಗಳಿದ್ದವರಿಂದ ರಕ್ತಲೇಪನಗಳನ್ನು ಪಡೆದು ಪ್ರಾರಂಭಿಕ ಚಿಕಿತ್ಸೆಯಾಗಿ ಕ್ಲೋರೋಕ್ವಿನ್ ಮಾತ್ರೆ ನೀಡುವರು. ಅಲ್ಲದೆ, ಸಂಗ್ರಹಿಸಿದ ರಕ್ತಲೇಪನಗಳನ್ನು ಆ ಪ್ರದೇಶಕ್ಕೆ ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೀಡಿ ರಕ್ತಲೇಪನ ಪರೀಕ್ಷೆ ನಡೆಸಲಾಗುತ್ತದೆ. ರೋಗ ಪ್ರಕರಣ ಖಚಿತಪಟ್ಟಲ್ಲಿ ಮಲೇರಿಯಾ ರೋಗದ ಸಕಾಲಿಕ ಸೂಕ್ತ ಚಿಕಿತ್ಸಾ ಸೌಲಭ್ಯ ಒದಗಿಸುವುದಲ್ಲದೆ ರೋಗ ಹರಡುವುದನ್ನು ತಡೆಗಟ್ಟಲು ಸಮುದಾಯ ಸಂಪರ್ಕ ರಕ್ತ ಸಮೀಕ್ಷೆ ಮತ್ತು ಕ್ರಿಮಿನಾಶಕ ಸಿಂಪಡಣೆ ಕಾರ್ಯವನ್ನು ಆರೋಗ್ಯ ಇಲಾಖೆ ಕೈಗೊಳ್ಳುವುದು. ೧೯೭೭ರಲ್ಲಿ ಭಾರತ ಸರ್ಕಾರವು ನೀಡಿದ ಹೊಸ ಮಾರ್ಗಸೂತ್ರಗಳ ಸುಧಾರಿತ ಕ್ರಮದಿಂದ ಮಲೇರಿಯಾ ಶೇಕಡಾ ೫೦ರಷ್ಟು ಕಡಿಮೆಯಾಗಿರುವುದು ಕಂಡುಬಂದಿದೆ. ಮಲೇರಿಯಾ ನಿಯಂತ್ರಣ ಪರೀಕ್ಷೆ ಹಾಗೂ ಚಿಕಿತ್ಸೆಯನ್ನು ಜಿಲ್ಲೆಯ ಎಲ್ಲಾ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ನಿರ್ವಹಿಸುತ್ತವೆ.

## ಮಲೇರಿಯಾ ನಿಯಂತ್ರಣಕ್ಕೆ ತೆಗೆದುಕೊಂಡ ಕ್ರಮಗಳು

೧) ಸಮಸ್ಯಾತ್ಮಕವಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಕ್ಷೇತ್ರ ಸಿಬ್ಬಂದಿಯನ್ನು ಮಲೇರಿಯಾ ಸಮಸ್ಯಾತ್ಮಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸಿ ಜ್ವರದ ಪ್ರಕರಣಗಳ ಸಂಖ್ಯೆ ಹಾಗೂ ರಕ್ತಲೇಪನ ಸಂಗ್ರಹಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಿಲ್ಲೆಯಲ್ಲಿ ರೋಗದ ಶೀಘ್ರ ಪತ್ತೆ ಮತ್ತು ತ್ವರಿತ ಚಿಕಿತ್ಸೆಗೆ ಏರ್ಪಾಡು ಮಾಡುವುದು.

**ಕೋಷ್ಟಕ ೧೫.೨ : ಜಿಲ್ಲೆಯಲ್ಲಿ ವರದಿಯಾದ ಮಲೇರಿಯಾ ಖಚಿತ ಪ್ರಕರಣಗಳು**

| ಕ್ರ ಸಂ. | ತಾಲೂಕು | ೨೦೦೪ | | | | ೨೦೦೫ | | | | ೨೦೦೬ (ಫೆಬ್ರವರಿ ಅಂತ್ಯ) | | | | ಷರಾ |
|---|---|---|---|---|---|---|---|---|---|---|---|---|---|---|
| | | ಸಂಗ್ರಹಿಸಿ ಪರೀಕ್ಷಿಸಿದ ರಕ್ತಲೇಪನ | ಎಂ.ಪಿ. ಪ್ರಕರಣಗಳು | ಪಿ.ಎಫ್ | ಸಾವುಗಳು | ಸಂಗ್ರಹಿಸಿ ಪರೀಕ್ಷಿಸಿದ ರಕ್ತಲೇಪನ | ಎಂ.ಪಿ. ಪ್ರಕರಣಗಳು | ಪಿ.ಎಫ್ | ಸಾವುಗಳು | ಸಂಗ್ರಹಿಸಿ ಪರೀಕ್ಷಿಸಿದ ರಕ್ತಲೇಪನ | ಎಂ.ಪಿ. ಪ್ರಕರಣಗಳು | ಪಿ.ಎಫ್ | ಸಾವುಗಳು | |
| ೧ | ಉಡುಪಿ | ೮೫೩೨೦ | ೪೧೭ | ೩೪ | ೦ | ೮೮೯೯೮ | ೪೬೩ | ೨೯ | ೧ | ೧೨೨೫೬ | ೭೫ | ೩ | ೦ | ಮಲೇರಿಯಾ ಪ್ರಕರಣಗಳು ಜನವರಿಯಿಂದ ಡಿಸೆಂಬರ್ ಅಂತ್ಯ ದವರೆಗೆ |
| ೨ | ಕುಂದಾಪುರ | ೮೨೯೩೦ | ೧೦೭ | ೨೦ | ೧ | ೭೯೪೯೫ | ೧೧೭ | ೧೮ | ೦ | ೧೦೧೧೯ | ೨೯ | ೮ | ೦ | |
| ೩ | ಕಾರ್ಕಳ | ೪೭೯೨೬ | ೧೧೦ | ೫ | ೦ | ೫೭೯೫೮ | ೨೪೪ | ೩೬ | ೦ | ೬೨೭೭ | ೨೫ | ೧ | ೦ | |
| ೪ | ಉಡುಪಿಜಿಲ್ಲೆ | ೨೧೬೧೭೬ | ೬೩೪ | ೫೯ | ೨ | ೨೨೬೪೫೧ | ೮೨೪ | ೮೩ | ೧ | ೨೮೬೫೨ | ೧೨೯ | ೧೨ | ೦ | |

*ಆಧಾರ : ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಉಡುಪಿ*

೨) ಎಲ್ಲಾ ಪ್ರಯೋಗಶಾಲಾ ತಂತ್ರಜ್ಞರಿಗೆ ಸೂಕ್ತ ತರಬೇತಿ ನೀಡಿ ಮಲೇರಿಯಾ ರಕ್ತಲೇಪನಗಳ ಪರೀಕ್ಷೆ ಸೂಕ್ತ ಸಮಯದಲ್ಲಿ ಆಗುವಂತೆ ಕ್ರಮ ಕೈಗೊಳ್ಳುವುದು.

೩) ಖಚಿತ ಮಲೇರಿಯಾ ಪ್ರಕರಣಗಳಿಗೆ ಕೂಡಲೇ ತೀವ್ರ ಚಿಕಿತ್ಸೆ ನೀಡಿ ಸಮೂಹ ಹಾಗೂ ಸಂಪರ್ಕ ರಕ್ತಲೇಪನಗಳ ಸಂಗ್ರಹಣೆ ಮಾಡಿ ಪರೀಕ್ಷೆಗೆ ಒಳಪಡಿಸುವುದು.

೪) ಇಲಾಖೆಯ ನಿರ್ದೇಶನದಂತೆ ಹೆಚ್ಚು ಮಲೇರಿಯಾ ಪ್ರಕರಣಗಳು ವರದಿಯಾದ ಪ್ರಾದೇಶಿಕ ಆರೋಗ್ಯ ಕೇಂದ್ರಗಳಲ್ಲಿ ಕೀಟನಾಶಕ ಸಿಂಪಡಣೆಯನ್ನು (ಮೆಲಾಥಿಯನ್) ಮಾಡಿ ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದು.

೫) ಸಮಸ್ಯಾತ್ಮಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ನೀರಿನ ಮೂಲಗಳಿಗೆ ಲಾರ್ವಾಹಾರಿ ಗಪ್ಪಿ ಮೀನುಗಳನ್ನು ಹಾಕಿ ಜೈವಿಕ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದು.

೬) ಕೆಲವೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೀರಿನ ತೊಟ್ಟಿ ಕಟ್ಟಿಸಿ, ಗಪ್ಪಿ ಮೀನು ಬೆಳೆಸುವ ವ್ಯವಸ್ಥೆ ಮಾಡುವುದು. ಉಡುಪಿ ತಾಲೂಕಿನ ಮಲ್ಪೆ, ಪಡುಬದ್ರಿ, ಮೂಡಬೆಟ್ಟು,

ಕುಕ್ಕೆಹಳ್ಳಿ, ಶಿವಣ, ಕಡೆಗಳಲ್ಲಿ ಮೀನು ಸಾಕಣೆ ಕಾರ್ಯಕ್ರಮ ನಡೆಯುತ್ತಿದೆ. ಕಾರ್ಕಳ ತಾಲೂಕಿನ ಇರ್ವತ್ತೂರು, ಹಿರ್ಶಾನ, ಕುಂದಾಪುರ ತಾಲೂಕಿನ ಬಿದ್ಕಲ್ ಕಟ್ಟೆ, ಕೆದೂರು ಮತ್ತು ಕುಂಭಾಶಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗಪ್ಪಿ ಮೀನುಗಳನ್ನು ಬೆಳೆಸಲಾಗಿದೆ.

## ಆನೇಕಾಲು ರೋಗ (ಫೈಲೇರಿಯಾ)

ಇದು ಮೈಕ್ರೋ ಫೈಲೇರಿಯಾ ನಾಕ್ಟರ್ನಾ (*Microfilaria Nocturna*) ಎಂಬ ತಂತುವಿನಾಕಾರದ ಕ್ರಿಮಿಗಳಿಂದ ಉಂಟಾಗುವ ಒಂದು ಸಾಂಕ್ರಾಮಿಕ ರೋಗ. ಮಾರಕವಲ್ಲದಿದ್ದರೂ ಸಹ ಈ ರೋಗ ಒಂದು ಸಾಮಾಜಿಕ ಕಳಂಕವೆನ್ನುವಂತೆ, ರೋಗಿಯ ಕಾಲುಗಳು ಆನೆಯ ಕಾಲಿನಂತೆ ಊದಿಕೊಂಡು ಪೂರ್ವಸ್ಥಿತಿಗೆ ಬದಲಾಗದಂತಹ ಸ್ಥಿತಿ ಉಂಟುಮಾಡುತ್ತದೆ. ಇದರ ಸೋಂಕಿರುವ ವ್ಯಕ್ತಿಯ ದುಗ್ಧರಸ ಗ್ರಂಥಿಗಳಲ್ಲಿ ತಂತುವಿನಕಾರದ ಕ್ರಿಮಿಗಳು ನೆಲೆಗೊಂಡಿದ್ದು, ಈ ವ್ಯಕ್ತಿಯನ್ನು ಕಚ್ಚಿದ ಸೊಳ್ಳೆ ಅವನ ರಕ್ತದ ಜೊತೆ ಮೈಕ್ರೊಫೈಲೇರಿಯಾ ರೋಗಾಣುಗಳನ್ನು ಹೊತ್ತುಕೊಂಡು ಆರೋಗ್ಯವಂತ ಮನುಷ್ಯನನ್ನು ಕಚ್ಚಿದಾಗ, ಸೋಂಕು ಹರಡುತ್ತದೆ. ಹೀಗೆ ಈ ರೋಗ ಸೊಳ್ಳೆಗಳ ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ಹರಡಿ ಜನ ಸಮುದಾಯವನ್ನು ಪೀಡಿಸುತ್ತವೆ. ವಿಶೇಷವಾಗಿ ಈ ರೋಗ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಜಿಲ್ಲೆಯಲ್ಲಿ ಸಹ ಈ ಪಿಡುಗು ವಿಶೇಷವಾಗಿ ಕಂಡುಬಂದಿದೆ. ರಾಷ್ಟ್ರೀಯ ಆನೆಕಾಲು ರೋಗನಿಯಂತ್ರಣ ಘಟಕ ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ರೋಗ ನಿಯಂತ್ರಣ ಕಾರ್ಯದಲ್ಲಿ ತೊಡಗಿದೆ. ರೋಗಾಣುಗಳ ಸಾಂದ್ರತೆಯನ್ನು ಕಡಿಮೆ ಮಾಡಲು (ನಿಯಂತ್ರಿಸಲು) ವಾರಕ್ಕೊಮ್ಮೆ ತೀವ್ರ ಕ್ರಿಮಿನಾಶಕ ಸಿಂಪಡಣಾ ಕ್ರಮಗಳನ್ನು ಕೈಗೊಳ್ಳುವುದು, ಫೈಲೇರಿಯಾ ಚಿಕಿತ್ಸಾಲಯಗಳು ಸೂಕ್ಷ್ಮ ಫೈಲೇರಿಯಾ ಪ್ರಕರಣಗಳನ್ನು ಪತ್ತೆಹಚ್ಚಲು ಪರೋಪ ಜೈವಿಕ ಸಮೀಕ್ಷೆ ನಡೆಸಿ ೧೨ ದಿನಗಳ ಕಾಲ ರೋಗಿಗೆ ಡಿ.ಇ.ಸಿ. (*Diethyl Earbamazine Citrate*) ಮಾತ್ರೆಗಳನ್ನು ನೀಡುವುದು, ಕ್ರಮಗಳಾಗಿವೆ. ೧೯೫೫ ರಿಂದ ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮ ಜಾರಿಯಲ್ಲಿದ್ದು, ಜಿಲ್ಲೆಯಲ್ಲಿ ರೋಗದ ನಿಯಂತ್ರಣ, ರೋಗ ಹರಡುವಿಕೆಯನ್ನು ತಡೆಯುವ ಕ್ರಮಗಳನ್ನು ಕೈಗೊಂಡಿದೆ. ಉಡುಪಿಯು ೯.೬% ಸೋಂಕಿನ ದರ ಹೊಂದಿದ್ದು ರೋಗ ತಗುಲಿದ ಪ್ರಮಾಣ ೧.೮ % ಆಗಿದೆ. ಸೊಳ್ಳೆಗಳ ನಿಯಂತ್ರಣ ಸೋಂಕಿನ ಹರಡುವಿಕೆ ತಡೆಗಟ್ಟುತ್ತದೆ. ಉಡುಪಿ ತಾಲೂಕಿನ ಮಲ್ಪೆಯಲ್ಲಿ ಆನೆಕಾಲು ರೋಗ ಚಿಕಿತ್ಸಾ ಘಟಕವು ಕಾರ್ಯನಿರ್ವಹಿಸುತ್ತಿದೆ. ೧೯೯೩–೯೪ನೇ ಸಾಲಿನಲ್ಲಿ ಹೊಸದಾಗಿ ಕುಂದಾಪುರ ತಾಲೂಕಿಗೆ ಇನ್ನೊಂದು ಘಟಕದ ಮಂಜೂರಾತಿ ದೊರಕಿದೆ.

ಜಿಲ್ಲೆಯಲ್ಲಿ ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮದಡಿ ೨೦೦೪ರ ಜೂನ್ ೫ನೇ ತಾರೀಖಿನಂದು ಸಾಮೂಹಿಕ ಔಷಧಿ ನೀಡಿಕೆ ಕಾರ್ಯಕ್ರಮ ಕೈಗೊಂಡಿದ್ದು ಜಿಲ್ಲೆಯ ೧೧,೩೧,೩೮೩ ಜನಸಂಖ್ಯೆಯಲ್ಲಿ ೧೦,೫೮,೪೫೦ ಜನರಿಗೆ ಡಿ.ಇ.ಸಿ. ಮಾತ್ರೆಗಳನ್ನು ವಿತರಿಸಿ ಶೇಕಡಾ ೯೧ ಸಾಧನೆ ಮಾಡಲಾಯಿತು. ಜಿಲ್ಲೆಯ ಮೂರು ತಾಲೂಕುಗಳಲ್ಲಿ ಫೈಲೇರಿಯಾ ಸಮೀಕ್ಷೆ ನಡೆಸಿ ಒಟ್ಟು

**ಕೋಷ್ಟಕ ೧೫.೩ : ಜಿಲ್ಲೆಯಲ್ಲಿ ವರದಿಯಾದ ಫೈಲೇರಿಯಾ ಪ್ರಕರಣಗಳು**

| ಕ್ರ.ಸಂ. | ತಾಲೂಕು | ಅಂಗವಿಕಲರು | | ವೃಷಣ | ಎದೆ | ಇತರೆಭಾಗ | ಒಟ್ಟು | |
|---|---|---|---|---|---|---|---|---|
| | | ಕಾಲು | ಕೈ | | | | ೨೦೦೪–೦೫ | ೨೦೦೫–೦೬ |
| ೧ | ಉಡುಪಿ | ೪೫೫ | ೨೪ | ೧೫೫ | ೧ | ೩ | ೬೩೮ | ೬೪೧ |
| ೨ | ಕುಂದಾಪುರ | ೨೪೦ | ೧೧ | ೯೨ | ೩ | – | ೩೪೬ | ೩೨೫ |
| ೩ | ಕಾರ್ಕಳ | ೭೦ | ೩ | ೨೯ | – | – | ೧೦೨ | ೧೦೩ |
| | ಜಿಲ್ಲೆಯ ಒಟ್ಟು | ೭೬೫ | ೩೮ | ೨೭೬ | ೪ | ೩ | ೧೦೮೬ | ೧೦೬೯ |

*ಮೂಲ: ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಉಡುಪಿ,*

೧೦೬೯ ಫೈಲೇರಿಯಾ ಪ್ರಕರಣಗಳನ್ನು ದಾಖಲಿಸಲಾಯಿತು. ಅದರಂತೆ ೨೦೦೫ನೇ ನವೆಂಬರ್ ೧೧ನೇ ತಾರೀಖಿನಂದು ಕೂಡಾ ಸಾಮೂಹಿಕ ಔಷಧಿ ನೀಡುವ ಕಾರ್ಯಕ್ರಮವನ್ನು ಕೈಗೊಂಡು ೧೦,೫೨,೩೧೪ ಮಂದಿಗೆ ಡಿಇಸಿ ಮಾತ್ರೆಗಳನ್ನು ವಿತರಿಸಿ ಶೇ.೯೧ರಷ್ಟು ಸಾಧನೆ ಮಾಡಲಾಯಿತು.

**ಕೋಷ್ಟಕ. ೧೫.೪ : ಆನೇಕಾಲು ರೋಗ ಪರೀಕ್ಷಾ ಕೇಂದ್ರಗಳಲ್ಲಿ ಕೈಗೊಂಡ ರಕ್ತ ತಪಾಸಣಾ ವಿವರ**

| ಕ್ರ. ಸಂ. | | | ೨೦೦೪ | | ೨೦೦೫ | | ೨೦೦೬ ಫೆಬ್ರವರಿಯವರೆಗೆ | |
|---|---|---|---|---|---|---|---|---|
| | | | ಸಂ.ರಕ್ತಲೇಪನ | ಎಫ್.ಎಂ.ಪಾಸಿಟಿವ್ | ಸಂ.ರಕ್ತಲೇಪನ | ಎಫ್.ಎಂ.ಪಾಸಿಟಿವ್ | ಸಂ.ರಕ್ತಲೇಪನ | ಎಫ್.ಎಂ.ಪಾಸಿಟಿವ್ |
| ೧ | ಉಡುಪಿ ನಗರ ಘಟಕ | ಫೈಲೇರಿಯ | ೪೯ | – | ೬೭೨ | – | ೧೦೪ | – |
| ೨ | ಸಾರ್ವಜನಿಕ ಆಸ್ಪತ್ರೆ | ಕುಂದಾಪುರ ಫೈಲೇರಿಯಕ್ಲಿನಿಕ್ | ೮೭೬೪ | ೬೪ | ೪೭೦೬೬ | ೧೧ | ೩೬೬ | – |
| ೩ | ಪ್ರಾಥಮಿಕ ಮಲ್ಪೆ ಆರೋಗ್ಯ ಕೇಂದ್ರ | ಫೈಲೇರಿಯಕ್ಲಿನಿಕ್ | ೧೩೮೯ | ೨ | ೪೩೦ | ೧ | ೨೭ | – |

*ಆಧಾರ: ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಉಡುಪಿ*

## ಕ್ಷಯರೋಗ

'ಕ್ಷಯರೋಗ' ಈಗಲೂ ಸಹ ಒಂದು ಪ್ರಮುಖ ಆರೋಗ್ಯ ಸಮಸ್ಯೆಯಾಗಿ ಮುಂದುವರೆದಿದೆ. ಮೈಕ್ರೊಬ್ಯಾಕ್ಟೇರಿಯಾ ಎಂಬ ರೋಗಾಣುವಿನಿಂದ ಈ ರೋಗ ಉಂಟಾಗುತ್ತದೆ. ಆರೋಗ್ಯ ಸೇವೆಗಳಲ್ಲಿ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ಸಂಯೋಜಿಸಿ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಕ್ಷಯರೋಗ ಕೇಂದ್ರಗಳನ್ನು ತೆರೆದು ಅವುಗಳಿಗೆ ತರಬೇತಿ ಪಡೆದ ವೈದ್ಯ ಹಾಗೂ ಇವರ ಸಿಬ್ಬಂದಿ ನೇಮಿಸಿ ಆ ಮೂಲಕ ನಿಯಂತ್ರಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತದೆ. ರೋಗದ ಪ್ರಾಥಮಿಕ ಸೋಂಕಿನ ಉಲ್ಬಣತೆಯನ್ನು ಬಿ.ಸಿ.ಜಿ. ಚುಚ್ಚುಮದ್ದು ನೀಡುವ ಮೂಲಕ ತಡೆಯಲಾಗುವುದು. ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮಗಳ ಉಸ್ತುವಾರಿ ಹೊಂದಿದ್ದಾರೆ. ಕಡಿಮೆ ಅವಧಿಯ ಚಿಕಿತ್ಸಾ ಕ್ರಮವನ್ನು ಈ ಜಿಲ್ಲೆಯಲ್ಲೂ ಅಳವಡಿಸಲಾಗಿದೆ. ಜಿಲ್ಲಾ ಕ್ಷಯರೋಗ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳು 'ಕ್ಷ' ಕಿರಣ ಮತ್ತು ಕಫ ಪರೀಕ್ಷಾ ಸೌಲಭ್ಯಗಳನ್ನು ಪಡೆದಿವೆ. ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿ ೨೦೦೪-೦೫ ಹಾಗೂ ೨೦೦೫-೦೬ (ಫೆಬ್ರವರಿಯವರೆಗೆ) ಸಾಧಿಸಿದ ಪ್ರಗತಿ ಈ ಕೆಳಗಿನಂತಿದೆ.

| ವರ್ಷ | ಹೊಸ ರೋಗಿಗಳ ಪತ್ತೆ | ಕ್ಷಯರೋಗಿಗಳನ್ನು ಗುಣಪಡಿಸಿದ ಸಂಖ್ಯೆ |
|---|---|---|
| ೨೦೦೪-೦೫ | ೧೨೫೦ | ೧೦೭೫ |
| ೨೦೦೫-೦೬ ಫೆಬ್ರವರಿ ಅಂತ್ಯಕ್ಕೆ | ೧೧೮೩ | ೧೦೨೯ |

ಉಡುಪಿ, ಜಿಲ್ಲಾ ಕೇಂದ್ರವಾದಂದಿನಿಂದ ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರವು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಯ ಅಧೀನದಲ್ಲಿ ಹಿರಿಯ ಆರೋಗ್ಯ ಸಹಾಯಕರು, ಪ್ರಯೋಗ ಶಾಲಾ ತಜ್ಞರು, ಒಬ್ಬ ಕ್ಷ-ಕಿರಣ ತಜ್ಞ ಹಾಗೂ ಇನ್ನಿತರ ಸಿಬ್ಬಂದಿ ಇದೆ. ಕಫ ತಪಾಸಣೆ, ಔಷಧಿ ವಿತರಣೆ, ಆರೋಗ್ಯ ಶಿಕ್ಷಣ ಮುಂತಾದವು ಈ ಕಾರ್ಯಾಲಯದ ಚಟುವಟಿಕೆಗಳಾಗಿವೆ. ಕೇಂದ್ರವು ಜಿಲ್ಲೆಯ ಎಲ್ಲಾ ಹಂತಗಳ ಆರೋಗ್ಯ ಸಂಸ್ಥೆಗಳೊಂದಿಗೆ ಸಹಕರಿಸುತ್ತದೆ. ಅಲ್ಪಾವಧಿ ಹಾಗೂ ದೀರ್ಘಾವಧಿ ಚಿಕಿತ್ಸೆಗಳನ್ನು ರೋಗಿಗಳಿಗೆ ನೀಡಲಾಗುತ್ತದೆ. ಜನಶಿಕ್ಷಣ ಅಭಿಯಾನವನ್ನು ಸಹ ಕಾರ್ಯಾಲಯ ಕೈಗೊಳ್ಳುತ್ತದೆ. ಜಿಲ್ಲೆಯಲ್ಲಿ ೨೦೦೩-೦೪ರಲ್ಲಿ ೧೫೪೨ ಕ್ಷಯರೋಗಿಗಳು ಪತ್ತೆ ಆಗಿದ್ದು ೧,೪೮೩ ಗುಣಮುಖರಾಗಿದ್ದಾರೆ.

## ಡೆಂಗಿ ಜ್ವರ (ಡೆಂಗ್ಯೂ)

ಡೆಂಗಿ ಜ್ವರ ಮಾರಕ ಕಾಯಿಲೆಯಾಗಿದ್ದು ಮಕ್ಕಳಲ್ಲಿ ತೀವ್ರ ಸ್ವರೂಪದಲ್ಲಿ ಉಂಟಾಗುತ್ತದೆ. ಇದು ಡೆಂಗಿ ಎಂಬ ವೈರಸ್‌ನಿಂದ ಉಂಟಾಗುತ್ತದೆ. ಈಡಿಸ್–ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಹರಡುತ್ತದೆ. ಡೆಂಗಿಯಲ್ಲಿ ಮೂರು ವಿಧಗಳು – ೧) ಸಾಮಾನ್ಯ ಡೆಂಗಿ ೨) ಡೆಂಗಿ ರಕ್ತಸ್ರಾವ (ಡಿ.ಎಚ್.ಎಫ್) ಹಾಗೂ ೩) ಡೆಂಗಿ ಶಾಕ್ ಸಿಂಡ್ರೋಮ್ (ಡಿ.ಎಸ್.ಎಸ್.). ತೀವ್ರಜ್ವರ, ವಿಪರೀತ ತಲೆನೋವು ಹಾಗೂ ಮಾಂಸಖಂಡ ಕೀಲುನೋವುಗಳು ರೋಗದ ಪ್ರಮುಖ ಲಕ್ಷಣಗಳಾಗಿವೆ. ಈ ರೋಗಕ್ಕೆ ನಿರ್ದಿಷ್ಟವಾದ ಔಷಧಿ ಇರುವುದಿಲ್ಲ. ರೋಗ ಬಂದಾಗ ದ್ರವ ಆಹಾರ ಕೊಡುವುದು, ಪ್ಯಾರಸಿಟಿಮಾಲ್‌ದಂತಹ ಮಾತ್ರೆಗಳನ್ನು ಪೂರ್ವಭಾವಿ ಚಿಕಿತ್ಸೆಯಾಗಿ ನೀಡಿ, ರೋಗಿಯನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಬೇಕು. ಡೆಂಗಿ ರಕ್ತಸ್ರಾವ ಜ್ವರ ಮಕ್ಕಳಲ್ಲಿ ತೀವ್ರವಾಗಿ ಕಂಡುಬರುವುದಲ್ಲದೆ ಇದು ಬಹಳ ಅಪಾಯಕಾರಿ. ವಿಪರೀತ ಜ್ವರದ ನಂತರ ರಕ್ತಸ್ರಾವ, ಮೈ ಊತ, ರಕ್ತ ಒತ್ತಡ ಕುಸಿದು ಮರಣ ಸಂಭವಿಸಬಹುದಾಗಿದೆ.

ರೋಗದಿಂದ ಬಳಲುವ ವ್ಯಕ್ತಿಯನ್ನು ಈಡಿಸ್–ಈಜಿಪ್ಟೈ ಸೊಳ್ಳೆ ಕಚ್ಚಿದಾಗ ಅದು ಡೆಂಗಿ ವೈರಸ್ ಅನ್ನು ಪಡೆದುಕೊಳ್ಳುತ್ತದೆ. ಈ ಸೊಳ್ಳೆ ಆರೋಗ್ಯವಂತ ವ್ಯಕ್ತಿಯನ್ನು ಕಚ್ಚಿದಾಗ ಅವನಿಗೆ ಡೆಂಗಿ ಜ್ವರ ಬರುತ್ತದೆ. ಸೊಳ್ಳೆಗಳು ರೋಗವಾಹಕಗಳು. ಆದ್ದರಿಂದ ಸೊಳ್ಳೆ ತಾಣಗಳನ್ನು ನಾಶಪಡಿಸಿ ಸೊಳ್ಳೆಗಳಿಂದ ರಕ್ಷಣೆ ಪಡೆಯುವ ಮುಂಜಾಗ್ರತಾ ಕ್ರಮ ಅನುಸರಿಸುವುದು ಸೂಕ್ತ. ಡೆಂಗಿ ಜ್ವರವು ಹಗಲಿನಲ್ಲಿ ಕಚ್ಚುವ ಸೊಳ್ಳೆಗಳಿಂದ ಬರುತ್ತವೆ. ಇದು ಮಕ್ಕಳಿಗೂ ಹಾಗೂ ವಯಸ್ಕರಿಗೂ ಬರಬಹುದು. ೨೦೦೫ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನಲ್ಲಿ ಒಂದು ಹಾಗೂ ಕಾರ್ಕಳ ತಾಲೂಕಿನಲ್ಲಿ ಒಂದು ಹೀಗೆ ಎರಡು ಪ್ರಕರಣಗಳು ವರದಿಯಾಗಿದ್ದು ಕಾರ್ಕಳ ತಾಲೂಕಿನಲ್ಲಿ ಈ ಜ್ವರದಿಂದ ಒಂದು ಸಾವು ಉಂಟಾಗಿರುತ್ತದೆ. ೨೦೦೪ ಸಾಲಿನಲ್ಲಿ ಯಾವುದೇ ಡೆಂಗಿಜ್ವರ ಪ್ರಕರಣ ವರದಿಯಾಗಿಲ್ಲ.

## ಇಲಿ ಜ್ವರ

ಇಲಿ ಜ್ವರವು 'ತಿಪ್ಟೋಸ್ಪೈ' ಎಂಬ ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆ. ಈ ರೋಗವು ಮುಖ್ಯವಾಗಿ ಇಲಿ, ನಾಯಿ, ಹಂದಿ, ಹಸು ಮುಂತಾದ ಸಾಕುಪ್ರಾಣಿಗಳಿಂದ ಮನುಷ್ಯನಿಗೆ ಹರಡುತ್ತದೆ. ಮೇಲೆ ಹೇಳಿದ ರೋಗಪೀಡಿತ ಸಾಕುಪ್ರಾಣಿಗಳ ಮಲಮೂತ್ರದ ಮೂಲಕ ರೋಗಾಣುಗಳು ಮಣ್ಣು ಹಾಗೂ ನೀರನ್ನು ಸೇರುತ್ತವೆ. ಅವು ಬಹಳ ಕಾಲ ಅಲ್ಲಿಯೇ ಜೀವಿಸಿರುತ್ತವೆ. ಮಣ್ಣು ಮಿಶ್ರಿತ ಬ್ಯಾಕ್ಟೀರಿಯಾ ಇರುವ ನೀರು ಚರ್ಮದಲ್ಲಿಯ ಗಾಯದ ಮೂಲ ಇಲ್ಲವೇ ಕಣ್ಣು ಮೂಗಿನ ಮೂಲಕ ಮನುಷ್ಯನ ದೇಹ ಪ್ರವೇಶಿಸಿ ರೋಗ ಉಂಟುಮಾಡುತ್ತವೆ. ಮಳೆಗಾಲದಲ್ಲಿ ರೋಗ ಬಹುವಾಗಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಈ ರೋಗವು ಬರೆಕಾಲಿನಲ್ಲಿ ಭತ್ತದ ಗದ್ದೆಗಳಲ್ಲಿ ಇಲ್ಲವೇ ಮಣ್ಣಿನ ಕೆಲಸದಲ್ಲಿ ತೊಡಗಿರುವವರಿಗೆ ಹೆಚ್ಚಾಗಿ ಕಂಡುಬರುತ್ತದೆ. ತೀವ್ರ ಚಳಿಜ್ವರ, ತಲೆನೋವು ಮೈಕೈನೋವು, ವಾಂತಿ, ಕಾಮಾಲೆ ರೋಗಗಳು ಇಲಿಜ್ವರದ ಲಕ್ಷಣಗಳಾಗಿವೆ. ರೋಗ ಪೀಡಿದ ವ್ಯಕ್ತಿಯ ಮೂತ್ರ ಮತ್ತು ರಕ್ತ ಪರೀಕ್ಷೆಯಿಂದ ರೋಗವನ್ನು ಪತ್ತೆ ಹಚ್ಚಬಹುದು. ರೋಗ ಕಂಡುಬಂದಲ್ಲಿ ಸೂಕ್ತ ಚಿಕಿತ್ಸೆಯನ್ನು ನೀಡಬೇಕು. ಸಕಾಲದಲ್ಲಿ ಚಿಕಿತ್ಸೆ ನೀಡದಿದ್ದಲ್ಲಿ ಸಾವು ಸಂಭವಿಸಬಹುದು. ಇದು ಸಾಂಕ್ರಾಮಿಕ ರೋಗವಲ್ಲ. ಜಿಲ್ಲೆಯಲ್ಲಿ ಇಲಿಜ್ವರವು ೨೦೦೫–೦೬ರಲ್ಲಿ ೪೯ ಪ್ರಕರಣಗಳು ದಾಖಲಾಗಿದ್ದು, ೧೦ ಜನ ಮರಣ ಹೊಂದಿದ್ದಾರೆ. ಅದರಂತೆ ೨೦೦೬–೦೭ನೇ ಸಾಲಿನಲ್ಲಿ ೪೬ ಇಲಿಜ್ವರ ಪ್ರಕರಣಗಳು ಪತ್ತೆಯಾಗಿದ್ದು, ನಾಲ್ಕು ಜನ ಮರಣ ಹೊಂದಿದ್ದಾರೆ.

ಜಿಲ್ಲೆಯಲ್ಲಿ ೨೦೦೪, ೨೦೦೫ ಹಾಗೂ ೨೦೦೬ನೇ ಸಾಲಿನಲ್ಲಿ ಹರಡಿದ ಸಾಂಕ್ರಾಮಿಕ ರೋಗಗಳು, ಶಂಕಿತ ರೋಗಪ್ರಕರಣಗಳ ಸಂಖ್ಯೆ ಹಾಗೂ ಸಂಭವಿಸಿದ ಮರಣ ಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ. ೧೫.೫**

| ಕ್ರ.ಸಂ. | ರೋಗಗಳು | ೨೦೦೪ | | ೨೦೦೫ | | ೨೦೦೬ | |
|---|---|---|---|---|---|---|---|
| | | ಪ್ರಕರಣ | ಮರಣ | ಪ್ರಕರಣ | ಮರಣ | ಪ್ರಕರಣ | ಮರಣ |
| ೧ | ಕರಳುಬೇನೆ | ೪೯೭ | ೦ | ೫೭೦ | ೦ | ೬೧೧ | ೦ |
| ೨ | ಕಾಲರಾ | ೨೧ | ೦ | ೧ | ೦ | ೧ | ೦ |
| ೩ | ವಿಷಮಶೀತ ಜ್ವರ | ೫೫೪ | ೦ | ೩೨೯ | ೦ | ೩೦೫ | ೦ |
| ೪ | ಕಾಮಾಲೆ | ೨೦೮ | ೦ | ೫೪೯ | ೧ | ೧೩೦ | ೦ |
| ೫ | ಇಲಿ ಜ್ವರ | ೪೬ | ೬ | ೪೯ | ೧೦ | ೪೬ | ೪ |

*ಆಧಾರ: ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಉಡುಪಿ*

## ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ

ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿಯನ್ನು ೧೯೭೭ರಲ್ಲಿ ಆರೋಗ್ಯ ಇಲಾಖೆಯಿಂದ ಬೇರ್ಪಡಿಸಿ ಇದನ್ನು ಪ್ರತ್ಯೇಕ ನಿರ್ದೇಶನಾಲಯವನ್ನಾಗಿ ರಾಜ್ಯದಲ್ಲಿ ರಚಿಸಲಾಯಿತು. ಈ ನಿರ್ದೇಶನಾಲಯವು ಆಯುರ್ವೇದ ಯುನಾನಿ, ಸಿದ್ಧ, ಪ್ರಕೃತಿ ಚಿಕಿತ್ಸೆ, ಯೋಗ ಮತ್ತು ಹೋಮಿಯೋಪತಿ ವೈದ್ಯಪದ್ಧತಿಗಳನ್ನು ಒಳಗೊಂಡಿರುತ್ತದೆ. ದೇಶೀಯ ವೈದ್ಯಪದ್ಧತಿಗಳ ಅಭಿವೃದ್ಧಿ, ಜನಸಾಮಾನ್ಯರಿಗೆ ಆರೋಗ್ಯ ಸೇವೆ ಒದಗಿಸುವುದು, ಆಯುರ್ವೇದ ಹಾಗೂ ಯುನಾನಿ ಔಷಧಿಗಳ ತಯಾರಿಕೆಯ ಮೇಲೆ ನಿಯಂತ್ರಣ ಇವೆ ಮುಂತಾದ ಕಾರ್ಯಜವಾಬ್ದಾರಿಗಳನ್ನು ನಿರ್ದೇಶನಾಲಯ ಹೊಂದಿದೆ. ಔಷಧಿ ಸಸ್ಯ ಹಾಗೂ ಗಿಡಮೂಲಿಕೆಗಳಿಗೆ ಸಂಬಂಧಿಸಿದ ತೋಟಗಳ ನಿರ್ಮಾಣ ಕಾರ್ಯವನ್ನು ಸಹ ಇದು ನಿರ್ವಹಿಸುತ್ತವೆ. ಈಗ ಈ ನಿರ್ದೇಶನಾಲಯದ ಆಡಳಿತ ಜವಾಬ್ದಾರಿಯನ್ನು ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳಿಗೆ ವಹಿಸಿಕೊಡಲಾಗಿದೆ.

## ಆಯುರ್ವೇದ

ಪ್ರಾಚೀನ ಆಯುರ್ವೇದವು, ಭಾರತೀಯ ವೈದ್ಯಪರಂಪರೆಯಲ್ಲಿ ಸಹಸ್ರಾರು ವರ್ಷಗಳ ಇತಿಹಾಸ ಹೊಂದಿರುವ ಒಂದು ಸತ್ವಶಾಲಿ ವೈದ್ಯಶಾಸ್ತ್ರ ಭಂಡಾರವಾಗಿದೆ. ಇದರ ಆವಿಷ್ಕಾರವು ವೇದಕಾಲದಲ್ಲಿ ಆಗಿದ್ದು, ಇಂದಿಗೂ ಜನರ ವಿಶ್ವಾಸಕ್ಕೆ ಪಾತ್ರವಾದ ಜನಪ್ರಿಯ ದೇಶೀಯ ವೈದ್ಯ ಪದ್ಧತಿ ಎನಿಸಿದೆ. ಭಾರತದಲ್ಲಷ್ಟೇ ಅಲ್ಲದೆ ಶ್ರೀಲಂಕಾ, ಟಿಬೆಟ್, ಚೈನಾ ಮತ್ತು ಅರಬ್ ರಾಷ್ಟ್ರಗಳವರೆಗೂ ಇದು ತನ್ನ ಪ್ರಭಾವ ಬೀರಿತ್ತು. ತಕ್ಷಶಿಲಾ, ನಳಂದಾ ವಿಶ್ವವಿದ್ಯಾಲಯಗಳು ಆಯುರ್ವೇದ, ಆಧ್ಯಾತ್ಮಗಳ ಬಗ್ಗೆ ಶಿಕ್ಷಣ ನೀಡುತ್ತಿದ್ದ ಬಗ್ಗೆ ದಾಖಲೆಗಳಿವೆ. ವೇದಗಳಲ್ಲಿ ವಿವಿಧ ರೋಗಗಳ ಬಗ್ಗೆ ಹಾಗೂ ಅವುಗಳ ಚಿಕಿತ್ಸೆ ಬಗ್ಗೆ ವಿವರಣೆ ಇದ್ದು, ವಾತ, ಪಿತ್ತ ಮತ್ತು ಕಫ ಮೂರು ದೋಷಗಳ ತತ್ವವನ್ನು (ತ್ರಿದೋಷ ಸಿದ್ಧಾಂತ) ಆಯುರ್ವೇದ ಹೊಂದಿದ್ದು ಈ ದೋಷಗಳು ವಿಕಾರಗೊಂಡಲ್ಲಿ ರೋಗ ಉಂಟಾಗುತ್ತವೆ. ಈ ತ್ರಿದೋಷಗಳ ವಿಕಾರ ನಿವಾರಣಾ ವಿಧಾನವನ್ನು ಆಯುರ್ವೇದ ತಿಳಿಸುತ್ತವೆ. ಸುಶ್ರುತ ಮತ್ತು ಚರಕ ಸಂಹಿತೆಗಳು ಭಾರತೀಯ ವೈದ್ಯಶಾಸ್ತ್ರಕ್ಕೆ ಬುನಾದಿ ಎನಿಸಿದ್ದು ಪ್ರಮುಖ ಗ್ರಂಥಗಳೆನಿಸಿವೆ. ಈಗ ಆಯುರ್ವೇದದ ಮೇಲೆ ಹಲವಾರು ಕನ್ನಡ ಪುಸ್ತಕಗಳು ಸಹ ಲಭ್ಯವಿದೆ. ಪಾರಂಪರಿಕ ಶಿಕ್ಷಣ ಪಡೆದ ಅನೇಕ ವೈದ್ಯ ಕುಟುಂಬಗಳು ಈ ಜಿಲ್ಲೆಯಲ್ಲಿವೆ. ಕೇರಳ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಹೀಗೆ ಪ್ರಸಿದ್ಧಿ ಪಡೆದ ವೈದ್ಯವೃತ್ತಿಯನ್ನೇ ಅವಲಂಬಿಸಿರುವ ಮನೆತನಗಳಿವೆ. ಕೇರಳ ಮೂಲದಿಂದ ಬಂದ ನಂಬಿಯಾರ್ ಕುಟುಂಬದವರು ಉಡುಪಿ ಜಿಲ್ಲೆಯಲ್ಲಿ ನೆಲೆಸಿ ಆಯುರ್ವೇದ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಹಾಗೂ ತಮ್ಮದೇ ಆದ ಪರಂಪರೆ ಉಳಿಸಿ ಹೋಗಿದ್ದಾರೆ. ಬಾರಕೂರಿನಲ್ಲಿ ಈಗಲೂ ಕೂಡ ಅವರ ಪರಂಪರೆಯ ಧನ್ವಂತರಿ ವೈದ್ಯಶಾಲೆ ಇದ್ದು ಅದು ಪರಂಪರಾಗತ ಚಿಕಿತ್ಸೆ ಹಾಗೂ ಶಾಸ್ತ್ರೀಯ ಔಷಧಿಗಳಿಗೆ ಪ್ರಸಿದ್ಧವಾಗಿದೆ. ದಿವಂಗತ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು ಆಯುರ್ವೇದದ ವೈದ್ಯಕೀಯ ಅಭ್ಯಾಸವನ್ನು ಮಾಡಿದವ

ರಾಗಿದ್ದು, ಶ್ರೀಮದ್ ಭುವನೇಂದ್ರ ಮಹಾ ಔಷಧಾಲಯವನ್ನು ಉಡುಪಿಯಲ್ಲಿ ಮೊದಲಿಗರಾಗಿ ಪ್ರಾರಂಭಿಸಿದರು. ನಂತರದಲ್ಲಿ ಸ್ವದೇಶೀ ಔಷಧ ಭಂಡಾರ ಅಸ್ತಿತ್ವ ಪಡೆಯಿತು. ಆಯುರ್ವೇದ ಶಿಕ್ಷಣದ ಮಹತ್ವ ಅರಿತ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು, ಉಡುಪಿಯಲ್ಲಿ ಆಯುರ್ವೇದ ಕಾಲೇಜು ಪ್ರಾರಂಭಿಸಲು ಕಾರಣರಾದರು. ಈಗ ಅದೇ ಎಸ್.ಡಿ.ಎಂ ಆಯುರ್ವೇದ ಮಹಾವಿದ್ಯಾಲಯವಾಗಿ ಬೆಳೆದುನಿಂತಿದೆ. ಉಡುಪಿಯಲ್ಲಿ ಆಯುರ್ವೇದ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆ ನೀಡಿದ ಇನ್ನೊಂದು ಕುಟುಂಬ ದೈತೋಟರದು. ಮಣಿಪಾಲ ಪರಿಸರದಲ್ಲಿ ೪೦ ವರ್ಷಗಳಿಗೂ ಮೀರಿ ಸೇವೆ ಸಲ್ಲಿಸಿದ ದಿ.ಮನಿಯಾಲು ಕೃಷ್ಣ ವೈದ್ಯರು ಆಯುರ್ವೇದ ಚಿಕಿತ್ಸೆ ನೀಡುವಲ್ಲಿ ಬಹಳ ಪ್ರಸಿದ್ಧರು. ಮಧುಮೇಹ ರೋಗಕ್ಕೆ ಮೂಲಿಕೆಗಳನ್ನು ಸಂಗ್ರಹಿಸಿ ಔಷಧಿ ನೀಡುವಲ್ಲಿ ಪರಿಣಿತರಾಗಿದ್ದರು. ಅವರ ಪ್ರಯತ್ನದ ಫಲವೆನ್ನುವಂತೆ ಇಂದು ಉಡುಪಿಯ ಮಣಿಪಾಲದಲ್ಲಿ ಸುಸಜ್ಜಿತ ಮನಿಯಾಲ್ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಔಷಧಾಗಾರ ಪ್ರಾರಂಭಗೊಂಡಿವೆ. ಜಿಲ್ಲೆಯ ಕೊಲ್ಲೂರಿನ ಕುಡಚಾದ್ರಿ, ಕಾರ್ಕಳದ ಕುದುರೆಮುಖ ಅರಣ್ಯಪ್ರದೇಶ, ಉಡುಪಿ ಸುತ್ತಲಿನ ಪರಿಸರವಾದ ಮಣಿಪಾಲಗುಡ್ಡೆ, ಇಂದ್ರಾಳಿ, ಹೆಬ್ರಿ ಆಗುಂಬೆವರೆಗೆ ಮೂಲಿಕೆಗಳ ಬೃಹತ್ ಸಂಪತ್ತು ಇದ್ದು ಆಯುರ್ವೇದ ಔಷಧಿ ತಯಾರಿಕೆಗೆ ಸಹಕಾರಿಯಾಗಿದೆ. ಶಿಕ್ಷಣ ಸಂಸ್ಥೆಗಳ ಜೊತೆ ಈಗ ಇಲ್ಲಿ ಕೆಲವು ಆಯುರ್ವೇದ ಫಾರ್ಮಸಿಗಳು ತಲೆಯೆತ್ತಿ ನಿಂತಿವೆ. ಮೂಡುಬಿದಿರೆಯ 'ಭಾರತ ಫಾರ್ಮಸಿ' ಉಡುಪಿ ಜಿಲ್ಲೆಯ 'ರಾಜಶ್ರೀ ಫಾರ್ಮಸಿ'ಗಳು ಪಾರಂಪರಿಕ ಚಿಕಿತ್ಸೆಯಲ್ಲಿ ಇಂದಿಗೂ ಹೆಸರು ಮಾಡಿವೆ. ಈಗಲೂ ದೇಶವಿದೇಶಗಳಿಂದ ಆಯುರ್ವೇದ ಪಂಚಕರ್ಮ ಚಿಕಿತ್ಸೆಗಾಗಿ ರೋಗಿಗಳು ಈ ಜಿಲ್ಲೆಗೆ ಬರುತ್ತಿದ್ದು, ಜಿಲ್ಲೆಯಲ್ಲಿ ತಯಾರಾದ ಫಾರ್ಮಸಿ ಉತ್ಪನ್ನಗಳಿಗೆ ಮಾನ್ಯತೆ ಇದೆ. ಉಡುಪಿ ಜಿಲ್ಲೆ ಆಯುರ್ವೇದ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಪಡೆದಿದೆ.

## ಆರೋಗ್ಯ ಸಂಸ್ಥೆಗಳು

ಸಾರ್ವಜನಿಕರ ಸ್ವಾಸ್ಥ್ಯ ಕಾಪಾಡುವಲ್ಲಿ, ರೋಗ ನಿವಾರಣೆಗೆ ಚಿಕಿತ್ಸಾ ಸೇವೆ ಒದಗಿಸುವಲ್ಲಿ ಆರೋಗ್ಯ ಸಂಸ್ಥೆಗಳ ಪಾತ್ರ ಹಿರಿದಾಗಿದೆ. ಭಾರತ ಸರ್ಕಾರ ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮೀಣ ಆರೋಗ್ಯದ ಕಡೆಗೆ ಹೆಚ್ಚು ಒತ್ತು ನೀಡಿತಲ್ಲದೆ ಆರೋಗ್ಯ ಸೇವಾ ಜಾಲವನ್ನು ಹೆಚ್ಚಿಸುತ್ತಾ ಬಂದಿದೆ. ಎಲ್ಲಾ ಜನರಿಗೂ ಉತ್ತಮ ವೈದ್ಯಕೀಯ ಸೇವೆ ನೀಡುವ ಸರ್ಕಾರದ ನೀತಿಗನುಗುಣವಾಗಿ ಜಿಲ್ಲೆಯಲ್ಲಿ ತಜ್ಞ ವೈದ್ಯರಿಂದ ಕೂಡಿದ ಜಿಲ್ಲಾ ಆಸ್ಪತ್ರೆಗಳು, ವಿಶೇಷ ಚಿಕಿತ್ಸಾಲಯಗಳು, ತಾಲೂಕು ಮಟ್ಟದಲ್ಲಿ ಸಾರ್ವಜನಿಕ ಆಸ್ಪತ್ರೆಗಳು, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಘಟಕಗಳು ಹಾಗೂ ಉಪಕೇಂದ್ರಗಳನ್ನು ತೆರೆಯುವ ಮೂಲಕ ಆರೋಗ್ಯ ಸೇವೆಯನ್ನು ವಿಸ್ತರಿಸುತ್ತಾ ಬಂದಿದೆ. ಇವೇ ಅಲ್ಲದೆ ಖಾಸಗಿರಂಗದಲ್ಲಿಯೂ ಸಹ ನೂರಾರು ನರ್ಸಿಂಗ್ ಹೋಮ್‌ಗಳು, ಹೆರಿಗೆ ಆಸ್ಪತ್ರೆಗಳು, ಹೈಟೆಕ್ ಆಸ್ಪತ್ರೆಗಳು, ಚಿಕಿತ್ಸಾಲಯಗಳು ಪೂರಕವಾಗಿ ಆರೋಗ್ಯ ಸೇವೆ ಒದಗಿಸುತ್ತಿವೆ. ಇವುಗಳಲ್ಲಿ ಗಮನಿಸಬಹುದಾದ ಕೆಲವು ಆರೋಗ್ಯ ಸಂಸ್ಥೆಗಳ ಬಗ್ಗೆ ಈ ಕೆಳಗೆ ವಿವೇಚಿಸಲಾಗಿದೆ.

## ಜಿಲ್ಲಾ ಆಸ್ಪತ್ರೆ

ಈ ಆಸ್ಪತ್ರೆಯು ೧೮೭೨ರಷ್ಟು ಹಿಂದೆಯೇ ಲೋಕಲ್ ಫಂಡ್ ಆಸ್ಪತ್ರೆಯಾಗಿ ಆರಂಭಗೊಂಡಿತು. ಉಡುಪಿ ನಗರದ ಮಧ್ಯೆ ದಿ. ರಾವಬಹುದ್ದೂರ್ ಹಾಜಿ ಅಬ್ದುಲ್ಲಾರವರು ದಾನ ನೀಡಿದ ಎರಡು ಎಕರೆ ಜಮೀನಿನಲ್ಲಿ ಆಗ ಈ ಆಸ್ಪತ್ರೆ ನಿರ್ಮಾಣಗೊಂಡಿತ್ತು. ಕ್ರಮೇಣ ಮದ್ರಾಸು ಪ್ರಾಂತದ ಆಳ್ವಿಕೆಗೆ ಜಿಲ್ಲೆ ಒಳಪಟ್ಟ ಮೇಲೆ ಇದು ಸಿವಿಲ್ ಆಸ್ಪತ್ರೆಯಾಗಿ ಪರಿವರ್ತನೆಗೊಂಡು ಜಿಲ್ಲಾಮಟ್ಟದ ಸ್ಥಾನಮಾನ ಪಡೆದಿತ್ತು. ಪ್ರಸ್ತುತ ಜಿಲ್ಲಾ ಆಸ್ಪತ್ರೆಯು, ಹೆಂಗಸರು ಹಾಗೂ ಮಕ್ಕಳ ಸರಕಾರಿ ಆಸ್ಪತ್ರೆ ಎಂಬ ವಿಭಾಗವನ್ನೂ ಹೊಂದಿದ್ದು ಒಟ್ಟು ೨೦೦ ಹಾಸಿಗೆ ಸಾಮರ್ಥ್ಯ ಪಡೆದಿದೆ. ಈಗಿನ ಆಸ್ಪತ್ರೆಯಲ್ಲಿ ಲಭ್ಯವಿರುವ ಹಾಸಿಗೆಗಳ ಸಂಖ್ಯೆ ೨೫೦ ಆಗಿದ್ದು ಸುಮಾರು ೧೦ ಎಕರೆ ಪ್ರದೇಶದಲ್ಲಿ ಈ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದೆ. ಹೆಂಗಸರ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಯು ಜಿಲ್ಲಾ ಆಸ್ಪತ್ರೆಯ ಅಧೀನದಲ್ಲಿದೆ. ಜಿಲ್ಲಾ ಶಸ್ತ್ರಚಿಕಿತ್ಸಕರು ಮುಖ್ಯ

ವೈದ್ಯಾಧಿಕಾರಿಗಳಾಗಿ ಅವರ ನೆರವಿಗೆ ೧೪ ಹಿರಿಯ ತಜ್ಞವೈದ್ಯರು, ನಿವಾಸಿ ವೈದ್ಯಾಧಿಕಾರಿಗಳು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ಸಹಾಯಕ ದಂತ ಚಿಕಿತ್ಸಕರೂ ಸೇರಿದಂತೆ ೧೧೩ ಜನ ಸಿಬ್ಬಂದಿಯನ್ನು ಜಿಲ್ಲಾ ಆಸ್ಪತ್ರೆ ಹೊಂದಿದೆ. ಅದರಂತೆ ಆರು ಜನ ಹಿರಿಯ ತಜ್ಞವೈದ್ಯರು ಸೇರಿದಂತೆ ೬೨ ಜನ ಸಿಬ್ಬಂದಿಯನ್ನು ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ ಹೊಂದಿದೆ.

ಆಸ್ಪತ್ರೆಯು ವೈದ್ಯಕೀಯ ವಿಭಾಗ, ಶಸ್ತ್ರಚಿಕಿತ್ಸಾ ವಿಭಾಗ, ಎಲುಬು ಕೀಲು ವಿಭಾಗ, ಅಪಘಾತ ಮತ್ತು ಟ್ರೋಮಾ ಚಿಕಿತ್ಸೆ ವಿಭಾಗ, ಹೆರಿಗೆ ಮತ್ತು ಸ್ತ್ರೀ ರೋಗ ವಿಭಾಗ, ಕಿವಿ, ಮೂಗು, ಗಂಟಲು ವಿಭಾಗ, ಮನಃಶಾಸ್ತ್ರ ವಿಭಾಗ, ನೇತ್ರ ಚಿಕಿತ್ಸಾ ವಿಭಾಗ, ಚರ್ಮರೋಗ ಮತ್ತು ಲೈಂಗಿಕ ಚಿಕಿತ್ಸೆ, ಮಾನಸಿಕ ಚಿಕಿತ್ಸಾ ವಿಭಾಗ, ದಂತ ಚಿಕಿತ್ಸಾ ವಿಭಾಗ, ಮಕ್ಕಳ ಚಿಕಿತ್ಸಾ ವಿಭಾಗ, ತೀವ್ರ ನಿಗಾ ಘಟಕ, ಹೃದ್ರೋಗ ತೀವ್ರ ನಿಗಾ ಘಟಕ, ಕ್ಷಯರೋಗ ಚಿಕಿತ್ಸಾ (೨೪ ಹಾಸಿಗೆಗಳ ಸೌಲಭ್ಯ) ವಿಭಾಗ, ನವಜಾತ ಶಿಶು ತೀವ್ರ ನಿಗಾ ಘಟಕ, ತುರ್ತು ಚಿಕಿತ್ಸಾ ವಿಭಾಗ, ಕ್ಯಾನ್ಸರ್ ಪತ್ತೆ ವಿಭಾಗ, ಹೊರರೋಗಿ ವಿಭಾಗ, ಹೀಗೆ ಹಲವಾರು ವಿಭಾಗಗಳನ್ನು ಹೊಂದಿದೆ. ಇದಲ್ಲದೆ ಕ್ಷ ಕಿರಣ ಘಟಕ, ಸ್ಕ್ಯಾನಿಂಗ್ ಸೌಲಭ್ಯ, ಸುಸಜ್ಜಿತ ಪ್ರಯೋಗ ಶಾಲೆ, ಶಸ್ತ್ರಚಿಕಿತ್ಸೆ ಕೊಠಡಿ, ಪ್ರತ್ಯೇಕ ನೇತ್ರ ಶಸ್ತ್ರ ಚಿಕಿತ್ಸಾ ಕೊಠಡಿ, ಶೀತಲೀಕರಣ ವ್ಯವಸ್ಥೆಯುಳ್ಳ ಶವಾಗಾರ, ಹಿಮೋ ಡಯಾಲಿಸಿಸ್ ಘಟಕ, ಸುಸಜ್ಜಿತ ರಕ್ತನಿಧಿ, ರಕ್ತ ಶೇಖರಣೆಗೆ ಪ್ರತ್ಯೇಕ ವಾಹನ ವ್ಯವಸ್ಥೆ, ಏಡ್ಸ್ ಸಮಾಲೋಚನಾ ವಿಭಾಗ ಮದ್ಯ ವ್ಯಸನ ವಿಮುಕ್ತಿ ಚಿಕಿತ್ಸಾ ಕೇಂದ್ರ ಮುಂತಾದ ಸೌಲಭ್ಯಗಳನ್ನು ಈ ಆಸ್ಪತ್ರೆ ಪಡೆದಿದೆ. ನಿರಂತರ ವಿದ್ಯುತ್ ಪೂರೈಕೆಗೆ ೫೦ ಕೆ.ವಿ. ಜನರೇಟರ್, ಉಪಾಹಾರಗೃಹ, ವಾಹನ ನಿಲುಗಡೆ ಸ್ಥಳ, ಉದ್ಯಾನವನ, ಕಂಪ್ಯೂಟರೀಕೃತ ಹೊರ-ಒಳರೋಗಿ ನೋಂದಣಾ ವ್ಯವಸ್ಥೆ, ಕಚೇರಿ, ಹಾಗೂ ಉಗ್ರಾಣಗಳಿಗೆ ಕಂಪ್ಯೂಟರ್ ಅಳವಡಿಕೆಯೂ ಸೇರಿದಂತೆ ಎಲ್ಲಾ ರೀತಿಯ ಆಧುನಿಕ ಚಿಕಿತ್ಸಾ ಸೌಲಭ್ಯಗಳನ್ನು ಈ ಆಸ್ಪತ್ರೆ ಹೊಂದಿದೆ. ಆಸ್ಪತ್ರೆಯ ಸುತ್ತಮುತ್ತಲ ಪ್ರದೇಶದಲ್ಲಿ ಮಲೇರಿಯಾ, ಫೈಲೇರಿಯಾದಂತಹ ಸಾಂಕ್ರಾಮಿಕಗಳು ಕಂಡುಬರುತ್ತಿದ್ದು ಅವುಗಳಿಗೆ ಚಿಕಿತ್ಸೆಯನ್ನು ಆಸ್ಪತ್ರೆ ನೀಡುತ್ತಿದೆ. ವಿವರಗಳಿಗೆ ಕೋಷ್ಟಕ ೧೫.೬ ನೋಡಿ.

## ಸಾರ್ವಜನಿಕ ಆಸ್ಪತ್ರೆ – ಕುಂದಾಪುರ

ಈ ಆಸ್ಪತ್ರೆಯು ೧೮೭೩ರಷ್ಟು ಹಿಂದೆಯೇ ಸ್ಥಾಪನೆಗೊಂಡಾಗ ಜಿಲ್ಲಾ ಬೋರ್ಡಿನ ಆಡಳಿತಕ್ಕೆ ಒಳಪಟ್ಟಿತ್ತು. ಮುಂದೆ ೧೯೨೮ರಲ್ಲಿ, ಸರ್ಕಾರ ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಆಗ, ಇದು ೩೪ ಹಾಸಿಗೆಗಳ ಆಸ್ಪತ್ರೆ ಆಗಿದ್ದಿತು. ಪ್ರಸ್ತುತ ೧೦೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿದೆ. ಆಸ್ಪತ್ರೆಯ ಹೊರರೋಗಿ ವಿಭಾಗ, ರಕ್ತನಿಧಿ, ಕ್ಷ-ಕಿರಣ ಘಟಕ, ಪ್ರಯೋಗಶಾಲೆ, ಹಾಗೂ ಸುಸಜ್ಜಿತ

**ಕೋಷ್ಟಕ. ೧೫.೬ : ಜಿಲ್ಲಾ ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ:**

**ಸಂಖ್ಯೆಗಳಲ್ಲಿ**

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | ಸಾಮಾನ್ಯ ಸೇವೆಗಳು | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೧,೭೪,೨೬೧ | ೧,೪೮,೯೧೩ | ೧,೨೮,೫೭೭ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೬೨,೭೬೪ | ೬೬,೨೧೦ | ೬೩,೨೮೪ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆಗಳು | ೧,೭೭೮ | ೧,೬೨೫ | ೧,೫೫೧ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆಗಳು) | ೭೮೧ | ೯೮ | ೫೭೫ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೨೦೯ | ೨೫೫ | ೨೩೨ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೫೦ | ೫೧ | ೪೪ |
| ೭) | 'ಕ್ಷ' ಕಿರಣಗಳು ಹಾಗೂ ಸ್ಕ್ರೀನುಗಳು | ೧೦,೦೨೧ | ೧೦,೩೬೬ | ೮,೪೪೮ |

ಮುಂದುವರಿದಿದೆ....

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| **II** | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆಗಳು (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೯೬ | ೩೩ | ೪೮ |
| ೨) | ವಂಕಿ ಅಳವಡಿಕೆಗಳು | ೭೪ | ೬೬ | ೮೬ |
| ೩) | ನಿರೋಧ ಬಳಕೆದಾರರು | ೪,೩೨೦ | ೪೬೭೬ | ೩೧೦೦ |
| ೪) | ನುಂಗುವ ಮಾತ್ರೆ ಬಳಸುವವರು | ೭೬ | ೧೦೮ | ೪೩ |
| **III** | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೨೫೭ | ೧೯೨ | ೩೧೩ |
| ೨) | ಪೋಲಿಯೋ ಹನಿ ನೀಡಿಕೆ | ೨೫೭ | ೧೯೨ | ೩೧೩ |
| ೩) | ಬಿ.ಸಿ.ಜಿ | ೨೫೪ | ೫೨೦ | ೯೦೨ |
| ೪) | ದಡಾರ | ೨೪೫ | ೨೧೮ | ೨೯೦ |
| ೫) | ಡಿ ಮತ್ತು ಟಿ | ೪೧೩ | ೧೧೨ | ೧೨೩ |
| ೬) | ಟಿಟಿ ತಾಯಂದಿರಿಗೆ | ೨೭೪ | ೩೯ | ೫೧೬ |

*ಆಧಾರ: ಜಿಲ್ಲಾ ಆಸ್ಪತ್ರೆ, ಉಡುಪಿ*

ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದಿದೆ. ದಂತ ಚಿಕಿತ್ಸೆ, ಸ್ತ್ರೀರೋಗ ಚಿಕಿತ್ಸೆ, ಕೀಲುಮೂಳೆ ಚಿಕಿತ್ಸೆ ಮುಂತಾದ ಚಿಕಿತ್ಸಾ ಸೌಲಭ್ಯಗಳನ್ನು ಹೊಂದಿದೆ. ತಜ್ಞ ವೈದ್ಯರೂ ಸೇರಿದಂತೆ ಎಂಟು ಜನ ವೈದ್ಯರು ಹೀಗೆ ಒಟ್ಟು ೪೫ ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದೆ. ಆದರೆ ಮಂಜೂರಾದ ಸಿಬ್ಬಂದಿ ಸಂಖ್ಯೆ ೬೪ ಆಗಿದೆ. ಆಸ್ಪತ್ರೆ ಸುತ್ತುಮುತ್ತಲು ಸಾಮಾನ್ಯವಾಗಿ ಮಲೇರಿಯಾ, ಫೈಲೇರಿಯಾ, ಕರಳುಬೇನೆಯಂಥ ಸಾಂಕ್ರಾಮಿಕಗಳು ಕಂಡುಬರುತ್ತಿದ್ದು, ಅವುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ವಿವರಗಳಿಗೆ ಕೋಷ್ಟಕ ೧೫.೭ನೋಡಿ.

**ಕೋಷ್ಟಕ ೧೫.೭ : ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

**ಸಂಖ್ಯೆಗಳಲ್ಲಿ**

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| **I** | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೧.೦೫,೯೭೨ | ೧,೦೨,೬೧೮ | ೮೫,೯೮೮ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೪,೬೩೩ | ೫,೧೨೭ | ೪,೫೫೪ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೨,೦೦೬ | ೧,೧೧೬ | ೧,೩೮೩ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ಹೆರಿಗೆ LSCS<br>೧,೩೪೭ ೩೦೯ | ಹೆರಿಗೆ SCS<br>೧೮೩೦ ೪೦೨ | ಹೆರಿಗೆ LSCS<br>೧,೧೧೩ ೩೫೫ |
| ೫) | 'ಕ್ಷ'ಕಿರಣ ಹಾಗೂ ಸ್ಕ್ರೀನಿಂಗ್ | ೨,೦೨೯ | ೧,೫೪೧ | ೧,೯೪೭ |
| **II** | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೮೨೯ | ೧,೧೪೯ | ೮೪೮ |
| ೨) | ವಂಕಿ ಅಳವಡಿಕೆ | ೧೫೫ | ೭೦ | – |
| ೩) | ನಿರೋಧ ಬಳಕೆದಾರರು | | | ೫೫ |
| ೪) | ನುಂಗುವ ಮಾತ್ರೆ ಬಳಸುವವರು | | | ೫೦ |

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| III | ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ | | | |
| ೧) | ಡಿಪಿಟಿ ಲಸಿಕೆ | ೨೭೯ | ೨೨೦ | ೨೬೯ |
| ೨) | ಪೋಲಿಯೋ ಹನಿ ನೀಡಿಕೆ | ೨೭೯ | ೨೨೦ | ೨೬೯ |
| ೩) | ಬಿ.ಸಿ.ಜಿ | ೨೮೯ | ೨೨೭ | ೨೭೨ |
| ೪) | ದಡಾರ | ೨೭೩ | ೨೧೫ | ೨೬೧ |
| ೫) | ಡಿ ಮತ್ತು ಟಿ | ೨೮೭ | ೨೨೩ | ೨೫೨ |
| ೬) | ಟಿಟಿ ತಾಯಂದಿರಿಗೆ | ೨೬೪ | ೨೩೯ | ೨೯೫ |
| ೭) | ಟಿಟಿ ೧೦ ವರ್ಷದವರಿಗೆ | ೩೧೨ | ೨೪೨ | ೨೮೨ |
| ೮) | ಟಿಟಿ (೧೬ ವರ್ಷ) | ೨೪೦ | ೨೪೬ | ೨೬೨ |

*ಆಧಾರ : ಸಾರ್ವಜನಿಕ ಆಸ್ಪತ್ರೆ, ಕುಂದಾಪುರ*

**ಸಾರ್ವಜನಿಕ ಆಸ್ಪತ್ರೆ – ಕಾರ್ಕಳ**

ಆಸ್ಪತ್ರೆಯು ೧೯೨೭ರಲ್ಲಿ ಮೊದಲು ಪ್ರಾರಂಭಗೊಂಡು ನಂತರ ೧೯೩೯ರಲ್ಲಿ ಸ್ಥಳೀಯ ನಿಧಿ (ಎಲ್.ಎಫ್) ಆಸ್ಪತ್ರೆಯಾಗಿ ಪರಿವರ್ತನೆಗೊಂಡಿತು. ಮುಂದೆ ೧೯೯೮ರಲ್ಲಿ ಸರ್ಕಾರ ಇವನ್ನು ೧೦೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಿತು. ಆಸ್ಪತ್ರೆಯು ಸ್ವಂತ ಕಟ್ಟಡ ಹೊಂದಿದ್ದು ೨೦ ಹಾಸಿಗೆಗಳ ಕ್ಷಯರೋಗ ವಿಭಾಗವನ್ನು ಸಹ ಪಡೆದಿದೆ. ಹಿರಿಯ ತಜ್ಞ ವೈದ್ಯರು ೪, ತಜ್ಞವೈದ್ಯರು ೩, ಹಾಗೂ ದಂತ ವೈದ್ಯರು ೩, ದಂತ ಆರೋಗ್ಯ ಅಧಿಕಾರಿ ೧, ಸೇರಿದಂತೆ ಒಟ್ಟು ೩೨ ಜನ ಸಿಬ್ಬಂದಿ ಕಾರ್ಯನಿರತವಾಗಿದ್ದು, ಮಂಜೂರಾದ ಹುದ್ದೆಗಳ ಸಂಖ್ಯೆ ೫೭ ಆಗಿದೆ. ಆಸ್ಪತ್ರೆ ಹೆರಿಗೆ ವಿಭಾಗ, ಕ್ಷ ಕಿರಣ ಘಟಕ, ಪ್ರಯೋಗಶಾಲೆ, ಶಸ್ತ್ರಚಿಕಿತ್ಸಾ ಕೊಠಡಿ ಹೊಂದಿದೆ. ಆಸ್ಪತ್ರೆಯಲ್ಲಿ ದಂತ ಚಿಕಿತ್ಸೆ ಕೀಲು ಮೂಳೆ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಸಾಮಾನ್ಯ ವೈದ್ಯಕೀಯ ಮುಂತಾದ ಚಿಕಿತ್ಸಾ ಸೌಲಭ್ಯಗಳು ಲಭ್ಯವಿವೆ. ಮಲೇರಿಯಾ ಹಾಗೂ ಫೈಲೇರಿಯಾ ಸಾಂಕ್ರಾಮಿಕಗಳು ಸಾಮಾನ್ಯವಾಗಿ ಆಸ್ಪತ್ರೆಯ ಸುತ್ತುಮುತ್ತಲಿನ ಪ್ರದೇಶದಲ್ಲಿ ಕಂಡುಬರುತ್ತಿದ್ದು, ಅವುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುವುದು. ೨೦೦೪-೦೫ನೇ ಹಾಗೂ ೨೦೦೫-೦೬ ಸಾಲುಗಳಲ್ಲಿ ಮಲೇರಿಯಾ ರೋಗ ಪತ್ತೆ ಹಾಗೂ ಚಿಕಿತ್ಸೆ ನೀಡಿದ ವಿವರಗಳು ಈ ಕೆಳಕಂಡಂತಿದೆ.

| ವರ್ಷ | ಪರೀಕ್ಷಿಸಿದ ರಕ್ತಲೇಪನಗಳು | ಮಲೇರಿಯಾ (+ve) ಸೋಂಕಿನ ಪ್ರಕರಣಗಳು |
|---|---|---|
| ೨೦೦೪-೦೫ | ೧೬೯೧ | ೫೧ |
| ೨೦೦೫-೦೬ | ೨೯೬೯ | ೬೨ |

**ಕೋಷ್ಟಕ. ೧೫.೮ : ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

**ಸಂಖ್ಯೆಗಳಲ್ಲಿ**

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | ಸಾಮಾನ್ಯ ಸೇವೆಗಳು | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೬೫,೧೨೨ | ೭೨,೯೧೮ | ೭೫,೫೨೨ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೩೪೮೯ | ೪,೧೬೮ | ೪,೬೫೨ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೮೬ | ೨೨೪ | ೨೦೭+೧೮೮ Minor OT |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೧೯ | – | ೧೧೪ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | – | ೩೨ | ೩೬ |

| | ಸೇವಾ ವಿವರ | ೨೦೦೩–೦೪ | ೨೦೦೪–೦೫ | ೨೦೦೫–೦೬ |
|---|---|---|---|---|
| **II** | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೋಪಿಕ್ ಸೇರಿದಂತೆ) | ೭೯ | ೨೪೭ | ೩೬೩ |
| ೨) | ವಂಕಿ ಅಳವಡಿಕೆ | ೫೪ | ೫೮ | ೫೧ |
| ೩) | ನಿರೋಧ ಬಳಕೆದಾರರು | ೨೫೦೦ | ೨,೭೦೦ | ೩೨೦೦ |
| ೪) | ನುಂಗುವ ಮಾತ್ರೆ ಬಳಸುವವರು | ೧೯೫ | ೨೧೦ | ೨೦೦ |
| **III** | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೪೨೧ | ೫೨೬ | ೪೮೭ |
| ೨) | ಪೋಲಿಯೋ ಹನಿ ನೀಡಿಕೆ | ೪೨೧ | ೫೨೬ | ೪೮೭ |
| ೩) | ಬಿ.ಸಿ.ಜಿ | ೨೪೫ | ೪೯೪ | ೬೦೭ |
| ೪) | ದಡಾರ | ೧೧೮ | ೧೩೫ | ೧೫೫ |
| ೫) | ಡಿ ಮತ್ತು ಟಿ | ೧೫೦ | ೧೭೦ | ೧೬೫ |
| ೬) | ಟಿಟಿ ತಾಯಂದಿರಿಗೆ | ೩೫೦ | ೪೫೦ | ೫೬೦ |
| ೭) | ಟಿಟಿ ೧೦ ವರ್ಷದವರಿಗೆ | ೧೨೫ | ೧೪೦ | ೧೫೦ |
| ೮) | ಟಿಟಿ (೧೬ ವರ್ಷ) | ೧೨೦ | ೧೩೫ | ೧೪೦ |

***ಆಧಾರ :*** *ಸಾರ್ವಜನಿಕ ಆಸ್ಪತ್ರೆ ಕಾರ್ಕಳ*

## ಕಸ್ತೂರ್ ಬಾ ಆಸ್ಪತ್ರೆ ಮಣಿಪಾಲ

ಜಿಲ್ಲೆಯಲ್ಲಿಯೇ ಸುಸಜ್ಜಿತ ಉನ್ನತ ತಾಂತ್ರಿಕತೆಯ (ಹೈಟೆಕ್) ಬೋಧನಾ ಆಸ್ಪತ್ರೆಯಾಗಿ ೧೯೬೧ರಲ್ಲಿ ಉಡುಪಿಯ ಮಣಿಪಾಲದಲ್ಲಿ ಇದು ಕಾರ್ಯಾರಂಭ ಮಾಡಿತು. ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳು ಹಾಗೂ ವೈದ್ಯಕೀಯ ಸಲಕರಣೆಗಳನ್ನೊಳಗೊಂಡ ತನ್ನದೇ ಆದ ಕಟ್ಟಡ ಸಂಕೀರ್ಣವನ್ನು ಈ ಆಸ್ಪತ್ರೆ ಹೊಂದಿದೆ. ೧೯೭೨ರಲ್ಲಿ ಈ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ ೬೦೦ ಆಗಿದ್ದಿತು. ಪ್ರಸ್ತುತ (೨೦೦೫–೦೬) ರಲ್ಲಿ ಹಾಸಿಗೆಯ ಸಂಖ್ಯೆಯು ೧,೪೭೦ಕ್ಕೆ ಏರಿದೆ. ಅತ್ಯಾಧುನಿಕ ಚಿಕಿತ್ಸಾ ವಿಧಾನವನ್ನು ಹೊಂದಿದ ಈ ಆಸ್ಪತ್ರೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾನ್ಯ ಮಾಡಿದ್ದು, ಕರಾವಳಿ ಜಿಲ್ಲೆಗಳು, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕರ್ನಾಟಕ ಜಿಲ್ಲೆಗಳು, ಗೋವಾ ಹಾಗೂ ಕೇರಳದಿಂದ ರೋಗಿಗಳು ಇಲ್ಲಿನ ವಿಶೇಷ (ಸ್ಪೆಶಾಲಿಟಿ) ಚಿಕಿತ್ಸಾ ಸೇವೆ ಪಡೆಯಲು ಬರುತ್ತಾರೆ.

೧೯೭೦ರಲ್ಲಿ ಹೊರ ರೋಗಿಗಳ ವಿಭಾಗ ಕಾರ್ಯಾರಂಭ ಮಾಡಿತು. ಅತ್ಯಾಧುನಿಕ ೧೮ ಶಸ್ತ್ರಚಿಕಿತ್ಸಾ ಕೊಠಡಿ (ವಿಭಾಗ)ಗಳು, ೧೦ ತೀವ್ರ ನಿಗಾ ಘಟಕಗಳು, ಆಘಾತ (ಟ್ರೌಮಾ) ಘಟಕ, ಸುಸಜ್ಜಿತ ಸಿಟಿಸ್ಕ್ಯಾನ್, ಎಂಆರ್‌ಎ, ಕ್ಷ ಕಿರಣ ಘಟಕ, ಆಧುನಿಕ ನೆಫ್ರಾಲಜಿ ವಿಭಾಗ ಇತ್ಯಾದಿ ಸೌಲಭ್ಯಗಳನ್ನು ಆಸ್ಪತ್ರೆ ಹೊಂದಿವೆ. ಶಸ್ತ್ರಚಿಕಿತ್ಸೆ, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸೆ, ಮಕ್ಕಳ ರೋಗ ಚಿಕಿತ್ಸೆ, ಮೂಳೆ ಮತ್ತು ಕೀಲುರೋಗ, ಕಿವಿ ಮೂಗು, ಗಂಟಲು ಚಿಕಿತ್ಸೆ, ನೇತ್ರ ಚಿಕಿತ್ಸೆ, ಮಾನಸಿಕ ರೋಗ ಚಿಕಿತ್ಸೆ, ಹೃದಯರೋಗ, ಕ್ಷಯ ಚಿಕಿತ್ಸೆ, ಚರ್ಮ ಮತ್ತು ಗುಹ್ಯ ರೋಗ ಚಿಕಿತ್ಸೆ, ನಿಯೋನೇಟಾಲಜಿ, ಆಯುರ್ವೇದ, ಯೋಗ, ದಂತಚಿಕಿತ್ಸೆ ಹಾಗೂ ರೇಡಿಯಾಲಜಿ ಮುಂತಾದ ೧೫ ವಿಶೇಷ ಚಿಕಿತ್ಸಾ ಸೌಲಭ್ಯಗಳು ಈ ಆಸ್ಪತ್ರೆಯಲ್ಲಿ ಲಭ್ಯವಿವೆ. ಇದಲ್ಲದೆ, ಕಾರ್ಡಿಯಾಲಜಿ, ಕಾರ್ಡಿಯೋ ಥೊರಾಸಿಕ್ ಸರ್ಜರಿ, ಗ್ಯಾಸ್ಟ್ರೊ ಎಂಟರೊಲಜಿ, ನೆಫ್ರೊಲಜಿ, ನ್ಯೂರೋಲಜಿ, ನ್ಯೂರೋ ಸರ್ಜರಿ, ಯುರಾಲಜಿ, ಪ್ಲಾಸ್ಟಿಕ್ ಸರ್ಜರಿ (ಸುರೂಪಿ ಶಸ್ತ್ರ ಚಿಕಿತ್ಸಾ), ಪೆಡಿಯಾಟ್ರಿಕ್ ಸರ್ಜರಿ, ರೇಡಿಯೇಶನ್ ಆನ್‌ಕಾಲಜಿ, ಮೆಡಿಕಲ್ ಆನ್‌ಕಾಲೋಜಿ, ಸರ್ಜಿಕಲ್ ಆನ್‌ಕಾಲಜಿ, ನ್ಯೂಕ್ಲಿಯರ್ ಮೆಡಿಸಿನ್ ಹಾಗೂ ನೋವು ಚಿಕಿತ್ಸೆ ಹೀಗೆ ೧೫ ಸೂಪರ್ ಸ್ಪೆಶಾಲಿಟಿ ವಿಭಾಗಗಳು ಆಸ್ಪತ್ರೆಯಲ್ಲಿವೆ. ಟ್ರೌಮಾ (ಆಘಾತ) ಕ್ಯಾಷ್ಯೂಯಾಲಿಟಿ ಸೇವೆ, ತೀವ್ರ ನಿಗಾಘಟಕಗಳು, ಸುಟ್ಟಗಾಯ ಚಿಕಿತ್ಸೆ (ಬರ್ನ್‌ಕೇರ್), ರಕ್ತನಿಧಿ, ರೇಡಿಯಾಲಜಿ ಸೇವೆ, ಪ್ರಯೋಗಾಲಯ ಸೇವೆ, ಔಷಧಾಲಯ ಸೇವೆ, ಈ ತುರ್ತು ಸೇವೆಗಳು ಆಸ್ಪತ್ರೆಯಲ್ಲಿ ದಿನದ ೨೪

ಗಂಟೆಗಳಲ್ಲಿಯು ಲಭ್ಯವಿದೆ. ಈ ಆಸ್ಪತ್ರೆಯ ಅಧೀನ ಶ್ರೀ ಶಿರಡಿ ಸಾಯಿಬಾಬಾ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. ಅದು ರಾಜ್ಯದಲ್ಲಿ ತನ್ನದೇ ಆದ ವಿಶಿಷ್ಟ ಹೆಸರು ಮಾಡಿದ್ದು ಕ್ಯಾನ್ಸರ್ ರೋಗಿಗಳಿಗೆ ಸಂಪೂರ್ಣ ಸೇವೆ ನೀಡುತ್ತಿದೆ. ರೋಗ ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಸರ್ಜಿಕಲ್ ಮತ್ತು ರೇಡಿಯೇಶನ್ ಆನ್‌ಕಾಲಜಿ ಸೌಲಭ್ಯ ಹೊಂದಿದೆ. ಹೆಮಟಾಲಜಿ, ಮೈಕ್ರೊ ಬಯಾಲಜಿ, ಪೆಥೋಲಜಿ ಪ್ರಯೋಗಾಲಯಗಳನ್ನು ಆಸ್ಪತ್ರೆ ಪಡೆದಿದೆ. ದಂತ ಚಿಕಿತ್ಸೆ ವಿಭಾಗ ೩೦೦ ಡೆಂಟಲ್ ಚೇರ್‌ಗಳನ್ನು ಹೊಂದಿದೆ. ಎಂಡೋಸಾನಿಕ್ ಕ್ರಯೋ ಸರ್ಜರಿ, ಅಲ್ಟ್ರಾ ಸಾನಿಕ್ ಸ್ಕ್ಯಾನರ್ಸ್ ಮುಂತಾದ ಸೌಕರ್ಯಗಳನ್ನು ಸಹ ಈ ವಿಭಾಗ ಪಡೆದಿದೆ. ತಜ್ಞ ವೈದ್ಯ ವೃಂದ ಸೇರಿದಂತೆ ಆಸ್ಪತ್ರೆಯಲ್ಲಿ ೨೨೨ ವೈದ್ಯರು ಹಾಗೂ ೧,೩೮೭ ಪ್ಯಾರಾಮೆಡಿಕಲ್ ಸಿಬ್ಬಂದಿ, ನರ್ಸಿಂಗ್ ಹಾಗೂ ಇತರ ಸಹಾಯಕ ಸಿಬ್ಬಂದಿ ಇದೆ. ಉಡುಪಿ ಜಿಲ್ಲೆಯಲ್ಲಿಯೇ ಪ್ರಮುಖವಾದ ಹೈಟೆಕ್ ಆರೋಗ್ಯ ಸೇವೆ ಒದಗಿಸುತ್ತಿರುವ ಆರೋಗ್ಯ ಸಂಸ್ಥೆಯಾಗಿ ಖ್ಯಾತಿಪಡೆದಿದೆ.

**ಕೋಷ್ಟಕ ೧೫.೯ : ಕಸ್ತೂರ್ ಬಾ ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೨,೯೫,೭೫೮ | ೩,೧೯,೩೭೯ | ೩,೪೬,೪೭೨ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೩೬,೪೨೦ | ೩೭,೨೦೩ | ೪೧,೨೩೦ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೧೪,೦೦೬ | ೧೩,೬೪೪ | ೧೪,೪೦೬ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೮೮೯ | ೮೩೫ | ೧,೦೪೯ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೩೪೮ | ೨೯೫ | ೨೭೧ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೯೫ | ೮೦ | ೭೫ |
| ೭) | 'ಕ್ಷ' ಕಿರಣ ಹಾಗೂ ಸ್ಕ್ರೀನ್ | ೭೦,೯೦೦ | ೬೬,೦೫೭ | ೮೦,೩೮೫ |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೨,೦೨೫ | ೧,೬೭೫ | ೧,೪೪೦ |
| ೨) | ವಂಕಿ ಅಳವಡಿಕೆ | ೬೮೧ | ೬೨೧ | ೬೪೦ |
| ೩) | ನಿರೋಧ ಬಳಕೆದಾರರು | ೩೭೪ | ೨೯೨ | ೨೯೦ |
| ೪) | ನುಂಗುವ ಮಾತ್ರೆ ಬಳಸುವವರು | ೨೧೫ | ೨೩೫ | ೨೨೯ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೨,೬೨೮ | ೨,೦೭೩ | ೧,೩೫೭ |
| ೨) | ಪೋಲಿಯೋ ಹನಿ ನೀಡಿಕೆ | ೨,೯೦೮ | ೨,೯೮೮ | ೨,೭೧೨ |
| ೩) | ಬಿ.ಸಿ.ಜಿ | ೪೮೦ | ೪೬೫ | ೩೩೧ |
| ೪) | ದಡಾರ | ೪೩೧ | ೪೨೩ | ೨೭೦ |
| ೫) | ಡಿ ಮತ್ತು ಟಿ | ೨೦೬ | ೨೪೨ | ೨೪೦ |
| ೬) | ಟಿಟಿ ತಾಯಂದಿರಿಗೆ | ೬೦೮ | ೫೧೯ | ೫೫೫ |
| ೭) | ಟಿಟಿ ೧೦ ವರ್ಷದವರಿಗೆ | ೩೭೬ | ೧೮೬ | ೧೬೮ |
| ೮) | ಟಿಟಿ (೧೬ ವರ್ಷ) | ೩೫೨ | ೨೬೬ | ೨೨೦ |

*ಆಧಾರ : ಕಸ್ತೂರ್ ಬಾ ಆಸ್ಪತ್ರೆ ಮಣಿಪಾಲ್*

## ಡಾ। ಟಿ.ಎಂ.ಎ.ಪೈ ಆಸ್ಪತ್ರೆ – ಉಡುಪಿ

ಡಾ। ಟಿ.ಎಂ.ಎ.ಪೈ ಆಸ್ಪತ್ರೆಯು ಉಡುಪಿಯಲ್ಲಿ ೧೯೮೪ರಲ್ಲಿ ಕಾರ್ಯಾರಂಭ ಮಾಡಿದೆ. ಪ್ರಾರಂಭದಲ್ಲಿ ಹೊರರೋಗಿಗಳ ವಿಭಾಗ ಹಾಗೂ ಕುಟುಂಬ ಕಲ್ಯಾಣ ಯೋಜನೆಯ ಸೇವೆಯನ್ನು ಆಸುಪಾಸಿನ ಜನರಿಗೆ ನೀಡುತ್ತಾ ನಂತರದ ದಿನಗಳಲ್ಲಿ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಸಂಸ್ಥೆಯ ಒಂದು ಅಂಗಸಂಸ್ಥೆಯಾಗಿ ಪ್ರಸ್ತುತ ೨೦೦ ಹಾಸಿಗೆಗಳುಳ್ಳ ಸುಸಜ್ಜಿತವಾದ ಆಸ್ಪತ್ರೆಯಾಗಿ ಮಾರ್ಪಟ್ಟಿದೆ. ಸಧ್ಯ, ಮೆಡಿಸಿನ್, ಹೆರಿಗೆ ಮತ್ತು ಹೆಂಗಸರ ವಿಭಾಗ, ದಂತ ಚಿಕಿತ್ಸಾ ವಿಭಾಗ, ಮಕ್ಕಳ ಚಿಕಿತ್ಸಾ ವಿಭಾಗ, ಶಸ್ತ್ರ ಚಿಕಿತ್ಸಾ ವಿಭಾಗ, ಮೂಳೆ–ಕೀಲು ವಿಭಾಗ ಹಾಗೂ ಫಿಜಿಯೋತೆರಪಿ ವಿಭಾಗಗಳನ್ನು ಹೊಂದಿದೆ. ರೋಗಿಗಳ ಅವಶ್ಯಕತೆಯನ್ನು ಪೂರೈಸಲು ಸುಸಜ್ಜಿತ ಪ್ರಯೋಗಾಲಯ, ಕ್ಷ–ಕಿರಣ, ಅಲ್ಟ್ರಾ ಸೋನೋಗ್ರಫಿ, ಲೆಪ್ರೊಸ್ಕೋಪಿ ಮೊದಲಾದವುಗಳನ್ನು ಸಾಮಾನ್ಯ ಜನರಿಗೆ ಕೈಗೆಟುಕುವ ರೀತಿಯಲ್ಲಿ ದಾನಿಗಳ ಸಹಕಾರದೊಂದಿಗೆ ಆಸ್ಪತ್ರೆ ಸೇವೆ ಒದಗಿಸುತ್ತಿದೆ. ಸ್ವಂತ ಚಿಕಿತ್ಸಾಲಯ ಹೊಂದಿರುವ ವೈದ್ಯರಿಗಾಗಿ, ಉಡುಪಿ, ಬ್ರಹ್ಮಾವರ, ಕುಂದಾಪುರಗಳಲ್ಲಿ ಆಸ್ಪತ್ರೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಸೇವಾ ಸೌಲಭ್ಯ ವಿಸ್ತರಿಸಿದೆ. ಸಂಜೆ ಕ್ಲಿನಿಕನ್ನು ಸಹ ಮಣಿಪಾಲದ ತಜ್ಞ ವೈದ್ಯರ ಸಹಕಾರದಿಂದ ಪ್ರಾರಂಭಿಸಿದೆ. ಎಂಟು ವಿವಿಧ ವಿಭಾಗಗಳನ್ನು ಹೊಂದಿದ ಹಾಗೂ ಒಟ್ಟು ೧೨೮ ಜನ ಆಸ್ಪತ್ರೆ ಸಿಬ್ಬಂದಿ ಹೊಂದಿದ ಈ ಸಂಸ್ಥೆ, ದಿನದ ೨೪ ಗಂಟೆಗಳ ಎಕ್ಸರೇ, ಅಲ್ಟ್ರಾಸೌಂಡ್, ಪ್ರಯೋಗಾಲಯ, ಆಂಬ್ಯುಲೆನ್ಸ್ ಸೇವೆ, ಫಾರ್ಮಸಿ, ಟ್ರಾಮ್ ಹಾಗೂ ಸಂಜೆ ಕ್ಲಿನಿಕ್ ಸೇವೆಯನ್ನು ನೀಡುತ್ತಿದೆ. ವಿಶೇಷ ಚಿಕಿತ್ಸಾ (ಸ್ಪೆಷಾಲಿಟಿ ಕ್ಲಿನಿಕ್ಸ್) ಸೌಲಭ್ಯಗಳಾದ ಮಧುಮೇಹ ಚಿಕಿತ್ಸೆ, ಅಸ್ತಮಾ ಚಿಕಿತ್ಸೆ, ಕೀಲುನೋವು ಚಿಕಿತ್ಸೆ, ಹಿರಿಯ ನಾಗರಿಕರಿಗೆ ಜೆರಿಯಾಟ್ರಿಕ್ಸ್ ಚಿಕಿತ್ಸೆ, ವೆಲ್ ಉಮನ್ ಕ್ಲಿನಿಕ್, ಗಾಯದ ಚಿಕಿತ್ಸೆ, ಡಿಸ್ಕ್ ಪ್ರೊಲಾಫ್ಸ್ ಚಿಕಿತ್ಸೆ ಮತ್ತು ಹೈರಿಸ್ಕ್ ಚಿಕಿತ್ಸೆಗಳನ್ನು ಸಹ ಆಸ್ಪತ್ರೆ ಒದಗಿಸುತ್ತಿದೆ.

**ಕೋಷ್ಟಕ. ೧೫.೧೦ : ಡಾ॥ ಟಿ. ಎಂ. ಎ. ಪೈ ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

ಸಂಖ್ಯೆಗಳಲ್ಲಿ

| | ಸೇವಾ ವಿವರ | ೨೦೦೩–೦೪ | ೨೦೦೪–೦೫ | ೨೦೦೫–೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೪೧,೩೪೫ | ೫೭,೮೭೧ | ೬೩,೦೩೬ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೩,೫೯೯ | ೪,೮೦೧ | ೫,೨೧೪ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೧,೪೫೨ | ೩,೯೯೧ | ೪,೫೦೧ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೬೨೮ | ೬೮೮ | ೭೯೮ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೧೮ | ೨೦ | ೧೬ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | – | – | – |
| ೭) | ‘ಕ್ಷ’ ಕಿರಣ ಹಾಗೂ ಸ್ಕ್ರೀನುಗಳು | ೩,೯೭೬ | ೫,೦೨೦ | ೬,೩೯೩ |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೨೧೯ | ೧೬೬ | ೧೭೪ |
| ೨) | ವಂಕಿ ಅಳವಡಿಕೆ | ೧೧೦ | ೧೧೨ | ೧೪೬ |
| ೩) | ನಿರೋಧ ಬಳಕೆದಾರರು | – | – | – |
| ೪) | ನುಂಗುವ ಮಾತ್ರೆ ಬಳಸುವವರು | ೪೦ | ೪೨ | ೪೫ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೪೦೦ | ೩೮೦ | ೪೦೦ |
| ೨) | ಪೋಲಿಯೋ ಹನಿ ನೀಡಿಕೆ | ೧೨೦೦ | ೧,೪೦೦ | ೧೫೦೦ |
| ೩) | ಬಿ.ಸಿ.ಜಿ | ೭೨೦ | ೮೦೦ | ೮೨೦ |
| ೪) | ದಡಾರ | ೩೭೫ | ೩೫೦ | ೩೮೦ |
| ೫) | ಡಿ ಮತ್ತು ಟಿ | ೪೦ | ೩೫ | ೫೦ |
| ೬) | ಟಿಟಿ ತಾಯಂದಿರಿಗೆ | ೩೭೫ | ೩೫೦ | ೪೩೪ |
| ೭) | ಟಿಟಿ ೧೦ ವರ್ಷದವರಿಗೆ | ೨೦ | ೨೫ | ೨೮ |

***ಆಧಾರ:*** *ಡಾ॥ ಟಿ. ಎಂ.ಎ. ಪೈ ಆಸ್ಪತ್ರೆ. ಉಡುಪಿ*

## ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ, ಕುತ್ಪಾಡಿ, ಉಡುಪಿ

ಕರ್ನಾಟಕ ಆಯುರ್ವೇದ ಸಂಘದ ಮೂಲಕ ೧೯೫೮ರಲ್ಲಿ ಪ್ರಾರಂಭಗೊಂಡ ಉಡುಪಿಯ ಆಯುರ್ವೇದ ಕಾಲೇಜು ಆಸ್ಪತ್ರೆಯು ೧೯೭೮ರಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ ಸೊಸೈಟಿ/ಟ್ರಸ್ಟ್ ಆಡಳಿತಕ್ಕೆ ಒಳಪಟ್ಟ ಮೇಲೆ ೧೯೯೩ರಲ್ಲಿ ೧,೩೫,೦೦೦ ಚದರ ಅಡಿ ವಿಸ್ತೀರ್ಣದಲ್ಲಿ ೩೦೦ ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯ ಕಟ್ಟಡ ನಿರ್ಮಾಣಗೊಂಡಿತು. ಪ್ರಸಕ್ತ ಇದು ಪದವಿ ಮತ್ತು ಸ್ನಾತಕೋತ್ತರ ಆಯುರ್ವೇದ ಶಿಕ್ಷಣ ಕೇಂದ್ರವಾಗಿದ್ದು ಎಲ್ಲಾ ಆಧುನಿಕ ಸೌಲಭ್ಯಗಳನ್ನು ಹೊಂದಿದೆ. ಇದಕ್ಕೆ ಹೊಂದಿಕೊಂಡಂತೆ ಆಯುರ್ವೇದದ ಜಾನಪದ ಸಂಶೋಧನಾ ಕೇಂದ್ರ, ಸಮುದಾಯ ಆರೋಗ್ಯ ಘಟಕಗಳು ಇದ್ದು, ಇವು ಆಸ್ಪತ್ರೆಯ ಆಡಳಿತಕ್ಕೆ ಒಳಪಟ್ಟಿವೆ. ಇವು ಗ್ರಾಮೀಣ ಪ್ರದೇಶದಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದಲ್ಲದೇ ಶಿಬಿರಗಳಲ್ಲಿ ಆರೋಗ್ಯ ಶಿಕ್ಷಣ, ಅಮೂಲ್ಯ ಗಿಡಮೂಲಿಕೆಗಳನ್ನು ಪರಿಚಯಿಸುವುದು, ಮನೆಮದ್ದು, ಆರೋಗ್ಯ ರಕ್ಷಣೆಯ ಮಾಹಿತಿಯನ್ನು ಜನಸಾಮಾನ್ಯರಿಗೆ ನೀಡುತ್ತಿದೆ.

ಆಸ್ಪತ್ರೆಯು ೧೪ ಹೊರರೋಗಿಗಳ ವಿಭಾಗಗಳನ್ನು, ಒಳರೋಗಿ ವಿಭಾಗ, ಶಸ್ತ್ರಚಿಕಿತ್ಸೆ, ತುರ್ತು ಚಿಕಿತ್ಸೆ, ಯೋಗ ಮತ್ತು ವ್ಯಾಯಾಮ ಚಿಕಿತ್ಸಾ ವಿಭಾಗ, ಹೆರಿಗೆ ವಿಭಾಗ, ಕ್ಷ-ಕಿರಣ ವಿಭಾಗ, ಪ್ರಯೋಗಶಾಲೆ, ಪಂಚಕರ್ಮವಿಭಾಗ, ಲಘು ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಸಂಶೋಧನಾ ವಿಭಾಗ ಹೀಗೆ ಹತ್ತು ಹಲವು ಸೌಲಭ್ಯಗಳನ್ನು ಪಡೆದಿದೆ. ಮಂಗಳೂರಿನ ಬಿಜೈನಲ್ಲಿ ಹೊರ ರೋಗಿ ವಿಭಾಗ ಹಾಗೂ ೫೦ ಹಾಸಿಗೆಗಳ ಒಳರೋಗಿ ವಿಭಾಗ ಇರುವ ಒಂದು ಆರೋಗ್ಯ ಕೇಂದ್ರವೂ ಈ ಆಸ್ಪತ್ರೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಆಸ್ಪತ್ರೆಯಲ್ಲಿ ದೊರೆಯುವ ವಿಶೇಷ ಚಿಕಿತ್ಸೆಗಳಲ್ಲಿ ಪ್ರಮುಖವಾದದ್ದು ಪಂಚಕರ್ಮ ಚಿಕಿತ್ಸೆಯಾಗಿದೆ. ನೇತ್ರ ಚಿಕಿತ್ಸೆ ವಿಭಾಗದಲ್ಲಿ ದೃಷ್ಟಿ ದೋಷಗಳಿಗೆ ನೀಡುವ ವ್ಯಾಯಾಮ ಚಿಕಿತ್ಸೆಯು ಅತ್ಯಂತ ಪರಿಣಾಮಕಾರಿ ಎನಿಸಿದೆ. ಇದಲ್ಲದೆ ಸ್ತ್ರೀರೋಗ ಚಿಕಿತ್ಸಾ ವಿಭಾಗವು ಬಂಜೆತನ ನಿವಾರಣೆ ಹಾಗೂ ಸಾಂಪ್ರದಾಯಕ ಬಾಣಂತನದ ಚಿಕಿತ್ಸೆಗಳನ್ನು ಯಶಸ್ವಿಯಾಗಿ ನೀಡುತ್ತಿದೆ. ಆಸ್ಪತ್ರೆಯು ಥೇಮ್ಸ್ ವ್ಯಾಲಿ ಯೂನಿವರ್ಸಿಟಿ (ವಿಶ್ವವಿದ್ಯಾಲಯ), ಇಂಗ್ಲೆಂಡ್ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಹೋಲಿಸ್ಟಿಕ್ ಮೆಡಿಸಿನ್ಸ್ ಅಂಡ್ ಕೋಟಾ ಆಸ್ಟ್ರೇಲಿಯಗಳ ಸಹಯೋಗ ಹೊಂದಿದ್ದು ಹೊರದೇಶದಿಂದ ಬರುವ ರೋಗಿಗಳಿಗೆ ಚಿಕಿತ್ಸೆ ಹಾಗೂ ವಿದ್ಯಾರ್ಥಿಗಳಿಗೆ ಅಲ್ಪಾವಧಿ ತರಬೇತಿ ನೀಡುತ್ತದೆ. ಇದಲ್ಲದೆ ಜಪಾನ್, ಜರ್ಮನಿ, ಅಮೆರಿಕಾ, ಇಟಲಿ, ಮತ್ತು ಕೊಲ್ಲಿ ರಾಷ್ಟ್ರಗಳಿಂದ ಬರುವ ಆಸಕ್ತರಿಗೆ ಕಾಯಕಲ್ಪ ಚಿಕಿತ್ಸೆ ನೀಡುವುದು. ಆಸ್ಪತ್ರೆಯು ವೈದ್ಯಕೀಯ ಅಧೀಕ್ಷಕರು ಹಾಗೂ ೪೯ ಜನ ವೈದ್ಯರು ಸೇರಿದಂತೆ ಒಟ್ಟು ೧೮೫ ಜನ ಸಿಬ್ಬಂದಿ ಹೊಂದಿದೆ. ಅತ್ಯಾಧುನಿಕ ಸೇವಾ ಸೌಲಭ್ಯ ಹೊಂದಿರುವ ಈ ಆಯುರ್ವೇದ ಆಸ್ಪತ್ರೆ ಉಡುಪಿ ಜಿಲ್ಲೆಯಲ್ಲಿ ದೊಡ್ಡ ಆಸ್ಪತ್ರೆ ಎನಿಸಿ ಜನಪ್ರಿಯತೆ ಪಡೆದಿದೆ.

**ಕೋಷ್ಟಕ. ೧೫.೧೧ : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆಯ ಸೇವಾ ವಿವರ**

ಸಂಖ್ಯೆಗಳಲ್ಲಿ

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೬೪,೧೩೬ | ೬೪,೨೦೮ | ೬೩,೩೧೫ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೪,೯೨೨ | ೫,೧೯೦ | ೫,೫೪೪ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೬೬೦ | ೫೯೨ | ೭೨೦ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೪೨೭ | ೩೬೦ | ೪೩೭ |
| ೫) | 'ಕ್ಷ' ಕಿರಣ ಹಾಗೂ ಸ್ಕ್ರೀನುಗಳು | ೧,೭೬೪ | ೧,೮೫೭ | ೧,೮೯೦ |

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| **II** | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೮೦ | ೭೧ | ೯೫ |
| ೨) | ವಂಕಿ ಅಳವಡಿಕೆ | ೧೧ | ೧೩ | ೦೯ |
| **III** | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | – | ೩೦ | ೨೩ |
| ೨) | ಪೋಲಿಯೋ ಹನಿ ನೀಡಿಕೆ | – | ೨೫೮ | ೪೩೯ |

**ಆಧಾರ:** *ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ, ಉಡುಪಿ*

## ಗ್ರಾಮೀಣ ಆರೋಗ್ಯ ಕಾರ್ಯಕ್ರಮಗಳು

ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಹಾಗೂ ವೈದ್ಯಕೀಯ ಸೇವೆಗಳು ತೀರ ವಿರಳವಾಗಿದ್ದು ಸ್ವಾತಂತ್ರ್ಯಾನಂತರದಲ್ಲಿ ಸರ್ಕಾರವು ತನ್ನ ಪಂಚವಾರ್ಷಿಕ ಯೋಜನೆಗಳ ಮೂಲಕ ವೈದ್ಯಕೀಯ ಸೌಲಭ್ಯಗಳ ವ್ಯಾಪ್ತಿಯನ್ನು ಹೆಚ್ಚಿಸುತ್ತಾ ಹೋಯಿತು. ಸ್ವಾತಂತ್ರ್ಯಪೂರ್ವದಲ್ಲಿ ಸಾಂಕ್ರಾಮಿಕಗಳಾದ ಪ್ಲೇಗ್, ಕಾಲರಾಗಳಿಗೆ ನಿರೋಧಕ ಚುಚ್ಚುಮದ್ದು ನೀಡುವ ಕ್ರಿಮಿನಾಶಕಗಳ ಸಿಂಪಡಣೆಗೆ ಮಾತ್ರ ಆರೋಗ್ಯ ಕಾರ್ಯಕ್ರಮಗಳು ಸೀಮಿತಗೊಂಡಿದ್ದವು. ಸಾರ್ವಜನಿಕ ಆರೋಗ್ಯ ಸೇವೆಗಳು ಗ್ರಾಮೀಣ ಜನತೆಗೆ ದೊರೆಯುವ ದಿಸೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸುವ ಮೂಲಕ ತನ್ನ ಕಳಕಳಿ ವ್ಯಕ್ತಪಡಿಸಿತು. ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯದ ಜೊತೆಗೆ ಪ್ರಸೂತಿ, ತಾಯಿಮಕ್ಕಳ ಆರೋಗ್ಯ ಕಾರ್ಯಕ್ರಮ, ಕುಟುಂಬ ಕಲ್ಯಾಣ ಕಾರ್ಯಕ್ರಮ ಹಾಗೂ ಶಾಲಾಮಕ್ಕಳ ಆರೋಗ್ಯ ತಪಾಸಣೆ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿತು. ಪ್ರಾಥಮಿಕ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗ್ರಾಮೀಣ ಪ್ರದೇಶದಲ್ಲಿ ತೆರೆಯುವ ಮೂಲಕ ಗ್ರಾಮೀಣ ಜನರ ಮೂಲಭೂತ ಆರೋಗ್ಯ ಅವಶ್ಯಕತೆಗಳನ್ನು ಸರ್ಕಾರವು ಪೂರೈಸುತ್ತಿದೆ. ಆರೋಗ್ಯ ಸೇವೆಗೆ ಸಂಬಂಧಪಟ್ಟ ಎಲ್ಲಾ ರಾಷ್ಟ್ರೀಯ ಹಾಗೂ ರಾಜ್ಯ ಯೋಜನೆಗಳ ಲಾಭವು ಗ್ರಾಮೀಣ ಜನರಿಗೆ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ. ಕ್ರಿ.ಶ.೨೦೦೦ಕ್ಕೆ ಎಲ್ಲರಿಗೂ ಆರೋಗ್ಯ ಎಂಬ ಗುರಿ ಹಾಕಿಕೊಂಡು ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಸಂಸ್ಥೆಗಳ ಸೇವಾ ಜಾಲವನ್ನು ವ್ಯಾಪಕವಾಗಿ ಹರಡುವಂತೆ ವ್ಯವಸ್ಥೆ ಮಾಡಿದೆ.

## ಸಮುದಾಯ ಆರೋಗ್ಯ ಕೇಂದ್ರಗಳು

ಸಾಮಾನ್ಯವಾಗಿ ತಾಲೂಕು ಕೇಂದ್ರಗಳಲ್ಲಿ ಮತ್ತು ಜನಸಂಖ್ಯೆ ಹೆಚ್ಚಾಗಿರುವ ಇತರ ಗ್ರಾಮಗಳಲ್ಲಿ ಸರ್ಕಾರವು ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿದೆ. ಇಂಥಹ ಪ್ರತೀ ಕೇಂದ್ರವನ್ನು ಸುಮಾರು ಒಂದು ಲಕ್ಷ ಜನಸಂಖ್ಯೆ ಹೊಂದಿರುವ ಪ್ರದೇಶ ಅಥವಾ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೊಂದರಂತೆ ಸ್ಥಾಪಿಸಲಾಗುತ್ತದೆ. ಸಾಮಾನ್ಯವಾಗಿ ೩೦ ರಿಂದ ೫೦ ಹಾಸಿಗೆಗಳನ್ನು ಈ ಕೇಂದ್ರಗಳು ಹೊಂದಿದ್ದು, ತಜ್ಞವೈದ್ಯರ ಸೇವೆಯನ್ನು ಸಹ ಇವು ಒಳಗೊಂಡಿರುತ್ತವೆ. ಆಯಾ ಪ್ರದೇಶಕ್ಕೆ ಒಳಪಡುವಂತೆ ಇವು ಎಲ್ಲಾ ಆರೋಗ್ಯ ಸಂಸ್ಥೆಗಳು ಹಾಗೂ ಔಷಧಾಲಯಗಳಿಗೆ ಪರಾಮರ್ಶಕ (ರೆಫರಲ್)ವಾಗಿ ಕಾರ್ಯನಿರ್ವಹಿಸುತ್ತವೆ.

ಜಿಲ್ಲೆಯಲ್ಲಿ ೧) ಬ್ರಹ್ಮಾವರ, ೨) ನಿಟ್ಟೆ, ೩) ಹೆಬ್ರಿ ಹಾಗೂ ೪) ಶಿರ್ವಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಿವೆ. ಸರ್ಕಾರವು ೧೯೯೫ ರಿಂದ ಕೆಲವು ಸಾರ್ವಜನಿಕ ಆಸ್ಪತ್ರೆಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಗುರುತಿಸಿದೆ. ಈ ಕೆಳಗೆ ಕೆಲವು ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆ, ಬೆಳವಣಿಗೆ, ಅಭಿವೃದ್ಧಿ ಹಾಗೂ ಅವು ನೀಡುತ್ತಿರುವ ಸೇವಾ ವಿವರಗಳ ಬಗ್ಗೆ ವಿವೇಚಿಸಲಾಗಿದೆ.

**ಸಮುದಾಯ ಆರೋಗ್ಯ ಕೇಂದ್ರ ಬ್ರಹ್ಮಾವರ:** ಈ ಆರೋಗ್ಯ ಕೇಂದ್ರವು ೧೯೬೪ರಲ್ಲಿ ಪ್ರಾರಂಭಗೊಂಡು ೧೯೯೩ರಲ್ಲಿ ೩೦ ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತನೆಯಾಯಿತು. ಆಸ್ಪತ್ರೆಯು ಸ್ವಂತ ಕಟ್ಟಡ ಹೊಂದಿದ್ದು, ಹೆರಿಗೆ ವಿಭಾಗ, ಕ್ಷ–ಕಿರಣ ವಿಭಾಗ, ಪ್ರಯೋಗಶಾಲೆ, ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದಿದೆ. ಈ ಸಮುದಾಯ ಆರೋಗ್ಯ ಕೇಂದ್ರದ ಅಧೀನದಲ್ಲಿ ಒಂಬತ್ತು ಉಪಕೇಂದ್ರಗಳು ಇವೆ. ಹೊರರೋಗಿ ವಿಭಾಗ, ಹೆರಿಗೆ ವಿಭಾಗ, ಪ್ರಯೋಗಶಾಲೆ, ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸಾ ಕೊಠಡಿ, ಸಾಮಾನ್ಯ ಶಸ್ತ್ರಚಿಕಿತ್ಸಾ ಕೊಠಡಿ ಮುಂತಾದ ವಿಭಾಗಗಳನ್ನು ಹೊಂದಿದೆ. ಮೂರು ಜನ ವೈದ್ಯರು ಸೇರಿದಂತೆ ೨೧ ಜನ ಕಾರ್ಯನಿರತ ಸಿಬ್ಬಂದಿ ಇದ್ದಾರೆ. ಆದರೆ ಮಂಜೂರಾದ ಹುದ್ದೆಗಳ ಸಂಖ್ಯೆ ೩೧ ಆಗಿದೆ. ಆರೋಗ್ಯ ಕೇಂದ್ರದ ಸುತ್ತಮುತ್ತಲು ಸಾಮಾನ್ಯವಾಗಿ ಕಂಡುಬರುವ ಸಾಂಕ್ರಾಮಿಕ ರೋಗಗಳು ಎಂದರೆ ಮಲೇರಿಯಾ ಹಾಗೂ ಫೈಲೇರಿಯಾಗಳಾಗಿವೆ. ಆ ರೋಗಿಗಳಿಗೆ ಈ ಆಸ್ಪತ್ರೆಯಲ್ಲಿ ಚಿಕಿತ್ಸಾ ಸೌಲಭ್ಯವಿದೆ. ೨೦೦೩–೨೦೦೫ ರವರೆಗೆ ಮೂರು ವರ್ಷಗಳಲ್ಲಿ ಮಲೇರಿಯಾ ಹಾಗೂ ಕ್ಷಯರೋಗಗಳ ಪತ್ತೆಗಾಗಿ ನಡೆಸಿದ ರಕ್ತಲೇಪನಗಳ ವಿವರ ಈ ಕೆಳಗೆ ಕೊಟ್ಟಿದೆ.

**ಮಲೇರಿಯಾ**

| ವರ್ಷ | ರಕ್ತಲೇಪನ ಪರೀಕ್ಷಿಸಿದ್ದು | ರೋಗ ಖಚಿತಗೊಂಡ ಪ್ರಕರಣಗಳು |
|---|---|---|
| ೨೦೦೩ | ೫೯೧೫ | ೯ (+ve) (೭ ಪಿ.ವಿ., ೨ ಪಿ.ಎಫ್) |
| ೨೦೦೪ | ೬೩೪೬ | ೪ (+ve) (೬ ಪಿ.ವಿ., ೨ ಪಿಎಫ್) |
| ೨೦೦೫ | ೪೮೧೫ | ೬ (+ve) ೬ ಪಿ.ವಿ. |

**ಕ್ಷಯ**

| ವರ್ಷ | ಕ್ಷಯ | ಕ್ಷಯ ಖಚಿತ ಪ್ರಕರಣಗಳು | ಚಿಕಿತ್ಸೆ ಪಡೆದವರು |
|---|---|---|---|
| ೨೦೦೩ | ೧೭೯ | ೭ (+ve) | ೧೨ |
| ೨೦೦೪ | ೪೯೧ | ೨೧ (+ve) | ೨೦ |
| ೨೦೦೫ | ೬೩೭ | ೧೯ (+ve) | ೨೧ |

**ಕೋಷ್ಟಕ ೧೫.೧೨: ಸಮುದಾಯ ಆರೋಗ್ಯ ಕೇಂದ್ರವು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

| | ಸೇವಾ ವಿವರ | ೨೦೦೩–೦೪ | ೨೦೦೪–೦೫ | ೨೦೦೫–೦೬ |
|---|---|---|---|---|
| I | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | **ಸಂತಾನಹರಣ ಶಸ್ತ್ರಚಿಕಿತ್ಸೆ** (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೋಪಿಕ್ ಸೇರಿದಂತೆ) | ೧೨೬ | ೧೨೯ | ೧೦೮ |
| ೨) | **ವಂಕಿ ಅಳವಡಿಕೆ** | ೧೧೭ | ೧೧೧ | ೯೭ |
| ೩) | **ನಿರೋಧ ಬಳಕೆದಾರರು** | ೧೨೫ | ೧೨೩ | ೧೩೨ |
| ೪) | **ನುಂಗುವ ಮಾತ್ರೆ ಬಳಸುವವರು** | ೫೬ | ೫೭ | ೬೧ |

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| II | ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ | | | |
| ೧) | ಡಿಪಿಟಿ ಲಸಿಕೆ | ೩೫೧ | ೩೫೮ | ೩೪೩ |
| ೨) | ಪೋಲಿಯೋ ಹನಿ ನೀಡಿಕೆ | ೩೫೧ | ೩೫೮ | ೩೪೩ |
| ೩) | ಬಿ.ಸಿ.ಜಿ | ೩೫೩ | ೩೪೯ | ೩೫೨ |
| ೪) | ದಡಾರ | ೩೪೨ | ೩೩೯ | ೩೨೪ |
| ೫) | ಡಿ ಮತ್ತು ಟಿ | ೬೫೩ | ೪೭೮ | ೬೮೭ |
| ೬) | ಟಿಟಿ ತಾಯಂದಿರಿಗೆ | ೩೬೪ | ೩೫೧ | ೩೬೧ |
| ೭) | ಟಿಟಿ ೧೦ ವರ್ಷದವರಿಗೆ | ೪೭೨ | ೫೨೧ | ೭೧೯ |
| ೮) | ಟಿಟಿ (೧೬ ವರ್ಷ) | ೫೦೫ | ೪೭೦ | ೫೮೩ |

## ಸಮುದಾಯ ಆರೋಗ್ಯಕೇಂದ್ರ, ಶಿರ್ವ

ಇದು ೧೯೩೧ರಲ್ಲಿ ಶ್ರೀಮತಿ ಏರ್ವಾಡಿ ರಾಧಮ್ಮ ಹೆಗ್ಗಡ್ತಿಯವರು ದಾನವಾಗಿ ನೀಡಿದ ಜಮೀನಿನಲ್ಲಿ ಸಾರ್ವಜನಿಕ ವಂತಿಕೆಯಿಂದ ನಿರ್ಮಾಣಗೊಂಡ ಕಟ್ಟಡದಲ್ಲಿ ಪ್ರಾರಂಭಗೊಂಡಿತು. ಮುಂದೆ ಎಂಟು ಹಾಸಿಗೆಗಳ ಒಳರೋಗಿ ವಿಭಾಗವನ್ನು ೧೯೪೦ರಲ್ಲಿ ಪ್ರಾರಂಭಿಸಲಾಯಿತು. ೧೯೬೧ರಲ್ಲಿ ಈ ಆಸ್ಪತ್ರೆಯನ್ನು ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯು ವಹಿಸಿಕೊಂಡಿತು. ೧೯೬೩ರಲ್ಲಿ ಟಿ.ಬಿ. ವಾರ್ಡ್ ಇದರಲ್ಲಿ ಸೇರ್ಪಡೆ ಆಯಿತಲ್ಲದೆ ಕ್ಷ-ಕಿರಣ ಘಟಕವನ್ನೂ ಪ್ರಾರಂಭಿಸಲಾಯಿತು. ಮುಂದೆ ೧೯೭೯ರಲ್ಲಿ ಸರ್ಕಾರವು ಇದನ್ನು ತನ್ನ ಅಧೀನಕ್ಕೆ ಪಡೆದುಕೊಂಡು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಿತು. ತದನಂತರ ೨೦೦೨ರಲ್ಲಿ ಇದನ್ನು ಸರ್ಕಾರ ೩೦ ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಿತು. ಪ್ರಸ್ತುತ ಆಸ್ಪತ್ರೆಯು ಒಂದು ಕೋಟಿ ರೂ. ಮೌಲ್ಯದ ಸ್ವಂತ ಕಟ್ಟಡ ಹೊಂದಿದೆ. ಆಸ್ಪತ್ರೆಯ ಹೆರಿಗೆ ವಿಭಾಗ, ಕ್ಷ-ಕಿರಣ ಘಟಕ, ಪ್ರಯೋಗಶಾಲೆ, ಶಸ್ತ್ರಚಿಕಿತ್ಸಾ ಕೊಠಡಿ ಹೊಂದಿದೆ. ಆಸ್ಪತ್ರೆಯು ಶವಾಗಾರವನ್ನು ಹಾಗೂ ತುರ್ತು ಚಿಕಿತ್ಸಾ ವಾಹನವನ್ನು ಸಹ ಹೊಂದಿರುತ್ತದೆ. ಇದರ ಅಧೀನದಲ್ಲಿ ಎಂಟು ಉಪಕೇಂದ್ರಗಳಿದ್ದು, ಆಸ್ಪತ್ರೆಯ ಸುತ್ತಮುತ್ತಲಿನಲ್ಲಿ ಮಲೇರಿಯಾ, ಫೈಲೇರಿಯಾ, ಕರುಳುಬೇನೆ ಮುಂತಾದ ಸಾಂಕ್ರಾಮಿಕರೋಗಗಳು ಕಂಡುಬರುತ್ತಿದ್ದು ಅವುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಇಬ್ಬರು ವೈದ್ಯಾಧಿಕಾರಿಗಳು ಸೇರಿದಂತೆ ಒಟ್ಟು ೩೪ ಸಿಬ್ಬಂದಿಯ ಮಂಜೂರಾತಿಯಿದ್ದು ಅದರಲ್ಲಿ ೧೭ ಜನ ಸಿಬ್ಬಂದಿ ಕರ್ತವ್ಯನಿರತರಾಗಿರುತ್ತಾರೆ. ವಿವರಗಳಿಗೆ ಕೋಷ್ಟಕ ೧೫.೧೩ ನೋಡಿ.

## ಸಮುದಾಯ ಆರೋಗ್ಯ ಕೇಂದ್ರ ಹೆಬ್ರಿ (ಕಾರ್ಕಳ ತಾ)

ಪ್ರಾರಂಭದಲ್ಲಿ ಸಬ್ಸಿಡಿಯರಿ ಆರೋಗ್ಯ ಕೇಂದ್ರವಾಗಿ ೧೯೫೫ರಲ್ಲಿ ಸ್ಥಾಪನೆಗೊಂಡು, ೧೯೯೩ರಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರವಾಗಿ ಪರಿವರ್ತನೆಯಾಯಿತು. ನಂತರ ೧೯೯೪-೯೫ರಲ್ಲಿ ಇದನ್ನು ೩೦ ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಸರ್ಕಾರ ಮೇಲ್ದರ್ಜೆಗೆ ಏರಿಸಿದೆ. ಈ ಆಸ್ಪತ್ರೆ ಅಧೀನಕ್ಕೆ ಒಳಪಟ್ಟಂತೆ ೧೨ ಉಪಕೇಂದ್ರಗಳಿವೆ. ಮೂರು ಜನ ವೈದ್ಯಾಧಿಕಾರಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ ಒಬ್ಬರು ಮಹಿಳಾ ವೈದ್ಯರಿದ್ದಾರೆ. ಒಬ್ಬ ಹಿರಿಯ ಆರೋಗ್ಯ ಸಹಾಯಕ ಹಾಗೂ ಇನ್ನಿತರ ೨೫ ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಸ್ಪತ್ರೆಯು ಹೆರಿಗೆ ವಿಭಾಗ, ಪ್ರಯೋಗಶಾಲೆ, ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದಿದೆ. ನೇತ್ರ ಚಿಕಿತ್ಸೆ ವಾರದಲ್ಲಿ ಒಂದು ದಿನ ಕೈಗೊಳ್ಳಲಾಗುತ್ತದೆ. ಆಸ್ಪತ್ರೆಯ ಸುತ್ತಮುತ್ತ ವಿಷಮಶೀತಜ್ವರ, ವಾಂತಿ-ಭೇದಿ, ಮಲೇರಿಯಾ, ಕ್ಷಯ ಇತ್ಯಾದಿ ಸಾಂಕ್ರಾಮಿಕಗಳು ಕಂಡುಬರುತ್ತಿದ್ದು ಈ ಆರೋಗ್ಯ ಕೇಂದ್ರದಲ್ಲಿ ಅವುಗಳಿಗೆ ವಿಶೇಷ ಚಿಕಿತ್ಸೆ ಲಭ್ಯವಿದೆ. ಕೋಷ್ಟಕ ೧೫.೧೪ ನೋಡಿ.

**ಕೋಷ್ಟಕ. ೧೫.೧೩ : ಸಮುದಾಯ ಆರೋಗ್ಯ ಕೇಂದ್ರ, ಶಿರ್ವ ೨೦೦೩-೦೬ನೇ ಸಾಲುಗಳಲ್ಲಿ ನೀಡಿದ ಸೇವಾ ವಿವರ**

ಸಂಖ್ಯೆಗಳಲ್ಲಿ

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೧೩,೯೯೩ | ೧೨,೭೮೮ | ೧೨,೪೮೭ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೯೧ | ೧೦೭ | ೧೨೯ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೦ | ೦ | ೦ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೪ | ೧ | ೧ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೧೭ | ೩೨ | ೨೬ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೧ | ೩ | ೩ |
| ೭) | 'ಕ್ಷ' ಕಿರಣ ಹಾಗೂ ಸ್ಕ್ರೀನುಗಳು | ೮ | ೭೬ | ೧೦ |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೋಪಿಕ್ ಸೇರಿದಂತೆ) | ೧೨೨ | ೧೧೦ | ೧೦೬ |
| ೨) | ವಂಕಿ ಅಳವಡಿಕೆ | ೧೦೧ | ೧೧೦ | ೯೯ |
| ೩) | ನಿರೋಧ ಬಳಕೆದಾರರು | ೬೪ | ೧೧೧ | ೮೩ |
| ೪) | ನುಂಗುವ ಮಾತ್ರೆ ಬಳಸುವವರು | ೪೮ | ೮೧ | ೮೨ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೩೧೧ | ೩೪೦ | ೩೩೨ |
| ೨) | ಪೋಲಿಯೋ ಹನಿ ನೀಡಿಕೆ | ೩೧೧ | ೩೪೦ | ೩೩೨ |
| ೩) | ಬಿ.ಸಿ.ಜಿ | ೨೯೯ | ೩೧೭ | ೩೧೨ |
| ೪) | ದಡಾರ | ೩೦೮ | ೩೧೩ | ೩೦೬ |
| ೫) | ಡಿ ಮತ್ತು ಟಿ | ೨೭೬ | ೨೬೮ | ೩೫೦ |
| ೬) | ಟಿಟಿ ತಾಯಂದಿರಿಗೆ | ೩೩೯ | ೩೫೮ | ೩೧೬ |
| ೭) | ಟಿಟಿ ೧೦ ವರ್ಷದವರಿಗೆ | ೩೩೫ | ೩೬೭ | ೩೫೪ |
| ೮) | ಟಿಟಿ (೧೬ ವರ್ಷ) | ೨೦೨ | ೪೩೬ | ೪೬೨ |

*ಆಧಾರ: ಸಮುದಾಯ ಆರೋಗ್ಯ ಕೇಂದ್ರ – ಶಿರ್ವ*

### ಸಮುದಾಯ ಆರೋಗ್ಯ ಕೇಂದ್ರ ನಿಟ್ಟೆ (ಕಾರ್ಕಳ ತಾಲೂಕು)

ಈ ಆರೋಗ್ಯ ಸಂಸ್ಥೆಯು ೧೯೬೦ರಲ್ಲಿ ಪ್ರಾರಂಭಗೊಂಡಿದ್ದು ಮುಂದೆ ೧೯೯೩ರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತಿತವಾಯಿತು. ನಂತರದಲ್ಲಿ ಸರ್ಕಾರ ಇದನ್ನು ೩೦ ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಿತು. ಈ ಆರೋಗ್ಯ ಕೇಂದ್ರವು ಹೆರಿಗೆ ವಿಭಾಗ, ಕ್ಷ-ಕಿರಣ ಘಟಕ; ಪ್ರಯೋಗಶಾಲೆ ಹಾಗೂ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದಿದೆ. ಈ ಆಸ್ಪತ್ರೆಯ ಅಧೀನದಲ್ಲಿ ಏಳು ಉಪಕೇಂದ್ರಗಳಿವೆ. ನೇತ್ರ ಚಿಕಿತ್ಸೆ, ದಂತ ಚಿಕಿತ್ಸೆ, ಸ್ತ್ರೀರೋಗ ಚಿಕಿತ್ಸೆ ಮುಂತಾದವು ಈ ಆಸ್ಪತ್ರೆಯಲ್ಲಿ ಲಭ್ಯವಿದೆ. ಸಾಮಾನ್ಯ ವೈದ್ಯಾಧಿಕಾರಿಗಳೂ ಸೇರಿದಂತೆ ಒಬ್ಬರು ಹಿರಿಯ ವೈದ್ಯ ತಜ್ಞರು, ಒಬ್ಬರು ಸ್ತ್ರೀರೋಗ ತಜ್ಞರು, ಒಬ್ಬ ದಂತ ವೈದ್ಯರು ಹಾಗೂ ಇತರ ಸಿಬ್ಬಂದಿಯ ಒಟ್ಟು ಸಂಖ್ಯೆ ೨೦ ಆಗಿದೆ. ಸಾಮಾನ್ಯವಾಗಿ

**ಕೋಷ್ಟಕ. ೧೫.೧೪ : ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

**ಸಂಖ್ಯೆಗಳಲ್ಲಿ**

| | **ಸೇವಾ ವಿವರ** | **೨೦೦೩-೦೪** | **೨೦೦೪-೦೫** | **೨೦೦೫-೦೬** |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೪೧,೩೪೨ | ೪೦೮೫೪ | ೪೨೬೩೧ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೧೮೮ | ೪೧೭ | ೪೫೮ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | – | – | ೫ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೨೯ | ೩೬ | ೩೧ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೨೧ | ೨೪ | ೨೬ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೩ | ೪ | ೨ |
| ೭) | 'ಕ್ಷ' ಕಿರಣ ಹಾಗೂ ಸ್ಕ್ರೀನುಗಳು | – | – | – |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೧೫೫ | ೧೬೦ | ೧೪೫ |
| ೨) | ವಂಕಿ ಅಳವಡಿಕೆ | ೯೮ | ೧೧೯ | ೧೧೨ |
| ೩) | ನಿರೋಧ ಬಳಕೆದಾರರು | ೧೪೩ | ೧೩೭ | ೧೬೮ |
| ೪) | ನುಂಗುವ ಮಾತ್ರೆ ಬಳಸುವವರು | ೧೩೩ | ೧೨೮ | ೧೫೧ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೩೮೮ | ೪೦೬ | ೪೦೧ |
| ೨) | ಪೋಲಿಯೋ ಹನಿ ನೀಡಿಕೆ | ೩೮೮ | ೪೦೬ | ೪೦೧ |
| ೩) | ಬಿ.ಸಿ.ಜಿ | ೩೮೮ | ೪೦೦ | ೩೯೮ |
| ೪) | ದಡಾರ | ೩೮೫ | ೩೯೭ | ೪೦೦ |
| ೫) | ಡಿ ಮತ್ತು ಟಿ | ೪೬೩ | ೩೭೭ | ೪೫೫ |
| ೬) | ಟಿಟಿ ತಾಯಂದಿರಿಗೆ | ೪೦೩ | ೪೧೮ | ೪೩೦ |
| ೭) | ಟಿಟಿ ೧೦ ವರ್ಷದವರಿಗೆ | ೪೮೨ | ೪೯೧ | ೪೮೪ |
| ೮) | ಟಿಟಿ (೧೬ ವರ್ಷ) | ೨೩೮ | ೩೯೫ | ೪೬೫ |

***ಆಧಾರ:*** *ಸಮುದಾಯ ಆರೋಗ್ಯ ಕೇಂದ್ರ ಹೆಬ್ರಿ.*

ಮಲೇರಿಯಾ ಹಾಗೂ ಫೈಲೇರಿಯಾ ಆಸ್ಪತ್ರೆ ಸುತ್ತಮುತ್ತಲಿನಲ್ಲಿ ಕಂಡುಬರುವ ಸಾಂಕ್ರಾಮಿಕರೋಗಗಳಾಗಿವೆ. ಈ ರೋಗಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

**ಮಲೇರಿಯಾ ಪತ್ತೆಗೆ ರಕ್ತ ಪರೀಕ್ಷೆ ನಡೆಸಿದ ವಿವರ ಈ ಕೆಳಗಿನಂತಿದೆ**

| **ವರ್ಷ** | **ಮಲೇರಿಯಾ ಪಿ.ವಿ.** | **ಪ್ರಕರಣಗಳು ಪಿ.ಎಫ್.** | **ಒಟ್ಟು** |
|---|---|---|---|
| ೨೦೦೩ | ೪೯ | ೯ | ೫೮ |
| ೨೦೦೪ | ೭ | ೧ | ೮ |
| ೨೦೦೫ | ೪ | ೧ | ೫ |

**ಕೋಷ್ಟಕ ೧೫.೧೫: ಆಸ್ಪತ್ರೆಯು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

ಸಂಖ್ಯೆಗಳಲ್ಲಿ

| | ಸೇವಾ ವಿವರ | ೨೦೦೩–೦೪ | ೨೦೦೪–೦೫ | ೨೦೦೫–೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೨೯,೭೩೧ | ೨೯,೧೦೪ | ೩೦,೨೯೪ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೩೮೫ | ೨೬೩ | ೨೮೭ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ೩೮ | ೩೯ | ೪೫ |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೧೦ | – | ೦೧ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೨೨ | ೨೦ | ೩೮ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೦೧ | ೦೦ | ೦೨ |
| ೭) | 'ಕ್ಷ' ಕಿರಣ ಹಾಗೂ ಸ್ಕ್ರೀನಿಂಗ್‌ಗಳು | ೨೯೭ | ೨೦೧ | – |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೋಪಿಕ್ ಸೇರಿದಂತೆ) | ೧೧೨ | ೧೦೭ | ೧೦೪ |
| ೨) | ವಂಕಿ ಅಳವಡಿಕೆ | ೧೦೬ | ೧೦೨ | ೧೦೮ |
| ೩) | ನಿರೋಧ ಬಳಕೆದಾರರು | ೫೫ | ೫೯ | ೫೮ |
| ೪) | ನುಂಗುವ ಮಾತ್ರೆ ಬಳಸುವವರು | ೪೯ | ೫೦ | ೫೨ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೨೭೧ | ೨೭೫ | ೨೭೮ |
| ೨) | ಪೋಲಿಯೋ ಹನಿ ನೀಡಿಕೆ | ೨೭೧ | ೨೭೫ | ೨೭೮ |
| ೩) | ಬಿ.ಸಿ.ಜಿ | ೨೮೦ | ೨೭೫ | ೨೭೮ |
| ೪) | ದಡಾರ | ೨೬೦ | ೨೬೨ | ೨೭೨ |
| ೫) | ಡಿ ಮತ್ತು ಟಿ | ೨೯೫ | ೨೮೫ | ೩೦೧ |
| ೬) | ಟಿಟಿ ತಾಯಂದಿರಿಗೆ | ೩೦೪ | ೩೧೦ | ೩೦೬ |
| ೭) | ಟಿಟಿ ೧೦ ವರ್ಷದವರಿಗೆ | ೩೫೪ | ೩೩೧ | ೩೩೬ |
| ೮) | ಟಿಟಿ (೧೬ ವರ್ಷ) | ೧೮೬ | ೩೩೭ | ೩೩೩ |

***ಆಧಾರ :** ಸಮುದಾಯ ಆರೋಗ್ಯಕೇಂದ್ರ, ನಿಟ್ಟೆ*

## ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಗ್ರಾಮೀಣ ಜನರಿಗೆ ಮೂಲಭೂತ ಆರೋಗ್ಯ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದು ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಸಾರ್ವಜನಿಕ ಆರೋಗ್ಯ ರಕ್ಷಣೆ, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಕೈಗೊಳ್ಳುವುದು ಹಾಗೂ ಕಾಲಕಾಲಕ್ಕೆ ಸರ್ಕಾರ ರೂಪಿಸುವ ರಾಷ್ಟ್ರೀಯ ಹಾಗೂ ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಈ ಕೇಂದ್ರಗಳ ಜವಾಬ್ದಾರಿಯಾಗಿದೆ. ಕಾಲರಾ, ಮಲೇರಿಯಾ, ಕ್ಷಯ, ಕುಷ್ಠದಂತಹ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ಮೂಲನಾ ಕಾರ್ಯಕ್ರಮಗಳನ್ನು ಸಹ ಆರೋಗ್ಯ ಕೇಂದ್ರಗಳು ಕೈಗೊಳ್ಳುತ್ತವೆ.

ಪ್ರಾರಂಭಿಕ ಹಂತದಲ್ಲಿ ಪ್ರತೀ ಆರೋಗ್ಯ ಕೇಂದ್ರವು ೩೦ ಸಾವಿರ ಜನಸಂಖ್ಯೆಯುಳ್ಳ ಪ್ರದೇಶಕ್ಕೆ ಒಂದರಂತೆ ಸ್ಥಾಪನೆಗೊಂಡಿದ್ದು, ಜನಸಂಖ್ಯೆ ಹೆಚ್ಚಿದಂತೆ ಸರ್ಕಾರ ಹಲವಾರು ಆರೋಗ್ಯ ಘಟಕಗಳನ್ನು ಸಹ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸಿದೆ. ಆರೋಗ್ಯ ಕೇಂದ್ರಗಳು ಪ್ರಾರಂಭಗೊಂಡಾಗ ಪ್ರತೀ ಕೇಂದ್ರದಲ್ಲಿ ಒಬ್ಬ ವೈದ್ಯಾಧಿಕಾರಿ, ನಾಲ್ಕು ದಾದಿಯರು, ಒಬ್ಬ ಆರೋಗ್ಯ ಸಂದರ್ಶಕ, ಒಬ್ಬ ಔಷಧಿ ವಿತರಕ ಹಾಗೂ ಕಿರಿಯ ಆರೋಗ್ಯ ಪರೀಕ್ಷಕರಿದ್ದು, ಕೇಂದ್ರವು ಆರು ಹಾಸಿಗೆಗಳನ್ನು ಹೊಂದಿರುತ್ತಿತ್ತು. ಆದರೆ ಇತ್ತೀಚೆಗೆ ಕ್ರಮೇಣ ಆರೋಗ್ಯ ಕಾರ್ಯಕ್ರಮಗಳು ಹೆಚ್ಚಿದಂತೆ ವೈದ್ಯರ ಸಂಖ್ಯೆಯನ್ನು ಎರಡಕ್ಕೆ ಹೆಚ್ಚಿಸಲಾಗಿದೆ. ಅದರಲ್ಲಿ ಒಬ್ಬ ಮಹಿಳಾ ವೈದ್ಯರ ಸೇವೆಯನ್ನು ಒದಗಿಸಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆರೋಗ್ಯ ಘಟಕಗಳ ಮೇಲ್ವಿಚಾರಣಾಧಿಕಾರವನ್ನು ಹೊಂದಿವೆ. ರಾಷ್ಟ್ರೀಯ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳ ಪರಿಣಾಮಕಾರಿ ನಿರ್ವಹಣೆಯಲ್ಲಿ ಸಹಯೋಗ ನೀಡುತ್ತವೆ. ತಾಲೂಕುವಾರು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ: ೧)*ಉಡುಪಿ ತಾಲೂಕು:* ಕೋಟ, ಪಡುಬಿದ್ರಿ, ಹಿರಿಯಡ್ಕ, ಪೇತ್ರಿ, ಅವರ್ಸೆ, ಪೆರ್ಣಂಕಿಲ, ಬಾರ್ಕೂರು, ಕಾಪು, ಕೊಕರ್ಣೆ, ಮಣಿಪುರ, ಕೊಳಲಗಿರಿ, ಸಾಲಿಗ್ರಾಮ, ಮುದರಂಗಡಿ, ಸ್ಯಾಬ್ರಕಟ್ಟೆ, ಮಲ್ಪೆ, ಕುಕ್ಕೆಹಳ್ಳೀ, ನೌಸ್ತಾನ, ಕೆಮ್ಮಣ್ಣು, ಹಿರೇಬೆಟ್ಟು, ಮೂಡಬೆಟ್ಟು, ಕೋಡಿಬೆಂಗ್ರೆ ಹಾಗೂ ಮಂದಾರ್ತಿ. ೨)*ಕುಂದಾಪುರ ತಾಲೂಕು:* ಸಿದ್ದಾಪುರ, ಬಿದ್ಕುಲ್‌ಕಟ್ಟೆ, ಕೊಲ್ಲೂರು, ಬೈಂದೂರು, ಮರವಂತೆ, ಶಿರೂರು, ಹಾಲಾಡಿ, ಗಂಗೊಳ್ಳಿ ಹಾಗೂ ಶಂಕರ ನಾರಾಯಣ, ಬೆಳ್ವೆ, ವಂಡ್ಸೆ, ಕುಂಭಾಸಿ, ನಾಡಾ, ಬಸ್ರೂರು, ಕಿರಿಮಂಜೇಶ್ವರ, ಕೆದೂರು, ಆಲೂರು ಹಾಗೂ ಕೂರ್ಡಿ. ೩) *ಕಾರ್ಕಳ ತಾಲೂಕು:* ಅಜೆಕಾರು, ಬೆಳ್ಮಣ್ಣು, ಪಳ್ಳಿ, ಹಿರ್ಗಾನ, ಮೊಳ್, ಬಜಗೋಳಿ, ದೊಂಡೆರಂಗಡಿ, ಬೈಲೂರು, ಸಚ್ಚೆರಿಪೇಟೆ ಮತ್ತು ಇರ್ವತ್ತೂರು. ಮೇಲೆ ಪಟ್ಟಿಮಾಡಿದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಒದಗಿಸುತ್ತಿರುವ ವೈದ್ಯಕೀಯ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಾತಿನಿಧಿಕವಾಗಿ ಉಡುಪಿ ತಾಲೂಕಿನ ಪಡುಬಿದ್ರಿ ಪ್ರಾಥಮಿಕ ಆರೋಗ್ಯ ಕೇಂದ್ರವು ನೀಡುತ್ತಿರುವ ವೈದ್ಯಕೀಯ ಸೇವಾ ವಿವರವನ್ನು ನೀಡಲಾಗಿದೆ.

## ಪ್ರಾಥಮಿಕ ಆರೋಗ್ಯ ಕೇಂದ್ರ – ಪಡುಬಿದ್ರಿ

ಇದು ಭಾರತ ಸರ್ಕಾರದ ಮಾದರಿ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ೧೯೭೨ರಲ್ಲಿ ಕಾರ್ಯಾರಂಭ ಮಾಡಿದ್ದು, ಆರು ಹಾಸಿಗೆಗಳ ಸ್ವಂತ ಕಟ್ಟಡ ಹೊಂದಿರುವ ಆರೋಗ್ಯಕೇಂದ್ರವಾಗಿದೆ. ಹೆರಿಗೆ ವಿಭಾಗ, ಪ್ರಯೋಗಶಾಲೆ ಹಾಗೂ ಲಘು ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದಿದ್ದು, ಈ ಆಸ್ಪತ್ರೆಯ ಅಧೀನದಲ್ಲಿ ಒಂಬತ್ತು ಉಪಕೇಂದ್ರಗಳಿವೆ. ಇಬ್ಬರು ವೈದ್ಯಾಧಿಕಾರಿಗಳೂ ಸೇರಿದಂತೆ ಒಟ್ಟು ೨೦ ಜನ ಸಿಬ್ಬಂದಿ ಇದ್ದಾರೆ. ಆಸ್ಪತ್ರೆಯ ಸುತ್ತಮುತ್ತ ಸಾಮಾನ್ಯವಾಗಿ ಮಲೇರಿಯಾ, ಫೈಲೇರಿಯಾ, ಕ್ಷಯ, ಕರಳುಬೇನೆಯಂತಹ ಸಾಂಕ್ರಾಮಿಕರೋಗಗಳು ಕಾಣಬರುತ್ತಿದ್ದು, ಕೇಂದ್ರದಲ್ಲಿ ಇವುಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಲೇರಿಯಾ ರೋಗ ಪತ್ತೆಗಾಗಿ ೨೦೦೪–೦೫, ೨೦೦೫–೦೬ರಲ್ಲಿ ಪಡೆದ ಹಾಗೂ ಪರೀಕ್ಷಿಸಿದ ರಕ್ತಲೇಪನಗಳು ಕ್ರಮವಾಗಿ ೩,೪೩೭ ಹಾಗೂ ೩,೪೭೨ ಹಾಗೂ ಖಚಿತಪಟ್ಟ ಮಲೇರಿಯಾ ಪ್ರಕರಣಗಳು ಕ್ರಮವಾಗಿ ಏಳು ಹಾಗೂ ೧೯ ಆಗಿದ್ದವು. ಅದರಂತೆ ಫೈಲೇರಿಯಾ ರೋಗ ಪತ್ತೆಗಾಗಿ ಪರೀಕ್ಷಿಸಲಾದ ರಕ್ತಲೇಪನಗಳ ಸಂಖ್ಯೆ ಕ್ರಮವಾಗಿ ೫೦೦ ಹಾಗೂ ೧೧೦೦ ಆಗಿದ್ದು ಫೈಲೇರಿಯಾ ಖಚಿತಗೊಂಡ ಸಂಖ್ಯೆ ಕ್ರಮವಾಗಿ ೧೨ ಹಾಗೂ ೩ ಆಗಿತ್ತು. ವಿವರಗಳಿಗೆ ಕೋಷ್ಟಕ ೧೫.೧೬ ನೋಡಿ.

## ಪ್ರಾಥಮಿಕ ಆರೋಗ್ಯ ಘಟಕಗಳು

ಜಿಲ್ಲೆಯಲ್ಲಿ ಈ ಹಿಂದೆ ಆರೋಗ್ಯ ಸೇವೆ ಒದಗಿಸುತ್ತಿದ್ದ ಸಂಯೋಜಿತ ಆಸ್ಪತ್ರೆಗಳು, ಮುನ್ಸಿಪಾಲ್ ಔಷಧಾಲಯಗಳು, ಸ್ಥಳೀಯ ನಿಧಿ ಆಸ್ಪತ್ರೆಗಳು ಹಾಗೂ ತಾಲೂಕು ಮಂಡಳಿ ಔಷಧಾಲಯಗಳನ್ನು ಸರ್ಕಾರವು ೧೯೭೮ರಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳೆಂದು ಕರೆದಿದೆ. ಈ ಆರೋಗ್ಯ ಘಟಕಗಳು ಗ್ರಾಮಾಂತರ ಜನರ ವೈದ್ಯಕೀಯ ಅವಶ್ಯಕತೆಯನ್ನು ಪೂರೈಸುವುದರ ಜೊತೆಗೆ ಸಾಂಕ್ರಾಂಮಿಕ ರೋಗಗಳ

**ಕೋಷ್ಟಕ ೧೫.೧೬ : ಪಡುಬಿದ್ರಿ ಪ್ರಾಥಮಿಕ ಆರೋಗ್ಯ ಕೇಂದ್ರವು ವಿವಿಧ ವರ್ಷಗಳಲ್ಲಿ ನೀಡಿದ ಸೇವಾ ವಿವರ**

ಸಂಖ್ಯೆಗಳಲ್ಲಿ

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೫೨,೨೦೭ | ೪೯,೮೦೮ | ೩೮,೫೩೪ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ೫೮೯ | ೬೮೩ | ೬೧೨ |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | - | - | - |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ೭೦ | ೬೯ | ೫೨ |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | ೧೪ | ೨೦ | ೨೨ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೩ | ೪ | ೪ |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೋಪಿಕ್ ಸೇರಿದಂತೆ) | ೧೧೩ | ೧೨೫ | ೧೩೧ |
| ೨) | ವಂಕಿ ಅಳವಡಿಕೆ | ೧೧೦ | ೧೦೦ | ೧೧೮ |
| ೩) | ನಿರೋಧ ಬಳಕೆದಾರರು | ೯೭ | ೮೯ | ೧೦೭ |
| ೪) | ನುಂಗುವ ಮಾತ್ರೆ ಬಳಸುವವರು | ೬೩ | ೬೩ | ೬೫ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೩೯೦ | ೩೮೦ | ೪೧೫ |
| ೨) | ಪೋಲಿಯೋ ಹನಿ ನೀಡಿಕೆ | ೩೯೦ | ೩೮೦ | ೪೧೫ |
| ೩) | ಬಿ.ಸಿ.ಜಿ | ೩೫೭ | ೩೮೫ | ೩೯೭ |
| ೪) | ದಡಾರ | ೩೮೨ | ೩೭೮ | ೩೯೩ |
| ೫) | ಡಿ ಮತ್ತು ಟಿ | ೪೫೪ | ೩೭೮ | ೪೧೮ |
| ೬) | ಟಿಟಿ ತಾಯಂದಿರಿಗೆ | ೩೭೪ | ೩೬೭ | ೪೨೩ |
| ೭) | ಟಿಟಿ ೧೦ ವರ್ಷದವರಿಗೆ | ೫೦೩ | ೪೬೦ | ೪೫೧ |
| ೮) | ಟಿಟಿ (೧೬ ವರ್ಷ) | ೪೩೪ | ೪೬೭ | ೫೫೦ |
| ೯) | ಮಲೇರಿಯಾ ರಕ್ತಲೇಪನ | ೪೦೩೨ | ೩೪೭೭ | ೩೪೭೨ |

***ಆಧಾರ:*** *ಪ್ರಾಥಮಿಕ ಆರೋಗ್ಯ ಕೇಂದ್ರ, ಪಡುಬಿದ್ರಿ*

ನಿಯಂತ್ರಣ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಗಳಲ್ಲಿ ಭಾಗಗೊಳ್ಳುವುದಲ್ಲದೆ, ಸಾರ್ವಜನಿಕ ಆರೋಗ್ಯ ಶಿಕ್ಷಣ ಹಾಗೂ ನಿರ್ವಹಣೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತವೆ. ಸಾಮಾನ್ಯವಾಗಿ ೧೫ ರಿಂದ ೨೦ ಸಾವಿರ ಜನಸಂಖ್ಯೆಗೆ ಒಂದರಂತೆ ಆರೋಗ್ಯ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಈ ಘಟಕಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಆರೋಗ್ಯ ಕಾರ್ಯಕ್ರಮಗಳ ವರದಿಯನ್ನು ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಳಿಸುವ ಜವಾಬ್ದಾರಿಯನ್ನು ಹೊಂದಿವೆ. ಪ್ರತೀ ಘಟಕಕ್ಕೆ ಒಬ್ಬ ವೈದ್ಯಾಧಿಕಾರಿ ಇದ್ದು ಅವರ ನೆರವಿಗೆ ಒಬ್ಬ ಔಷಧ ವಿತರಕರು, ಶುಶ್ರೂಷಕಿಯರು, ದಾದಿ ಹಾಗೂ ಸೇವಕ ವರ್ಗವಿದೆ. ಪ್ರತಿಯೊಂದು ಘಟಕವು ಹೆರಿಗೆ ವಿಭಾಗವನ್ನು ಹೊಂದಿದೆ. ಪ್ರಸ್ತುತ ಜಿಲ್ಲೆಯಲ್ಲಿ ಒಂಬತ್ತು ಪ್ರಾಥಮಿಕ ಆರೋಗ್ಯ ಘಟಕಗಳಿದ್ದು ಅವುಗಳು ಈ ಕೆಳಗಿನಂತಿವೆ. ಜಿಲ್ಲೆಯ ಕುಂದಾಪುರ ತಾಲೂಕಿನ ಕೋಡಿ, ಕೋಟೇಶ್ವರ, ಹಳ್ಳಿಹೊಳೆ, ಹಕ್ಲಾಡಿ ಮತ್ತು ಕಂಡ್ಲೂರು; ಕಾರ್ಕಳ ತಾಲೂಕಿನ ಕುಕ್ಕುಂದೂರು, ದುರ್ಗಾ, ನಂದಳಿಕೆ ಹಾಗೂ ಇನ್ನಾಗಳಲ್ಲಿವೆ. ಈ ಕೆಳಗೆ ಪರಿಚಯಾತ್ಮಕವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಕುಕ್ಕಂದೂರು (ಕಾರ್ಕಳ ತಾ) ನೀಡುತ್ತಿರುವ ವೈದ್ಯಕೀಯ ಸೇವೆಗಳ ಸಂಕ್ಷಿಪ್ತ ವಿವರ ನೀಡಲಾಗಿದ್ದು, ಇದೇ ಮಾದರಿಯಲ್ಲೇ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಘಟಕಗಳು ಸೇವೆ ಒದಗಿಸುತ್ತಿವೆ.

**ಪ್ರಾಥಮಿಕ ಆರೋಗ್ಯ ಘಟಕ, ಕುಕ್ಕಂದೂರು :** ಈ ಪ್ರಾಥಮಿಕ ಆರೋಗ್ಯ ಘಟಕ ೧೯೭೬ರಲ್ಲಿ ಕಾರ್ಯಾರಂಭವಾಗಿದ್ದು, ಆಸ್ಪತ್ರೆಯ ಅಧೀನದಲ್ಲಿ ಎರಡು ಉಪಕೇಂದ್ರಗಳಿವೆ. ವೈದ್ಯಾಧಿಕಾರಿಗಳೂ ಸೇರಿದಂತೆ ಏಳು ಜನ ಸಿಬ್ಬಂದಿ ಇದ್ದಾರೆ. ಪ್ರಸ್ತುತ ಕರ್ತವ್ಯನಿರತ ಸಿಬ್ಬಂದಿ ಸಂಖ್ಯೆ ಐದು ಆಗಿರುತ್ತದೆ. ಈ ಪ್ರಾಥಮಿಕ ಆರೋಗ್ಯ ಘಟಕದ ಆಯ್ದ ವರ್ಷಾವಾರು ಸೇವಾ ವಿವರವನ್ನು ನೀಡಲಾಗಿದೆ.

| | ಸೇವಾ ವಿವರ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|
| I | **ಸಾಮಾನ್ಯ ಸೇವೆಗಳು** | | | |
| ೧) | ಚಿಕಿತ್ಸೆ ಪಡೆದ ಹೊರ ರೋಗಿಗಳು | ೫೦೨೩ | ೪೦೧೨ | ೫೭೭೬ |
| ೨) | ಚಿಕಿತ್ಸೆ ಪಡೆದ ಒಳ ರೋಗಿಗಳು | ಸೌಲಭ್ಯವಿರುವುದಿಲ್ಲ (ಹಾಸಿಗೆ ಇರುವುದಿಲ್ಲ) | | |
| ೩) | ನಡೆಸಲ್ಪಟ್ಟ ಶಸ್ತ್ರಚಿಕಿತ್ಸೆ | ಸೌಲಭ್ಯವಿರುವುದಿಲ್ಲ (ಹಾಸಿಗೆ ಇರುವುದಿಲ್ಲ) | | |
| ೪) | ಪ್ರಸೂತಿ (ಹೆರಿಗೆ ಚಿಕಿತ್ಸೆ) | ಸೌಲಭ್ಯವಿರುವುದಿಲ್ಲ (ಹಾಸಿಗೆ ಇರುವುದಿಲ್ಲ) | | |
| ೫) | ಚಿಕಿತ್ಸೆ ಪಡೆದ ಕ್ಷಯರೋಗಿಗಳು | - | ೧೬ | ೧೭ |
| ೬) | ಚಿಕಿತ್ಸೆ ಪಡೆದ ಕುಷ್ಠ ರೋಗಿಗಳು | ೩ | ೨ | ೨ |
| ೭) | 'ಕ್ಷ' ಕಿರಣ ಹಾಗೂ ಸ್ಕ್ರೀನುಗಳು | ಸೌಲಭ್ಯವಿರುವುದಿಲ್ಲ (ಹಾಸಿಗೆ ಇರುವುದಿಲ್ಲ) | | |
| II | **ಕುಟುಂಬ ಕಲ್ಯಾಣ ಕಾರ್ಯಕ್ರಮ** | | | |
| ೧) | ಸಂತಾನಹರಣ ಶಸ್ತ್ರಚಿಕಿತ್ಸೆ (ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ ಹಾಗೂ ಲೆಪ್ರೊಸ್ಕೊಪಿಕ್ ಸೇರಿದಂತೆ) | ೫೩ | ೪೫ | ೫೮ |
| ೨) | ವಂಕಿ ಅಳವಡಿಕೆ | ೩೩ | ೩೮ | ೩೬ |
| ೩) | ನಿರೋಧ ಬಳಕೆದಾರರು | ೨೫ | ೨೦ | ೩೦ |
| ೪) | ನುಂಗುವ ಮಾತ್ರೆ ಬಳಸುವವರು | ೨೬ | ೨೪ | ೨೬ |
| III | **ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ** | | | |
| ೧) | ಡಿಪಿಟಿ ಲಸಿಕೆ | ೧೪೦ | ೧೪೦ | ೧೨೨ |
| ೨) | ಪೋಲಿಯೋ ಹನಿ ನೀಡಿಕೆ | ೧೪೦ | ೧೪೦ | ೧೨೨ |
| ೩) | ಬಿ.ಸಿ.ಜಿ | ೧೩೫ | ೧೧೧ | ೧೩೧ |
| ೪) | ದಡಾರ | ೧೨೧ | ೧೧೨ | ೧೪೨ |
| ೫) | ಡಿ ಮತ್ತು ಟಿ | ೧೩೦ | ೧೩೨ | ೧೩೮ |
| ೬) | ಓಟಿ (ತಾಯಂದಿರಿಗೆ) | ೧೪೪ | ೧೧೧ | ೧೫೧ |
| ೭) | ಓಟಿ (೧೦ ವರ್ಷದವರಿಗೆ) | ೧೪೨ | ೧೪೪ | ೧೪೯ |
| ೮) | ಓಟಿ (೧೬ ವರ್ಷದವರಿಗೆ) | ೫೦ | ೫೨ | ೬೨ |

***ಆಧಾರ :*** *ಪ್ರಾಥಮಿಕ ಆರೋಗ್ಯ ಕೇಂದ್ರ, ಕುಕ್ಕಂದೂರು*

## ಕುಟುಂಬ ಕಲ್ಯಾಣ

ಭಾರತದಲ್ಲಿ, ಕುಟುಂಬ ಕಲ್ಯಾಣ ಯೋಜನಾ ಕಾರ್ಯಕ್ರಮಗಳು ೧೯೫೨ರಲ್ಲಿ ಅಧಿಕೃತವಾಗಿ ಪ್ರಾರಂಭಗೊಂಡವು. ಅದಕ್ಕೂ ಮೊದಲು ೧೯೪೯ರಲ್ಲಿ ಭಾರತ ಕುಟುಂಬ ಯೋಜನಾ ಸಂಘ ಮುಂಬೈಯಲ್ಲಿ ಮೊಟ್ಟಮೊದಲು ಸ್ಥಾಪನೆಗೊಂಡಿತ್ತು. ಈ ಯೋಜನೆಯು ಒಂದು ರಾಷ್ಟ್ರೀಯ ಮಹತ್ವದ ನೀತಿಯಾಗಿದ್ದು, ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಸಾಧಿಸುವ ಉಪಯುಕ್ತ ಯೋಜನೆಯಾಗಿದೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಕಲ್ಯಾಣ ಯೋಜನೆ ಅಳವಡಿಸಿ ಬೃಹತ್ ಪ್ರಮಾಣದ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಜನನ ಪ್ರಮಾಣ ಕಡಿಮೆಗೊಳಿಸಿ ಜೀವನಮಟ್ಟ ಸುಧಾರಿಸುವ ಗುರಿ ಈ ಯೋಜನೆಯದ್ದಾಗಿದೆ. ಸಂತಾನೋತ್ಪತ್ತಿಯನ್ನು ೨೭.೭ ರಿಂದ ೨೧ ಕ್ಕೂ, ಮರಣ ಪ್ರಮಾಣವನ್ನು ೨೦ ರಿಂದ ೧೬ (ಪ್ರತೀ ಸಾವಿರಕ್ಕೆ)ಕ್ಕೂ ಇಳಿಸುವುದು ಹಾಗೂ

ಅರ್ಹ ದಂಪತಿಗಳ ರಕ್ಷಣಾ ದರವನ್ನು ೪೭.೬ ರಿಂದ ೬೦ಕ್ಕೂ ಹೆಚ್ಚಿಸುವ ಉದ್ದೇಶ ಸರ್ಕಾರದ್ದಾಗಿದೆ. ಈ ಯೋಜನೆ ರೀತ್ಯಾ ಕುಟುಂಬ ಕಲ್ಯಾಣ, ತಾಯಿಮಕ್ಕಳ ಆರೋಗ್ಯ ಕಾರ್ಯಕ್ರಮ, ಗ್ರಾಮೀಣ ಆರೋಗ್ಯ ಸೇವೆಗಳ ಮೂಲಕ ಆರೋಗ್ಯವಂತ ಜನಸಮುದಾಯದ ನಿರ್ಮಾಣ, ಸುಖಜೀವನಕ್ಕೆ ಚಿಕ್ಕಕುಟುಂಬದ ಪ್ರಾಮುಖ್ಯತೆಯನ್ನು ಜನರಲ್ಲಿ ಬಿಂಬಿಸಿ ಜನರು ಸ್ವಯಂ ಕುಟುಂಬ ಯೋಜನೆ ಅಂಗೀಕರಿಸುವಂತೆ ಜನರ ಮನ ಒಲಿಸುವುದು ಯೋಜನೆಯ ಉದ್ದೇಶವಾಗಿದೆ. ಕುಟುಂಬ ಯೋಜನೆ ಸೇವೆಯನ್ನು ಎಲ್ಲಾ ಸ್ಥಳೀಯ ಆಸ್ಪತ್ರೆ ಹಾಗೂ ಆರೋಗ್ಯ ಸಂಸ್ಥೆಗಳು ನೀಡುತ್ತವೆಯಲ್ಲದೆ ಗರ್ಭನಿರೋಧಕಗಳ ಬಗ್ಗೆ ತಿಳುವಳಿಕೆಯನ್ನು ನವದಂಪತಿಗಳಿಗೆ ನೀಡಲಾಗುತ್ತದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ರಮವನ್ನು ವಿಸ್ತರಣಾ ತಳಹದಿಯ ಮೇಲೆ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಲಾಯಿತು. ೧೯೬೬ ರಿಂದ ಪೂರ್ಣ ಪ್ರಮಾಣದ ಸೇವೆ ನೀಡಲು ಕುಟುಂಬ ಯೋಜನಾ ಇಲಾಖೆ ಅಸ್ತಿತ್ವಕ್ಕೆ ಬಂದಿತು. ೧೯೭೮ರಿಂದ ಜಿಲ್ಲೆಯ ಆರೋಗ್ಯ ಕಾರ್ಯಕ್ರಮಗಳ ಎಲ್ಲಾ ಜವಾಬ್ದಾರಿಗಳನ್ನು ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳು ಹೊಂದಿದ್ದಾರೆ.

ಜಿಲ್ಲೆಯ ವಿವಿಧ ಆರೋಗ್ಯ ಮತ್ತು ವೈದ್ಯಕೀಯ ಸಂಸ್ಥೆಗಳ ಮೂಲಕ ರಾಷ್ಟ್ರೀಯ ಹಾಗೂ ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉಸ್ತುವಾರಿಯನ್ನು ಈ ಕುಟುಂಬ ಕಲ್ಯಾಣಾಧಿಕಾರಿಗಳು ಹೊಂದಿರುತ್ತಾರೆ. ಸರ್ಕಾರವು ಪ್ರಾಥಮಿಕ ಆರೋಗ್ಯ ಘಟಕಗಳು, ಪ್ರಾಥಮಿಕ ಆರೋಗ್ಯ ಕೇಂದ್ರ–ಉಪಕೇಂದ್ರಗಳು, ಬಾಣಂತಿ ಸೇವಾ ಕೇಂದ್ರಗಳು, ನಗರ ಕುಟುಂಬ ಕಲ್ಯಾಣ ಕೇಂದ್ರಗಳ ಮೂಲಕ ಕುಟುಂಬ ಕಲ್ಯಾಣ ಸೇವೆಯನ್ನು ಒದಗಿಸುತ್ತಿದೆ. ತಾಯಿಮಕ್ಕಳ ಆರೋಗ್ಯ ಸೇವೆಗಳು ಸಹ ಕುಟುಂಬ ಕಲ್ಯಾಣ ಯೋಜನೆಯಲ್ಲಿ ಅಡಕಗೊಂಡಿವೆ. ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ಸಂಸ್ಥೆಗಳು ಸಕ್ರಿಯವಾಗಿ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ. ಜನಸಾಮಾನ್ಯರು ಸಹ ಸಕ್ರಿಯವಾಗಿ ಈ ಯೋಜನೆಯಲ್ಲಿ ಪಾಲ್ಗೊಂಡು ತನ್ಮೂಲಕ ಜನಸಂಖ್ಯಾಸ್ಫೋಟ ತಡೆಗಟ್ಟುವಲ್ಲಿ ಸಹಕಾರ ಬೆಂಬಲ ನೀಡುವಂತೆ ಮಾಡಲು ಸರ್ಕಾರ ಪ್ರೋತ್ಸಾಹ ಧನ ಹಾಗೂ ಬಹುಮಾನಗಳನ್ನು ನೀಡುತ್ತಿದೆ. ನಗರ ಕುಟುಂಬ ಕಲ್ಯಾಣ ಕೇಂದ್ರ ಉಡುಪಿ ಹಾಗೂ ನಗರ ಕುಟುಂಬ ಕಲ್ಯಾಣ ಕೇಂದ್ರ – ಕಾರ್ಕಳ ಇವು ನಗರ ಕುಟುಂಬ ಕಲ್ಯಾಣ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಸಾಧಿಸಿದ ಪ್ರಗತಿಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೫.೧೭ : ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ ಸಾಧಿಸಿದ ಪ್ರಗತಿ ವಿವರ**

| | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ |
|---|---|---|---|---|---|
| ವ್ಯಾಸೆಕ್ಟಮಿ | ೫ | ೧೧ | ೧೪ | ೧೮ | ೫೬೦೭ |
| ಟ್ಯುಬೆಕ್ಟಮಿಲ್ಯಾ ಪ್ರೊಸ್ಕೋಪಿಕ್ | ೫೧೭೧ | ೫೭೫೬ | ೫೬೫೬ | ೫೫೦೩ | ೪೪೩೯ |
| ವಂಕಿ ಅಳವಡಿಕೆ | ೩೬೪೩ | ೪೫೨೮ | ೪೫೪೦ | ೪೩೬೫ | ೩೦೨೩ |
| ನುಂಗುವ ಮಾತ್ರೆ | ೧೯೧೬ | ೨೨೨೬ | ೨೪೬೧ | ೨೪೪೧ | ೩೦೨೩ |
| ನಿರೋಧ ಬಳಕೆದಾರರು | ೨೦೫೧ | ೨೨೨೬ | ೨೪೬೧ | ೨೪೪೧ | – |

*ಆಧಾರ : ಜಿಲ್ಲಾ ಆರೋಗ್ಯ ಕೇಂದ್ರ ಹಾಗೂ ಕುಟುಂಬಕಲ್ಯಾಣಾಧಿಕಾರಿಗಳ ಕಛೇರಿ ಉಡುಪಿ.*

## ಕಾನೂನುಬದ್ಧ ಗರ್ಭಪಾತ ಸೇವೆ

ಪ್ರಸವೋತ್ತರ ಸೇವೆ, ಶಸ್ತ್ರಚಿಕಿತ್ಸೆ ಹಾಸಿಗೆಗಳ ಯೋಜನೆ ಹಾಗೂ ವೈದ್ಯಕೀಯ ಗರ್ಭಪಾತ ಇವು ಅಧಿಸೂಚಿತ ಯೋಜನೆಗಳಾಗಿದ್ದು ಈ ಎಲ್ಲಾ ಯೋಜನೆಗಳನ್ನು ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ

ಸೇರಿಸಲಾಗಿದೆ. ಈ ಯೋಜನೆಗಳ ಅನುಷ್ಠಾನವು ಜನಸಂಖ್ಯಾ ಸ್ಥಿರತೆಗೆ ಮತ್ತು ಫಲವತ್ತತೆಯ ನಿಯಂತ್ರಣಕ್ಕೆ ಅನುವು ಮಾಡಿಕೊಟ್ಟಿದೆ. ವೈದ್ಯಕೀಯ ಗರ್ಭಪಾತದ ರೀತ್ಯಾ ಅನಗತ್ಯ ಗರ್ಭಗಳನ್ನು ವೈದ್ಯಕೀಯವಾಗಿ ತಡೆಗಟ್ಟಲು ಸಾಧ್ಯ. ಸರ್ಕಾರ ಎಂ.ಟಿ.ಪಿ. (Medical Termination of Pregnency)ಗೆ ಅವಕಾಶ ನೀಡಿರುವ ಆರೋಗ್ಯ ಸಂಸ್ಥೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವಿವರ ಈ ರೀತಿ ಇದೆ.

ಸರ್ಕಾರಿ ಆಸ್ಪತ್ರೆಗಳಾದ ಉಡುಪಿ, ಕುಂದಾಪುರ ಮತ್ತು ಕಾರ್ಕಳ ಸಾರ್ವಜನಿಕ ಆಸ್ಪತ್ರೆಗಳು ಹಾಗೂ ಖಾಸಗಿ ಆಸ್ಪತ್ರೆಗಳಾದ ಆದರ್ಶ ಆಸ್ಪತ್ರೆ ಉಡುಪಿ, ಕೆನರಾ ಹೆಲ್ತ್ ಕೇರ್ ಸೆಂಟರ್ ಉಡುಪಿ, ಎನ್.ಆರ್.ಆಚಾರ್ಯ ಮೆಮೋರಿಯಲ್ ಆಸ್ಪತ್ರೆ, ಕುಂದಾಪುರ, ಅಮರ ಜ್ಯೋತಿ ಕ್ಲಿನಿಕ್ ಕಾರ್ಕಳ, ಅಂಜಲಿ ಆಸ್ಪತ್ರೆ ಬೈಂದೂರು, ಯಡ್ತರೆ ಆಸ್ಪತ್ರೆ ಕುಂದಾಪುರ, ಮಹೇಶ ಆಸ್ಪತ್ರೆ ಬ್ರಹ್ಮಾವರ, ಕೆ.ಎಂ.ಸಿ, ಮಣಿಪಾಲ, ಚಂದ್ರ ನರ್ಸಿಂಗ್ ಹೋಮ್ ಕುಂದಾಪುರ, ಮಲ್ಯ ನರ್ಸಿಂಗ್ ಹೋಮ್ ಕಾರ್ಕಳ, ಆನಂದ ನರ್ಸಿಂಗ್ ಹೋಮ್, ಬ್ರಹ್ಮಾವರ, ಗುರುಕೃಪಾ ಅಸ್ಪತ್ರೆ ಕಾರ್ಕಳ, ಸಿದ್ಧಿ ವಿನಾಯಕ ಆಸ್ಪತ್ರೆ, ಪಡುಬಿದ್ರಿ, ಗಾಂಧೀ ಆಸ್ಪತ್ರೆ ಉಡುಪಿ, ಡಾ. ಯು.ಬಿ.ಆಚಾರ್ಯ ನರ್ಸಿಂಗ್ಹೋಮ್ ಮಲ್ಪೆ, ಡಾ.ಎ.ವಿ.ಬಾಳಿಗ ಮೆಮೋರಿಯಲ್ ಹಾಸ್ಪಿಟಲ್ ದೊಡ್ಡಣಗುಡ್ಡೆ ಉಡುಪಿ, ಎಸ್.ಡಿ.ಎಂ. ಆಯುರ್ವೇದ ಆಸ್ಪತ್ರೆ ಉಡುಪಿ, ಶ್ರೀ ದುರ್ಗಾ ಮೆಟರ್ನಿಟಿ ಹಾಸ್ಪಿಟಲ್ ಹಾಲಾಡಿ, ಕಾಮತ್ ನರ್ಸಿಂಗ್ ಹೋಮ್ ಹಿಡಿಯಡ್ಕ, ಡಾ. ಟಿ.ಎಂ.ಎ.ಪೈ ರೋಟರಿ ಆಸ್ಪತ್ರೆ ಕಾರ್ಕಳ, ಸ್ಪಂದನ ಆಸ್ಪತ್ರೆ, ಕಾರ್ಕಳ, ಡಾ.ಟಿ.ಎಂ.ಎ.ಪೈ ಆಸ್ಪತ್ರೆ ಉಡುಪಿ, ಕಾಮತ್ ನರ್ಸಿಂಗ್ ಹೋಮ್, ಉಡುಪಿ, ಹೈಟೆಕ್ ಮೆಡಿಕೇರ್ ಹಾಸ್ಪಿಟಲ್ ಉಡುಪಿ, ಮಿತ್ರ ಹಾಸ್ಪಿಟಲ್ ಉಡುಪಿ, ಸೋನಿಯಾ ಕ್ಲಿನಿಕ್ ಮಣಿಪಾಲ, ಶ್ರೀಮಂಜುನಾಥ ಆಸ್ಪತ್ರೆ ಕುಂದಾಪುರ ಹಾಗೂ ಕಾರ್ಕಳ ನರ್ಸಿಂಗ್ ಹೋಮ್, ಕಾರ್ಕಳ.

### ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ

ಈ ಯೋಜನೆಯಡಿ, ಮಹಿಳೆಯರು ಗರ್ಭ ಧರಿಸಿದಾಗ, ಹೆರಿಗೆ ಹಾಗೂ ಬಾಣಂತನ ಕಾಲದಲ್ಲಿ ಅವರಿಗೆ ಉತ್ತಮವಾದ ಆರೋಗ್ಯ ಸೇವೆ ಒದಗಿಸವುದು ಹಾಗೂ ನವಜಾತ ಶಿಶುಗಳಿಗೆ ಆರೋಗ್ಯ ರಕ್ಷಣೆ ಒದಗಿಸುವ ಧ್ಯೇಯವನ್ನು ಆರೋಗ್ಯ ಇಲಾಖೆ ಹೊಂದಿದೆ. ತಾಯಿಮಕ್ಕಳ ಆರೋಗ್ಯ ಸೇವೆಯಲ್ಲಿ ಗರ್ಭಿಣಿ, ಸ್ತ್ರೀಯರಿಗೆ, ತಾಯಂದಿರಿಗೆ ಹಾಗೂ ಮಕ್ಕಳಿಗೆ ಬರಬಹುದಾದ ಆರು ಮಾರಕ ರೋಗಗಳನ್ನು ಮುಂಜಾಗ್ರತಾ ಕ್ರಮವಾಗಿ ತಡೆಗಟ್ಟಲು ರೋಗನಿರೋಧಕ ಚುಚ್ಚುಮದ್ದು ನೀಡುವುದು, ರಕ್ತಹೀನತೆ ಮತ್ತು 'ಎ' ಅನ್ನಾಂಗದ ಕೊರತೆಯಿಂದ ನರಳುವ ಮಹಿಳೆಯರಿಗೂ ಸೂಕ್ತ ಔಷಧಿ ಅನ್ನಾಂಗ ಮಾತ್ರೆಗಳನ್ನು ನೀಡುವುದು ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ. ತಾಯಿಮಕ್ಕಳ ಸ್ಥಿತಿಗತಿ ಉತ್ತಮಪಡಿಸಿ ಅವರ ಮರಣ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ.

ಈ ದಿಸೆಯಲ್ಲಿ ರಾಜ್ಯ ಸರ್ಕಾರವು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವನ್ನು ಜಿಲ್ಲಾ ವ್ಯಾಪಿ ಕೈಗೊಳ್ಳುತ್ತಿದೆ. ಜಿಲ್ಲಾ ಮಟ್ಟದಲ್ಲಿ ಲಸಿಕಾ ಅಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ನೇಮಿಸಲಾಗಿದೆ. ಗಂಟಲುಬೇನೆ, ನಾಯಿಕೆಮ್ಮು, ಧನುರ್ವಾಯು, ಪೋಲಿಯೋ, ಕ್ಷಯ, ದಡಾರ ಹಾಗೂ ವಿಷಮಶೀತಜ್ವರಗಳಂಥ ಮಾರಕ ರೋಗಗಳಿಂದ ಮಕ್ಕಳನ್ನು ರಕ್ಷಿಸಲು ನಿರೋಧಕ ಲಸಿಕೆ ನೀಡಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಘಟಕಗಳು ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಮಕ್ಕಳ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಉಪಕೇಂದ್ರ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ದಾದಿಯರಿಗೆ ೩೦ ದಿನಗಳ ತರಬೇತಿ ನೀಡಲಾಗುತ್ತದೆ. ಜಿಲ್ಲೆಯಲ್ಲಿ ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ಕಳೆದ ಏಳು ವರ್ಷಗಳಲ್ಲಿ ನೀಡಲಾದ ರೋಗ ನಿರೋಧಕ ಲಸಿಕಾ ಕಾರ್ಯಕ್ರಮದ ಪ್ರಗತಿ ವಿವರವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೫.೧೮ : ರೋಗ ನಿರೋಧಕ ಲಸಿಕಾ ಕಾರ್ಯಕ್ರಮದ ಪ್ರಗತಿ ವಿವರ**

| | ೧೯೯೮-೯೯ | ೧೯೯೯-೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ |
|---|---|---|---|---|---|---|---|
| ಡಿ.ಪಿ.ಟಿ | ೧೪೫೧೬ | ೧೨೯೦೭ | ೧೨೮೯೬ | ೧೫೪೧೪ | ೧೫೨೯೧ | ೧೪೭೨೩ | ೧೪೮೮೭ |
| ಪೋಲಿಯೋ | ೧೪೫೧೬ | ೧೧೯೦೭ | ೧೨೮೯೬ | ೧೫೪೧೪ | ೧೫೨೯೧ | ೧೪೭೨೩ | ೧೪೮೮೭ |
| ಡಿ.ಟಿ | ೧೨೪೭೭ | ೧೬೫೬೫ | ೧೭೪೫೭ | ೯೧೧೩೭ | ೧೭೬೦೦ | ೧೬೬೮೫ | ೧೪೫೮೮ |
| ಬಿ.ಸಿ.ಜಿ | ೧೪೪೮೬ | ೧೨೯೫೮ | ೧೨೪೯೮ | ೧೫೩೯೧ | ೧೪೯೬೧ | ೧೪೫೫೩ | ೧೫೦೧೬ |
| ದಡಾರ | ೧೩೧೨೮ | ೧೧೮೬೭ | ೧೨೩೪೯ | ೧೪೮೪೯ | ೧೪೮೪೯ | ೧೪೩೫೦ | ೧೪೪೫೫ |
| ಟಿ ಟಿ (ತಾಯಂದಿರಿಗೆ) | ೧೩೦೯೨ | ೧೩೧೭೩ | ೧೨೮೫೮ | ೧೬೨೦೯ | ೧೬೨೧೬ | ೧೫೬೨೯ | ೧೮೦೮ |
| ಟಿಟಿ (೧೦ ವರ್ಷ) | ೧೨೨೪೯ | ೧೨೧೮೨ | ೧೧೦೬೧ | ೧೨೭೭೬ | ೧೩೨೧೧ | ೯೭೫೦ | ೧೩೪೪೩ |
| ಓಟಿ (೧೬ ವರ್ಷ) | ೧೧೨೮೭ | ೧೨೧೮೨ | ೧೧೦೬೧ | ೧೨೭೭೬ | ೧೩೨೧೧ | ೯೭೫೦ | ೧೩೪೪೩ |

*ಆಧಾರ : ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಉಡುಪಿ*

## ಶಾಲಾಮಕ್ಕಳ ಆರೋಗ್ಯ ಕಾರ್ಯಕ್ರಮ

ಗ್ರಾಮಾಂತರ ಪ್ರದೇಶಗಳ ಎಲ್ಲಾ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಾಲಾಮಕ್ಕಳ ಆರೋಗ್ಯ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಈ ಕಾರ್ಯಕ್ರಮದಲ್ಲಿ ಎಲ್ಲಾ ಶಾಲಾಮಕ್ಕಳಿಗೆ ರೋಗ ತಪಾಸಣೆ ಹಾಗೂ ಚಿಕಿತ್ಸೆ, ಧನುರ್ವಾಯು ಮತ್ತು ಡಿಫ್ತೀರಿಯಾ ರೋಗಗಳ ವಿರುದ್ಧ ಲಸಿಕೆ ನೀಡುವುದನ್ನು ಆರೋಗ್ಯ ಕಾರ್ಯಕ್ರಮದಲ್ಲಿ ಸೇರ್ಪಡೆ ಮಾಡಿದೆ. ಶಾಲಾ ಮಕ್ಕಳಿಗೆ ಆರೋಗ್ಯ ಶಿಕ್ಷಣ ನೀಡುವುದು ಈ ಕಾರ್ಯಕ್ರಮದ ಒಂದು ಅಂಗವಾಗಿದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೇಂದ್ರಗಳು ಹಾಗೂ ಆರೋಗ್ಯ ಘಟಕಗಳು ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಕೈಗೊಂಡಿದ್ದು, ತಪಾಸಣೆಗೆ ಒಳಪಟ್ಟ ಶಾಲಾಮಕ್ಕಳ ಸಂಖ್ಯೆ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಮಕ್ಕಳ ಸಂಖ್ಯೆ ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ವರ್ಷ | ತಪಾಸಣೆಗೆ ಒಳಪಟ್ಟ ಮಕ್ಕಳು | ಚಿಕಿತ್ಸೆ ಪಡೆದ ಮಕ್ಕಳು |
|---|---|---|
| ೨೦೦೩-೦೪ | ೧,೯೭,೩೪೦ | ೧೭,೪೨೪ |
| ೨೦೦೪-೦೫ | ೧,೯೩,೨೬೦ | ೧೬,೫೭೮ |
| ೨೦೦೫-೦೬ | ೧,೭೧,೭೫೧ | ೧೫,೨೧೨ |

ಐ.ಸಿ.ಡಿ.ಎಸ್. ಯೋಜನೆಯು ಜಿಲ್ಲೆಯಲ್ಲಿ ೧೯೭೬ ರಿಂದ ಜಾರಿಯಲ್ಲಿದ್ದು, ೨೦೦೪-೦೫ರಲ್ಲಿ ಇದರ ಉಪಯೋಗ ಪಡೆದ ಮಕ್ಕಳ ಸಂಖ್ಯೆ ೭೦,೬೨೭.

ಜಿಲ್ಲೆಯಲ್ಲಿ ಶಿಶು ಸಂರಕ್ಷಣಾ ಕೇಂದ್ರಗಳು ಈ ಕೆಳಗಿನ ಆಸ್ಪತ್ರೆಗಳಲ್ಲಿವೆ. ೧) ಸರ್ಕಾರಿ ಆಸ್ಪತ್ರೆ ಉಡುಪಿ, ೨) ಸಾರ್ವಜನಿಕ ಆಸ್ಪತ್ರೆ, ಕುಂದಾಪುರ ೩) ಕೆ.ಎಂ.ಸಿ. ಮಣಿಪಾಲ ೪) ಟಿ.ಎಂ.ಎ. ಪೈ ರೋಟರಿ ಆಸ್ಪತ್ರೆ ಕಾರ್ಕಳ, ೫) ಡಾ. ಟಿ.ಎಂ.ಎ.ಪೈ ಆಸ್ಪತ್ರೆ ಉಡುಪಿ, ೬) ಆದರ್ಶ ಆಸ್ಪತ್ರೆ ಉಡುಪಿ ೭) ಹೈಕೆಟ್ ಆಸ್ಪತ್ರೆ ಉಡುಪಿ ೮) ಮಿಶನ್ ಆಸ್ಪತ್ರೆ ಉಡುಪಿ ಮತ್ತು ೯) ಸೋನಿಯ ಕ್ಲಿನಿಕ್ ಮಣಿಪಾಲ. ಐಸಿಡಿಎಸ್ ಯೋಜನೆಯು ಜಿಲ್ಲೆಯಲ್ಲಿ ೧೯೭೬ ರಿಂದ ಜಾರಿಯಲ್ಲಿ ಇದ್ದು ೨೦೦೪-೦೫ರಲ್ಲಿ ಯೋಜನೆಯ ಉಪಯೋಗ ಪಡೆದ ಮಕ್ಕಳ ಸಂಖ್ಯೆ ೭೦,೬೨೭ ಆಗಿರುತ್ತದೆ.

## ಪಲ್ಸ್ ಪೋಲಿಯೋ ಕಾರ್ಯಕ್ರಮ

ಭಾರತದಲ್ಲಿ ಪೋಲಿಯೋ ಪ್ರಕರಣಗಳು ಹೆಚ್ಚಾಗಿ ಕಂಡು ಬಂದ ಕಾರಣ ರೋಗದ ವಿರುದ್ಧ ತೀವ್ರತರನಾದ ಕ್ರಮದ ಅಗತ್ಯತೆ ಕಂಡುಬಂತು. ಈ ದಿಶೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಒಂದು ಅಗ್ರಮಾನ್ಯ ಕ್ರಮವಾಗಿ ದೇಶದಾದ್ಯಂತ ಕೈಗೊಳ್ಳಲಾಯಿತು. ಪೋಲಿಯೋ ಸಂಪೂರ್ಣ

ನಿವಾರಣೆಯಾಗಬೇಕೆಂಬ ವಿಶ್ವ ಆರೋಗ್ಯ ಸಂಸ್ಥೆಯ ಘೋಷಣೆ ಹಿನ್ನೆಲೆಯಲ್ಲಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಎರಡು ಸುತ್ತಿನ ಪೋಲಿಯೋ ನಿರೋಧಕ ಲಸಿಕೆ ನೀಡುವ ದೇಶವ್ಯಾಪಿ ಕಾರ್ಯಕ್ರಮವನ್ನು ಭಾರತ ಸರ್ಕಾರ ಹಮ್ಮಿಕೊಂಡು ಈ ಕಾರ್ಯಕ್ರಮವನ್ನು ೧೯೯೫ ರಿಂದಲೇ ಪ್ರಾರಂಭಗೊಳಿಸಿತು. ಇಲಾಖೆಯಿಂದ ವರ್ಷದ ಎರಡು ನಿರ್ದಿಷ್ಟ ದಿನಗಳಲ್ಲಿ ೦–೫ ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಪೋಲಿಯೋ ಹನಿ (ಲಸಿಕೆ) ನೀಡುವ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಕೈಗೊಳ್ಳಲಾಗುತ್ತದೆ. ಜಿಲ್ಲೆಯ ಎಲ್ಲಾ ಆರೋಗ್ಯ ಸಂಸ್ಥೆಗಳು, ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ಉಪಕೇಂದ್ರಗಳು ಇವೆಲ್ಲವೂ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ. ಉಡುಪಿ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ೦–೫ ವರ್ಷದೊಳಗಿನ ಮಕ್ಕಳಿಗೆ ನೀಡಲಾದ ಇತ್ತೀಚಿನ ಎರಡು ವರ್ಷಗಳ ಪೋಲಿಯೋ ಲಸಿಕಾ ಕಾರ್ಯದ ಪ್ರಗತಿ ಈ ಕೆಳಗಿನಂತಿದೆ.

| ವರ್ಷಗಳು | ಸಂಖ್ಯೆಗಳಲ್ಲಿ |
|---|---|
| ಏಪ್ರಿಲ್ ೨೦೦೫ | ೮೯,೫೯೭ |
| ಮೇ ೨೦೦೫ | ೯೦,೬೨೨ |
| ಏಪ್ರಿಲ್ ೨೦೦೬ | ೮೭,೪೯೬ |
| ಮೇ ೨೦೦೬ | ೯೦,೩೨೬ |

## ಪುನರ್ಜಲೀಕರಣ ಯೋಜನೆ

ಕಲುಷಿತ ಆಹಾರ ಹಾಗೂ ನೀರಿನ ಸೇವೆಯಿಂದ ಸಣ್ಣಮಕ್ಕಳು ವಾಂತಿ–ಭೇಧಿಗಳಿಂದ ಬಳಲಿದಾಗ ಅಂಥ ಮಕ್ಕಳ ದೇಹದಲ್ಲಿಯ ನೀರಿನ ಅಂಶವು ತೀವ್ರ ಕುಸಿದು ಸಾವಿಗೀಡಾಗುವ ಸಂದರ್ಭಗಳು ಉಂಟಾಗಬಹುದು. ಇಂಥ ಸಂದರ್ಭಗಳಲ್ಲಿ ಮಕ್ಕಳಿಗೆ ತುರ್ತಾದ ವೈದ್ಯಕೀಯ ಚಿಕಿತ್ಸೆ ಎಂದರೆ ಮೇಲಿಂದ ಮೇಲೆ ಲವಣಯುಕ್ತ ನೀರನ್ನು ಕುಡಿಸುವುದು, ನಂತರ ಆಸ್ಪತ್ರೆಗೆ ಕರೆದುಕೊಂಡು ವೈದ್ಯಕೀಯ ಚಿಕಿತ್ಸೆ ನೀಡುವುದು ಆಗಿದೆ. ಪೂರ್ವಭಾವಿಕ್ರಮವಾಗಿ ನೀಡುವ ಈ ಲವಣ ಯುಕ್ತ ನೀರನ್ನು ಓ.ಆರ್.ಎಸ್. (*Oral Re-hydration Solution*) ಎಂದು ಕರೆಯುತ್ತಾರೆ. ಇದು ಕಾಯಿಸಿ ಆರಿಸಿದ ನೀರಿನಲ್ಲಿ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಉಪ್ಪು ಹಾಗೂ ಸಕ್ಕರೆ ಬೆರೆಸಿ ತಯಾರಿಸಲಾದ ಮಿಶ್ರಣವಾಗಿದೆ. ಈ ಕಾರಣವಾಗಿ ಸಿದ್ಧಪಡಿಸಿದ ಲವಣ ಪೊಟ್ಟಣಗಳು ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರೆಯುತ್ತವೆ.

## ಭಾರತೀಯ ವೈದ್ಯಕೀಯ ಸಂಘ

ಭಾರತೀಯ ವೈದ್ಯಕೀಯ ಸಂಘವು ೧೯೪೨ರಲ್ಲಿ ಸ್ಥಾಪನೆಗೊಂಡಿತು. ದೇಶದ ವೃತ್ತಿ ನಿರತ ವೈದ್ಯರ ಸ್ವಯಂ ಸೇವಾ ಸಂಘವಾಗಿ ದೇಶದಾದ್ಯಂತ ತನ್ನ ಶಾಖೆಗಳನ್ನು ಇದು ಹೊಂದಿದೆ. ಪ್ರಸ್ತುತ ಜಿಲ್ಲೆಯಲ್ಲಿ ಈ ಸಂಘದ ಎರಡು ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಈ ಶಾಖೆಗಳು ಉಡುಪಿ ಹಾಗೂ ಕುಂದಾಪುರಗಳಲ್ಲಿದ್ದು ಕ್ರಮವಾಗಿ ೧೪೭ ಹಾಗೂ ೮೩ ಸದಸ್ಯರನ್ನು ಹೊಂದಿವೆ. ಸಂಘವು ವೃತ್ತಿ ನಿರತರಿಗಾಗಿ ವಿಶೇಷ ಉಪನ್ಯಾಸ, ಚರ್ಚಾಸ್ಪರ್ಧೆ ಸಾರ್ವಜನಿಕ ಆರೋಗ್ಯ ಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಲ್ಲದೆ ರಾಜ್ಯ ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಕುಟುಂಬ ಕಲ್ಯಾಣ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಹಾಗೂ ಇನ್ನಿತರ ಸಮೂಹ ಆರೋಗ್ಯ ಕಾರ್ಯಕ್ರಮಗಳಲ್ಲಿ ಸದಸ್ಯರು ಭಾಗವಹಿಸುವಂತೆ ಪ್ರೇರೆಪಿಸುವುದು ಜೊತೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ತಜ್ಞ ವೈದ್ಯ ಸೇವೆಯಂಥ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಏರ್ಪಡಿಸುವುದು ಆಗಿದೆ. ಸಾಂಸ್ಕೃತಿಕ ಚಟುವಟಿಕೆಯಾಗಿ ಡಾಕ್ಟರ್ಸ್ ಡೇ (ವೈದ್ಯರ ದಿನ) ಆಚರಣೆ ಸಹ ಸಂಘವು ಕೈಗೊಳ್ಳುತ್ತಿದೆ.

## ಔಷಧ ನಿಯಂತ್ರಣ

ನಿಯಂತ್ರಿತ ಬೆಲೆಯಲ್ಲಿ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಔಷಧಗಳು ದೊರೆಯುವಂತೆ ಮಾಡುವುದು ಔಷಧ ನಿಯಂತ್ರಣ ಇಲಾಖೆಯ ಉದ್ದೇಶವಾಗಿದೆ. ಇಲಾಖೆಯು ೧) ಆಡಳಿತ ಮತ್ತು ಅಮಲು ಜಾರಿ ೨) ಔಷಧ ಪರೀಕ್ಷಾ ಪ್ರಯೋಗಾಲಯ ಹಾಗೂ ೩) ಔಷಧ ಮತ್ತು ಶಾಸ್ತ್ರ (ಫಾರ್ಮಸಿ) ಎಂಬ ಮೂರು ವಿಭಾಗಗಳನ್ನು ಹೊಂದಿದೆ. ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ ೧೯೪೦ ಮತ್ತು ಅದರ ಮೇಲಿನ ನಿಯಮ ಮತ್ತು ನಿಬಂಧನೆಗಳನ್ನು ಜಾರಿಗೊಳಿಸುವ ಮೂಲಕ ಇಲಾಖೆಯು ರಾಜ್ಯದಲ್ಲಿ ತಯಾರಾಗುವ ಹಾಗೂ ಮಾರಾಟಕ್ಕೆ ಸರಬರಾಜು ಆಗುತ್ತಿರುವ ಔಷಧ ಮತ್ತು ಕಾಂತಿ-ವರ್ಧಕಗಳ ಬಗ್ಗೆ ಕಟ್ಟುನಿಟ್ಟಾದ ನಿಯಂತ್ರಣ ಕ್ರಮಗಳನ್ನು ಕೈಗೊಂಡು ನಿಗಧಿತ ಗುಣಮಟ್ಟದ ಔಷಧಿ, ಮಾತ್ರೆ ದೊರೆಯುವಂತೆ ಇಲಾಖೆ ಎಚ್ಚರವಹಿಸುತ್ತದೆ.

ಜಿಲ್ಲೆಯ ಜನರಿಗೆ ಉತ್ತಮಗುಣಮಟ್ಟದ ಔಷಧಿ ದೊರೆಯುವಂತೆ ಮಾಡುವ ದಿಸೆಯಲ್ಲಿ ಸರ್ಕಾರ ಔಷಧ ಪರಿವೀಕ್ಷಕರ ಕಾರ್ಯಾಲಯವನ್ನು ಉಡುಪಿಯಲ್ಲಿ ಪ್ರಾರಂಭಿಸಿದ್ದು ಇದು ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿರುತ್ತದೆ. ಜಿಲ್ಲೆಯ ಎಲ್ಲಾ ಔಷಧ ಹಾಗೂ ಕಾಂತಿವರ್ಧಕ ಘಟಕಗಳಿಗೆ ಮಾರಾಟ ಪರವಾನಿಗೆ ನೀಡುವುದು ನಕಲಿ ಔಷಧಿ ತಯಾರಿಕೆಯಲ್ಲಿ ನಿರತರಾದವರಿಗೆ ಎಚ್ಚರಿಕೆ ನೀಡುವುದು. ಅವರು ತಯಾರಿಸಿದ ಔಷಧಗಳ ಗುಣಮಟ್ಟ ಪರೀಕ್ಷಿಸುವುದು. ಗುಣಮಟ್ಟ ಹೊಂದಿರದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸುವುದು ಕಚೇರಿಯ ಕಾರ್ಯಚಟುವಟಿಕೆಯಾಗಿದೆ.

ಔಷಧಿ ಪರಿವೀಕ್ಷಕರು ಔಷಧ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಈ ಮುಂದೆ ಸೂಚಿಸಿದ ಅಧಿನಿಯಮ ಹಾಗೂ ನಿಬಂಧನೆಗಳನ್ನು ಅನುಸರಿಸಿ ಕಾರ್ಯನಿರ್ವಹಿಸುತ್ತದೆ.

೧) ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ ೧೯೪೦ ೨) ಔಷಧಗಳ (ಬೆಲೆ ನಿಯಂತ್ರಣ) ಆದೇಶ ೧೯೮೭ ೩) ಔಷಧಿಗಳು ಮತ್ತು ಮಂತ್ರೋಪಾಯ ಉಪಶಮನಗಳು (ಆಕ್ಷೇಪಣಾರ್ಹ ಜಾಹಿರಾತುಗಳು) ಅಧಿನಿಯಮ ೧೯೫೪ ೪) ಫಾರ್ಮಸಿ ಅಧಿನಿಯಮ ೧೯೪೮ ೫) ವಿಷವಸ್ತುಗಳ ಅಧಿನಿಯಮ ೧೯೧೯ ಮತ್ತು ಕರ್ನಾಟಕ ವಿಷ ವಸ್ತುಗಳ ಅಧಿನಿಯಮ - ೧೯೬೬ ೬) ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ ಹಾಗೂ ನಿಯಮಗಳಿಗೆ ಸಂಬಂಧಿಸಿದ ಮಾದಕ ಔಷಧಿಗಳ ಹಾಗೂ ಮಾನಸಿಕ ಭ್ರಮೆ ಉಂಟು ಮಾಡುವ ವಸ್ತುಗಳ ಅಧಿನಿಯಮ ೧೯೮೫.

ಪರಿವೀಕ್ಷಣಾ ಸಿಬ್ಬಂದಿಯು ನಕಲಿ ಔಷಧ ತಯಾರಕರನ್ನು ಕಾನೂನು ರೀತ್ಯಾ ಶಿಕ್ಷೆಗೆ ಒಳಪಡಿಸುವರು. ಉಡುಪಿ ಜಿಲ್ಲೆಯಲ್ಲಿ ೨೦೦೩-೦೪ ನೇ ಸಾಲಿನಲ್ಲಿ ೨೫೨ ಪರವಾನಗೆ ಪಡೆದ ನೊಂದಾಯಿತ ಔಷಧಿ ಅಂಗಡಿಗಳು ಹಾಗೂ ನಿಗದಿತ ವಿದ್ಯಾರ್ಹತೆ ಪಡೆದ ಔಷಧಿ ವ್ಯಾಪಾರಿಗಳಿದ್ದು, ಜಿಲ್ಲೆಯಲ್ಲಿ ಎರಡು ರಕ್ತನಿಧಿ (ಬ್ಲಡ್ ಬ್ಯಾಂಕ್)ಗಳು ಕಾರ್ಯನಿರ್ವಹಿಸುತ್ತವೆ. ಅದೇ ೨೦೦೮ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು ೩೮೬ (ಉಡುಪಿ ತಾಲ್ಲೂಕು-೨೨೬, ಕುಂದಾಪುರ ತಾಲ್ಲೂಕು-೧೨೦ ಹಾಗೂ ಕಾರ್ಕಳ ತಾಲ್ಲೂಕು-೪೦) ಔಷಧಿ ಅಂಗಡಿಗಳಿದ್ದು, ನಾಲ್ಕು ರಕ್ತನಿಧಿ (ಬ್ಲಡ್‌ಬ್ಯಾಂಕ್)ಗಳು ಕ್ರಿಯಾಶೀಲವಾಗಿದ್ದವು.

* * * * *